ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಫೆಬ್ರವರಿ 2021

ಬೆಲೆ ರೂ. 5/-



ತಿರುಮಲೆಯಲ್ಲಿ
ರಥಸಪ್ತಮಿ
19-02-2021




01-01-2021 ರಂದು ಆಂಗ್ಲ ಹೊಸ ವರ್ಷದ ಆರಂಭದ ಪ್ರಯುಕ್ತ ತಿ.ತಿ.ದೇ. ವತಿಯಿಂದ
ರಾಜ್ಯಪಾಲರಾದ ಗೌ॥ ಶ್ರೀ. ವಿಶ್ವಭೂಷಣ ಹರಿಚಂದನ್ ರವರು ಮತ್ತು ಆಂಧ್ರಪ್ರದೇಶದ ಮುಖ್ಯಮಂತ್ರಿ
ಗೌ॥ ಶ್ರೀ. ವೈ.ಎಸ್. ಜಗನ್ ಮೋಹನ್ ರೆಡ್ಡಿಯವರಿಗೆ ಶುಭಾಶಯಗಳನ್ನು ತಿಳಿಸುತ್ತಾ ಸ್ವಾಮಿಯವರ
ಪ್ರಸಾದವನ್ನು ನೀಡುತ್ತಿರುವ ತಿ.ತಿ.ದೇ. ಆಡಳಿತ ಮಂಡಳಿ ಅಧ್ಯಕ್ಷರು ಶ್ರೀ ವೈ.ವಿ. ಸುಬ್ಬಾರೆಡ್ಡಿಯವರು






15-01-2021 ಶುಕ್ರವಾರದಂದು ಆಂಧ್ರಪ್ರದೇಶದ ಗುಂಟೂರು ಜಿಲ್ಲೆಯ ನರಸರಾವ್ ಪೇಟೆಯಲ್ಲಿ ತಿ.ತಿ.ದೇ. ನಿರ್ವಹಿಸಿದ
ಗೋಪೂಜೆ (ಕಾಮಧೇನು) ಈ ಪೂಜಾಮಹೋತ್ಸವ ಕಾರ್ಯಕ್ರಮದಲ್ಲಿ ಆಂಧ್ರಪ್ರದೇಶದ ಮುಖ್ಯಮಂತ್ರಿ
ಗೌ॥ ಶ್ರೀ ವೈ.ಎಸ್. ಜಗನ್ ಮೋಹನ್ ರೆಡ್ಡಿಯವರು ತಿ.ತಿ.ದೇ. ಆಡಳಿತ ಮಂಡಳಿ ಅಧ್ಯಕ್ಷರು ಶ್ರೀ. ವೈ. ವಿ. ಸುಬ್ಬಾರೆಡ್ಡಿ ಯವರು
ಕಾರ್ಯನಿರ್ವಹಣಾಧಿಕಾರಿ ಡಾ॥ ಕೆ. ಎಸ್. ಜವಹರ್ ರೆಡ್ಡಿ, ಐ.ಎ.ಎಸ್., ರವರು
ಹಾಗೂ ಇತರ ಉನ್ನತಾಧಿಕಾರಿಗಳು ಪಾಲ್ಗೊಂಡರು.

# ಭಗವದ್ಗೀತೆ



ಅಥವ್ಯವಸ್ಥಿತಾನ್ ದೃಷ್ಟ್ವಾ ಧಾರ್ತ ರಾಷ್ಟ್ರಾನ್ ಕಪಿ ಧ್ವಜಃ;
ಪ್ರವೃತ್ತೇ ಶಸ್ತ್ರ ಸಂಪಾತೇ ಧನುರುದ್ಯಮ್ಯ ಪಾಂಡವಃ
ಹೃಷಿಕೇಶಂ ತದಾ ವಾಕ್ಯಂ ಇದಮಾಹ ಮಹೀಪತೇ
ಸೇನೆಯೋರುಭಯೋರ್ಮಧ್ಯೇ ರಥಂ ಸ್ಥಾಪಯ ಮೇಽಚ್ಯುತ॥

(ಅಧ್ಯಾಯ - 1, ಶ್ಲೋಕ - 20,21)

## ತಾತ್ಪರ್ಯ

ಓ ಧೃತರಾಷ್ಟ್ರ, ಸಜ್ಜಾಗಿ ಎದುರಿಗೆ ನಿಂತಿರುವ ಕೌರವರನ್ನು ನೋಡಿ ಕಪಿಧ್ವಜನಾದ ಅರ್ಜುನನು ಹೊಡೆತಕ್ಕೆ ಮೊದಲು ಮಾಡಬೇಕಾದ ಆ ಸಮಯದಲ್ಲಿ ಗಾಂಡೀವವನ್ನು ಕೈಗೆ ತೆಗೆದುಕೊಂಡು, ಕೃಷ್ಣನನ್ನು ಕುರಿತು ಈ ಮಾತನ್ನು ಹೇಳಿದನು. ಅರ್ಜುನ ಎರಡು ದಂಡುಗಳ ನಡುವೆ ನನ್ನ ತೇರನ್ನು ನಿಲಿಸು.



ಬಾರಯ್ಯ ಶ್ರೀನಿವಾಸ ಭಕ್ತರ ಬಳಿಗೆ
ತೋರಯ್ಯ ನಿನ್ನ ದಯ ತೋಯಜಾಂಬಕನೆ

ದುರುಳರ ತರಿವಂಥ ವರಚಕ್ರಧಾರಿ
ಪರಮಾತ್ಮ ಪರಬೊಮ್ಮ ಪರರಿಗುಪಕಾರಿ

ಅರಣ್ಯದಿ ಮೊರೆಯಿಟ್ಟ ಕರಿರಾಜಗೊಲಿದಿ
ತರಳ ಪ್ರಹ್ಲಾದನ್ನ ವೈರಿಯ ಮುರಿದಿ

ವರಶೇಷಗಿರಿಯಲ್ಲಿ ನಿರುತ ನೀನಿರುವಿ
ಹರಿದಾಸರು ಕರೆದರೆ ಎಲ್ಲಿದ್ದರೂ ಬರುವಿ

ಅನಂತನಾಮನೆ ನಿನ್ನ ಅನಂತ ಸದ್ಗುಣವ
ನೆನವರಿಗೊಲಿವಂಥ ಪವಮಾನನೀಶಾ

ಅಜಭವಾಧಿಪ ನೀನು ವಿಜಯ ಸಾರಥಿಯೆ
ತ್ರಿಜಗವಂದಿತ ಈಸ ವಿಜಯವಿಠಲನೆ

- ಶ್ರೀ ವಿಜಯದಾಸರು

(ಆರನೆಯ ದಶಕ)

# ದಯಾ ಶತಕಮ್




- ಎನ್. ನರಸಿಂಹಾಚಾರ್ಯ

**ಆಪಿ ಕರುಣೇ ಜನಸ್ಯ ಕರುಣೆಂದು ವಿಭೂಷಣತಾಮಪಿ ಕಮಲಾಸನತ್ವಮಪಿ ಧಾಮ ವೃಷಾದ್ರಿ ಪತೇಃ।**
**ತರತಮತಾವಶೇನ ತನುತೇ ನನು ತೇ ವಿಶತಿಃ ಪರಹಿತವರ್ಷ್ಮಣಾ ಪರಿಪಚೇಳಿಮಕೇಳಿಮತಿೀ ॥ ೫೩॥**

ಹಿಂದಿನ ಪದ್ಯದಲ್ಲಿ ದಯೆಯ ಕಟಾಕ್ಷದಿಂದ ಸಂಸಾರಿಚೇತನದ ಪಾಪವೆಲ್ಲವೂ ಪರಿಹೃತವಾಗುವುದೆಂದು ನಿರೂಪಿಸಿ, ಈ ಪದ್ಯದಲ್ಲಿ ಬ್ರಹ್ಮ ರುದ್ರಾದಿಪದವಿಗಳೂ ದಯೆಯ ಪ್ರಸರಣವನ್ನು ಅನುಸರಿಸಿ ದೊರಕುವಂಥವೆಂದು ನಿರೂಪಿಸುತ್ತಾನೆ.

"ಲೋಕೋ ಭಿನ್ನರುಚಿಃ" ಎಂಬಂತೆ ಪ್ರಪಂಚದಲ್ಲಿರುವ ಜನರು ಭಿನ್ನರುಚಿಯುಳ್ಳವರು. ಅವರವರ ಇಷ್ಟ ಬಂದಂತೆ ಪುಣ್ಯ ಕರ್ಮಗಳನ್ನು ಮಾಡಿ ಬೇಕಾದ ಫಲಗಳನ್ನು ಪಡೆಯುವ ಪ್ರಯತ್ನವುಳ್ಳವರು. ಸ್ವರ್ಗವೇ ಉತ್ತಮ ಫಲವೆಂದು ಭಾವಿಸುವವರು ಕೆಲವರಾದರೆ ಮೋಕ್ಷವೇ ಪರಮಪುರುಷಾರ್ಥವೆನ್ನುವವರು ಕೆಲವರು. ಬ್ರಹ್ಮರುದ್ರಾದಿಗಳ ಅಧಿಕಾರಸ್ಥಾನವನ್ನು ಅಪೇಕ್ಷಿಸುವವರು ಹಲವರಾದರೆ, ಪರಮಾತ್ಮನ ಸಾನಿಧ್ಯವನ್ನು ಹೊಂದಿ ಪರಮಾನಂದಭರಿತವಾಗಬೇಕೆನ್ನುವವರು ಹಲವರು ಹೀಗೆ ಅವರವರ ರುಚಿಗಳಿಗೂ ಕರ್ಮಗಳಿಗೂ ಅನುಸಾರವಾಗಿ ಆಯಾಯ ಪದವಿಗಳು ದೊರಕುವುದೂ ಸ್ವಾಭಾವಿಕ. ಒಂದು ಸಣ್ಣ ದೀಪವಿದ್ದರೆ ಅದರ ಪ್ರಕಾಶವು ಸ್ವಲ್ಪ ದೂರ ಹರಡುವುದು ಅದಕ್ಕಿಂತಲೂ ಪ್ರಕಾಶಮಾನವಾದ ದೊಡ್ಡದೀಪವಿದ್ದರೆ ಇನ್ನೂ ಹೆಚ್ಚು ದೂರ ಇದೇ ಕ್ರಮದಲ್ಲಿ ಅದರ ಪರಿಮಾಣವು ಹೆಚ್ಚು ಕಡಿಮೆಯಾಗಿದ್ದಂತೆ ಪ್ರಕಾಶವೂ ಹೆಚ್ಚು ಕಡಿಮೆಯಾಗಿ ವ್ಯಾಪಿಸುವಂತೆ, ಎಲೈ ದಯೆಯೇ ! ಆಶ್ರಿತರ ಅಭಿರುಚಿ ಮತ್ತು ಪ್ರಯತ್ನಗಳನ್ನು ಅನುಸರಿಸಿ ಅಲ್ಲಿಯವರೆಗೆ ವ್ಯಾಪಿಸಿ ಅವರಿಗೆ ಬೇಕಾದ ರುದ್ರನ ಪದವಿಯನ್ನೋ, ಇಂದ್ರನ ಪದವಿಯನ್ನೋ, ಬ್ರಹ್ಮನ ಪದವಿಯನ್ನೋ ಕೊನೆಗೆ ಪರಮ ಪುರುಷನಾದ ಶ್ರೀನಿವಾಸನ ಸಾನಿಧ್ಯವನ್ನೋ ಕರುಣಿಸುವೆಯಲ್ಲವೆ! ಏಕೆಂದರೆ, ಪರಹಿತವೆಂಬುದೇ ನಿನಗೆ ಶರೀರ. ಅದರಿಂದ ನಿನ್ನ ಲೀಲೆಯು ಅತ್ಯಂತ ಪರಿಪಕ್ವವೂ ಅತ್ಯದ್ಭುತವೂ ಆದುದೆಂದು ಆಚಾರ್ಯರು. ಹೃದಯಂಗಮವಾಗಿ ಚಿತ್ರಿಸಿರುತ್ತಾರೆ.

"ಪರಿಪಚೇಳಿಮಕೇಳಿಮತಿ"- ಎನ್ನುವುದರಿಂದ ಪರಮಾತ್ಮನ ಲೀಲೆಯು ವಿಚಿತ್ರವಾದುದೆಂದೂ, ತನ್ನ ಆ ಲೀಲೆಯನ್ನು ನಿರ್ವಹಿಸುವುದಕ್ಕಾಗಿಯೂ, ಜನರನ್ನು ಸಂಸಾರ ಸಮುದ್ರದಿಂದ ಉದ್ಧರಿಸುವುದಕ್ಕಾಗಿಯೂ ಅನೇಕ ವಿಧವಾದ ಶಾಸ್ತ್ರರೂಪವಾದ ಅವಲಂಬನವನ್ನು ಕಲ್ಪಿಸಿರುವನು. ಅವುಗಳಲ್ಲಿ ಮೋಹಕರವಾದವು ಕೆಲವು ಪಾರಮಾರ್ಥಿಕವಾದುದು ಕೆಲವು. ಅಲ್ಪವೂ ಅಸ್ಥಿರವೂ ಆದ ಫಲವನ್ನು ಕೊಡುವಂಥವು ಮೋಹಕರವು ಸಾರತಮವೂ ಸ್ಥಿರವೂ ಆದ ಫಲವನ್ನು ಕೊಡುವುದು ಪಾರಮಾರ್ಥಿಕವಾದುದು ಹಿಂದೆ ಹೇಳಿದಂತೆ ಭಿನ್ನರುಚಿಯುಳ್ಳ ಜನರು ಅವರವರ ರುಚಿಗೆ ಅನುಸಾರವಾಗಿ ಆಯಾಯ ಶಾಸ್ತ್ರಗಳನ್ನು ಅವಲಂಬಿಸಿ ಆಯಾಯ ಫಲಗಳನ್ನು ಪಡೆಯುವುದೂ ಸಹ ಪರಮಾತ್ಮನ ದಯೆಯಿಂದಲೇ ಎಂಬುದು ಇಲ್ಲಿ ಶಾಸ್ತ್ರಾರ್ಥ.

ಪ್ರಪನ್ನನಾದವನು ಪಾರಮಾರ್ಥಿಕಶಾಸ್ತ್ರವನ್ನೇ ಅವಲಂಬಿಸಬೇಕೆಂದು ಇಲ್ಲಿ ಸೂಚಿಸಿದಂತಾಯಿತು.

ವೇಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋದೇವೋ ನ ಭೂತೋ ನ ಭವಿಷ್ಯತಿ


ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಶ್ರೀ ಶಾರ್ವರಿನಾಮ ಸಂವತ್ಸರ ಪುಷ್ಯ - ಮಾಘಮಾಸ ಸಂಚಿಕೆ

ಸಂಪುಟ - 51 ಫೆಬ್ರವರಿ 2021 ಸಂಚಿಕೆ - 9

## ವಿಷಯಸೂಚಿಕೆ


| | | |
|---|---|---|
| ಸಂಪಾದಕೀಯ | | 6 |
| ವಿದ್ವತ್ತು ವಿವೇಕಗಳ ಸಂಗಮ ಭೀಷ್ಮ | - ಡಾ॥ ಪ್ರದೀಪಕುಮಾರ ಹೆಬ್ರಿ | 7 |
| ಅಗಸ್ತ್ಯ ಮಹಾಮುನಿಗಳು | - ಡಾ ॥ ಸಿ. ಎಸ್. ಊರ್ಮಿಳಾ | 11 |
| ಶ್ರೀನಿವಾಸನ ಕಂಡ ಶ್ರೀ ವ್ಯಾಸರಾಯರು | - ಡಾ ॥ ರಾಮಚಂದ್ರ ದಾಸ್ ಸಿ.ಜೆ. | 13 |
| ಕನಕಗಿರಿಯ ಕನಕಾಚಲಪತಿ ದೇವಾಲಯ | -ಕೆಂಗೇರಿ ಚಕ್ರಪಾಣಿ | 17 |
| ಪವಿತ್ರತೆಯ ಸರ್ವಶ್ರೇಷ್ಠ ಮಾಘಮಾಸ | - ಶ್ರೀಮತಿ ಗಿರಿಜಾ ಎಸ್.ದೇಶಪಾಂಡೆ | 19 |
| ರಥಸಪ್ತಮಿ ಮಹತ್ವ ಮತ್ತು ಪೌರಾಣಿಕ ಹಿನ್ನೆಲೆ | - ಶ್ರೀಮತಿ ಕೆ.ವಿ. ಪದ್ಮಾವತಿ | 20 |
| ಧರ್ಮ - ಪ್ರವಾಸ - ದಾಸಸಾಹಿತ್ಯ | - ಡಾ॥ ವಾಸುದೇವ ಅಗ್ನಿಹೋತ್ರಿ | 24 |
| ಗರುಡ ಜಯಂತಿ ಹೀಗೊಂದು ಚಿಂತನೆ | -ಡಾ॥ ಗುರುರಾಜ ಪೋಶೆಟ್ಟಿ ಹಳ್ಳಿ | 31 |
| ದಾಸಸಾಹಿತ್ಯದಲ್ಲಿ ಭಕ್ತಿ ಝೇಂಕಾರ | - ಡಾ॥ ಮಧುಸೂಧನಾಚಾರ್ಯ ಜೋಷಿ | 35 |
| ಭಕ್ತಿ ಮಾರ್ಗದ ಪ್ರತಿಪಾದಕರು ಶ್ರೀ ಗೋಪಾಲದಾಸರು | - ಡಾ॥ ಲಕ್ಷ್ಮೀಕಾಂತ ವಿ. ಮೊಹರೀರ | 37 |
| ದಾಳಿಂಬೆಯಲ್ಲಿ ಬೆರೆತಿರುವ ಔಷಧೀಯ ಗುಣಗಳು | - ಶ್ರೀಮತಿ | 40 |
| ಆಚಾರ್ಯಮಧ್ವರ ಉನ್ನತ ಏಕಶಿಲಾಪ್ರತಿಮೆ | -ಶ್ರೀಮತಿ ಸುಮ ಚಂದ್ರಶೇಖರ್ | 42 |
| ಭೀಷ್ಮ ಏಕಾದಶಿ ! | - ವೆಂಕಟರಾಘವನ್ ಎಸ್. | 44 |
| ದಾಸರೆಂದರೆ ಪುರಂದರದಾಸರಯ್ಯ | - ಶ್ರೀ ಕರಿಗಿರಿ ಗೋಪಾಲಕೃಷ್ಣ | 48 |
| ನೀತಿ ಕಥೆ - ಆಸೆ ಮತ್ತು ದುರಾಸೆ | -ಶ್ರೀಮತಿ ಸುಧಾಮಧುಸೂದನ್ | 51 |
| ಚಿತ್ರ ಕಥೆ - ಉತ್ತಮ ಪುತ್ರ ಭೀಷ್ಮ | -ಶ್ರೀಮತಿ | 52 |
| ಕ್ವಿಜ್ | -ಶ್ರೀಮತಿ ಸೂರ್ಯವಂಶಿ | 54 |


ಮುಖಚಿತ್ರ - ಸೂರ್ಯಪ್ರಭವಾಹನದಲ್ಲಿ ಮಲೆಯಪ್ಪಸ್ವಾಮಿ ಉತ್ಸವಮೂರ್ತಿ, ತಿರುಮಲೆ
ಹಿಂಬದಿಚಿತ್ರ - ಶ್ರೀದೇವಿ ಭೂದೇವಿ ಸಮೇತ ಶ್ರೀ ಲಕ್ಷ್ಮೀ ವೆಂಕಟೇಶ್ವರಸ್ವಾಮಿ, ದೇವುನಿ ಕಡಪ


**ಗೌರವ ಸಂಪಾದಕರು**
ಡಾ ॥ ಕೆ. ಎಸ್. ಜವಹರ್ ರೆಡ್ಡಿ , ಐ.ಎ.ಎಸ್
ಕಾರ್ಯನಿರ್ವಹಣಾಧಿಕಾರಿ,ತಿ.ತಿ.ದೇ.,ತಿರುಪತಿ.

**ಪ್ರಧಾನ-ಸಂಪಾದಕರು**
ಆಚಾರ್ಯ.ಕೆ.ರಾಜಗೋಪಾಲನ್, ಪಿ.ಎಚ್.ಡಿ.

**ಸಂಪಾದಕರು**
ಡಾ॥ ವಿ.ಜಿ.ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.

**ಮುದ್ರಣ**
ಶ್ರೀ .ಪಿ. ರಾಮರಾಜು , ಎಮ್.ಎ.
ವಿಶೇಷಾಧಿಕಾರಿ,
(ಪ್ರಕಾಶನ ಮತ್ತು ಮುದ್ರಣಾಲಯ),
ತಿ.ತಿ.ದೇ.,ಮುದ್ರಣಾಲಯ,ತಿರುಪತಿ.

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ -ಕಾರ್ಯಾಲಯ
ತಿ.ತಿ.ದೇ.ತಿರುಪತಿ.

**ಛಾಯಗ್ರಹಣ:**
ಶ್ರೀ ಪಿ.ಎನ್.ಶೇಖರ್,
ಛಾಯಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ,
ಸಹಾಯ ಛಾಯಗ್ರಹಣ ತಿ.ತಿ.ದೇ.



ಲೇಖನ / ಚಂದಾ ಮಿಕ್ಕ ವಿವರಗಳಿಗೆ
ಪ್ರಧಾನ ಸಂಪಾದಕರು
ತಿ.ತಿ.ದೇವಸ್ಥಾನಗಳು,
ಕೆ.ಟಿ.ರಸ್ತೆ. ತಿರುಪತಿ - 517 507

**ಇತರ ವಿವರಗಳಿಗೆ**
ಕಾರ್ಯಾಲಯ : 0877 - 2264543
ಡಿ.ಟಿ.ಪಿ. ವಿಭಾಗ : 0877 - 2264359
ಸಂಪಾದಕರು : 0877 - 2264360

24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333
ಸಲಹೆ/ದೂರುಗಳಿಗೆ ಟೋಲ್‌ಫ್ರೀ ಸಂಖ್ಯೆ:
1800-425-4141
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri_helpdesk@tirumala.org
ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
www.tirumala.org ಮೂಲಕ ವೀಕ್ಷಿಸಬಹುದು.



| | |
|---|---|
| ಬಿಡಿ ಪ್ರತಿ | ರೂ. 05/- |
| ವಾರ್ಷಿಕ ಚಂದಾ | ರೂ. 60/- |
| ಆಜೀವ ಚಂದಾ | ರೂ. 500/- |
| ವಿದೇಶಿವಾರ್ಷಿಕಚಂದಾ | ರೂ. 850/- |



ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ

ಸಂಪಾದಕೀಯ

# ರಥಸಪ್ತಮಿ ಹಾಗೂ ಭೀಷ್ಮಾಷ್ಟಮಿ

**ಮಾ**ಘ ಶುದ್ಧ ಸಪ್ತಮಿಯಂದು ಭಾರತೀಯರೆಲ್ಲರೂ ಅತ್ಯಂತ ಸಂಭ್ರಮದಿಂದ ಆಚರಿಸುವಂತಾ ಹಬ್ಬ ರಥಸಪ್ತಮಿ. ರಥಸಪ್ತಮಿಯಂದು ಸೂರ್ಯಜಯಂತಿಯನ್ನು ಆಚರಿಸುತ್ತೇವೆ. ಅಂದು ಸೂರ್ಯನಿಗೆ ಅತ್ಯಂತ ಪ್ರೀತಿಕರವಾದ ದಿನ. ಆ ದಿನ ಎಕ್ಕದ ಎಲೆಗಳನ್ನು ತಲೆಯಮೇಲಿರಿಸಿಕೊಂಡು ಸ್ನಾನ ಮಾಡಿ ಸೂರ್ಯ ದೇವನಿಗೆ ಅರ್ಘ್ಯಪ್ರದಾನ ಮಾಡುವುದರಿಂದ ಅನೇಕ ಜನ್ಮಗಳ ಪಾಪಗಳು ಹಾಗೂ ಅನೇಕ ರೋಗಗಳು ಕಳೆದುಹೋಗುತ್ತವೆ ಅಂದು ಪುರಾಣಗಳಿಂದ ತಿಳಿದುಬಂದಿದೆ. ಆ ದಿನ ಸೂರ್ಯನು ತನ್ನ ಬಂಗಾರದ ರಥದಲ್ಲಿ ಉತ್ತರದಿಕ್ಕಿನತ್ತ ಚಲಿಸುವಂತಹಾ ದಿನ. ಸೂರ್ಯನ ಬಂಗಾರದ ರಥವನ್ನು ಎಳೆಯುವಂತಾಹಾ ಸಪ್ತಾಶ್ವಗಳು ಸೂರ್ಯನ ಏಳು ಕಿರಣಗಳು ಸೂಚಿಸುತ್ತಾ ತನ್ಮೂಲಕ ಜಗತ್ತಿನ ಜೀವರಾಶಿಗಳ ಬದುಕಿನಲ್ಲಿ ಕವಿದಿರುವಂತಹಾ ಕತ್ತಲೆಯನ್ನು ಓಡಿಸುವಂತಹಾ ಸುದಿನವೆಂದು ನಂಬಿಕೆ. ಆ ದಿನ ಮನೆಯ ಮುಂದೆ ಸೂರ್ಯನ ರಥವನ್ನು ಬರೆದು ಸೂರ್ಯನ ಆರಾಧನೆ ಮಾಡಿ ಸೂರ್ಯನಿಗೆ ಪ್ರೀತಿಕರವಾದ ನೈವೇದ್ಯವನ್ನು ಸಮರ್ಪಣೆ ಮಾಡಿ ಸೂರ್ಯನ ಅನುಗ್ರಹವನ್ನು ಪಡೆಯುವಂತಾಹ ದಿನ ಮಾಘ ಶುದ್ಧ ಸಪ್ತಮಿಯಂದು ಆಚರಿಸುವಂತಹಾ ಈ ಸುದಿನದಂದು ತಿರುಮಲೆಯಲ್ಲಿ ಸೂರ್ಯಪ್ರಭವಾಹನದೊಂದಿಗೆ ಮಲೆಯಪ್ಪಸ್ವಾಮಿ ಏಳು ವಾಹನಗಳಲ್ಲಿ ಮೆರವಣಿಗೆಯಲ್ಲಿ ಬರುತ್ತಾ ಭಕ್ತರನ್ನು ತನ್ನ ಕರುಣಾಕಟಾಕ್ಷದಿಂದ ಅನುಗ್ರಹಿಸುತ್ತಾನೆ. ಆ ದಿನದಲ್ಲಿ ಸಪ್ತಗಿರೀಶನು ಮೊದಲಿಗೆ ಸೂರ್ಯ ಪ್ರಭವಾಹನದಲ್ಲಿ ಮೆರವಣಿಗೆಗೆ ಹೊರಟಾಗ ಸೂರ್ಯದೇವನ ಪ್ರಪ್ರಥಮ ಕಿರಣ ಮಲೆಯಪ್ಪಸ್ವಾಮಿ ಪಾದಗಳನ್ನು ಸೋಕಿದ ನಂತರವೇ ಮೆರವಣಿಗೆಯನ್ನು ಪ್ರಾರಂಭಿಸುವಂತಾಹಾ ವಾಡಿಕೆ ಇದೆ.ಅಂದು ತಿರುಮಲೆ ಕಿರು ಬ್ರಹ್ಮೋತ್ಸವದ ನೆನಪನ್ನು ತರುತ್ತಾ ನೂತನ ಶೋಭೆಯೊಂದಿಗೆ ಕಂಗೊಳಿಸುತ್ತಿರುತ್ತದೆ.ಅಂದು ಭಕ್ತರೆಲ್ಲಾ ಪ್ರತ್ಯಕ್ಷದೈವವಾದ ಸೂರ್ಯನಾರಾಯಣ ಹಾಗೂ ಕಲಿಯುಗ ಪ್ರತ್ಯಕ್ಷ ದೈವವಾದ ಶ್ರೀ ವೇಂಕಟೇಶ್ವರನ ದರ್ಶನವನ್ನು ಒಮ್ಮೆಲೇ ಪಡೆದುಕೊಂಡು ಪುನೀತರಾಗುವಂತಹಾ ಪರ್ವದಿನ.

ಹಾಗೆಯೇ ಮರುದಿನ ಮಾಘ ಶುದ್ಧ ಅಷ್ಟಮಿ ಬರುತ್ತದೆ. ಆ ದಿನವನ್ನು ಭೀಷ್ಮಾಷ್ಟಮಿ ಎಂದೂ ಕರೆಯುತ್ತಾರೆ. ಆ ದಿನ ಗಂಗಾ ಪುತ್ರನಾದ, ಮಹಾಭಾರತದ ಪ್ರಮುಖ ಪಾತ್ರಧಾರಿಯಾದ ಭೀಷ್ಮ ಶರಶಯ್ಯೆಯ ಮೇಲೆ ಮಲಗಿ ಉತ್ತರಾಯಣದ ನಿರೀಕ್ಷೆ ಮಾಡುತ್ತಾ ಆ ದಿನ ಬರುವ ತಿಥಿಗಾಗಿ ಕಾಯುತ್ತಿದ್ದು ಆ ತಿಥಿ ಸಂಭವಿಸಿದ ಕೂಡಲೇ ಪವಿತ್ರವಾದ ತನ್ನ ಆತ್ಮವನ್ನು ಭಗವಂತನಲ್ಲಿ ಲೀನಗೊಳಿಸಿಕೊಂಡಂತಹಾ ಪವಿತ್ರವಾದ ದಿನ. ಆ ದಿನಕ್ಕೆ ಎಲ್ಲಿಲ್ಲದ ಪ್ರಾಶಸ್ತ್ಯವಿದೆ. ಆ ದಿನ ಭೀಷ್ಮಪಿತಾಮಹನ ಆತ್ಮ ಶಾಂತಿಯನ್ನು ಕೋರುತ್ತಾ ಅನೇಕರು ಗಂಗಾನದಿಯಲ್ಲಿ ಮಿಂದು ಭೀಷ್ಮಾಚಾರ್ಯರಿಗೆ ಹಾಗೂ ತಮ್ಮ ತಮ್ಮ ಪಿತೃಗಳಿಗೆ (ಗತಿಸಿದ ತಂದೆಗೆ ಮಾತ್ರ) ತರ್ಪಣ ನೀಡುತ್ತಾರೆ. ಎಲ್ಲೆಡೆ ಈ ಆಚರಣೆಯಿಲ್ಲದಿದ್ದರೂ, ಭಾರತದ ಕೆಲವು ಭಾಗಗಳಲ್ಲಿ ಜನರು ಗಂಗಾ ನದಿಯಲ್ಲಿ ಮಿಂದು ಭೀಷ್ಮಾಚಾರ್ಯನ ಆತ್ಮ ಶಾಂತಿಯನ್ನು ಕೋರುತ್ತಾ ತರ್ಪಣವನ್ನು ನೀಡುತ್ತಾರೆ.

ಮಾಘಮಾಸದಲ್ಲಿ ಬರುವ ಈ ಪರ್ವಕಾಲದಲ್ಲಿ ಭೀಷ್ಮಪಿತಾಮಹರ ಹೋರಾಟ ಸಾಮಾರ್ಥ್ಯ ಧೀರತೆಯನ್ನು ಮೆಲುಕು ಹಾಕುತ್ತಾ ಭೀಷ್ಮಾಚಾರ್ಯರಿಗೆ ತರ್ಪಣ ನೀಡಿ ಧನ್ಯರಾಗೋಣ ಹಾಗೇ ನಮ್ಮ ನಮ್ಮ ಪಿತೃಗಳಿಗೆ (ಗತಿಸಿರುವ ತಂದೆ ಮಾತ್ರ) ತರ್ಪಣ ನೀಡಿ ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತಾ ಅವರ ಕೃಪೆಗೆ ಪಾತ್ರರಾಗೋಣ.

ಗೋವಿಂದಾ ! ಗೋವಿಂದಾ ಗೋವಿಂದಾ!

# ವಿದ್ವತ್ತು ವಿವೇಕಗಳ ಸಂಗಮ ಭೀಷ್ಮ

- ಡಾ॥ ಪ್ರದೀಪ್‌ಕುಮಾರ್ ಹೆಬ್ರಿ
9844018457

ಭೀಷ್ಮಾಚಾರ್ಯರು ಮಹಾಭಾರತದ ಪ್ರಸಿದ್ಧ ಪುರುಷರಲ್ಲೊಬ್ಬರು. ಸಂತನು ಮಹಾರಾಜರಿಗೆ ಗಂಗಾದೇವಿಯಲ್ಲಿ ಜನಿಸಿದ ಎಂಟು ಮಂದಿ ಪುತ್ರರಲ್ಲಿ ಕೊನೆಯವನೇ ಭೀಷ್ಮ ಹುಟ್ಟು ಹೆಸರು ದೇವದತ್ತ, ಕೌರವ - ಪಾಂಡವರಿಗೆ ವಾವೆಯಲ್ಲಿ ತಾತ. ಆಜನ್ಮ ಬ್ರಹ್ಮಚಾರಿಯಾಗಿ ಬಾಳಿದವ. ಸತ್ಯವ್ರತ, ಗಾಂಗೇಯ ಎಂಬ ಹೆಸರುಗಳೂ ಇದ್ದವು. ವಸುವಿನ ಅವತಾರ ವಸಿಷ್ಠ ಮುನಿಯ ಶಾಪದಿಂದಾಗಿ ಭೂಲೋಕದಲ್ಲಿ ಜನಿಸಿದವ. ಭೀಷ್ಮ ಜನಿಸಿದಂತೆ ಮಾತೆ ಗಂಗಾದೇವಿ ತನ್ನ ಲೋಕಕ್ಕೆ ಕರೆದುಕೊಂಡು ಹೋದಳು. ಪರಶುರಾಮನಲ್ಲಿ ಧನುರ್ವಿದ್ಯಾ ಪಾರಂಗತನನ್ನಾಗಿಸಿದಳು. ಶಂತನು ಚಕ್ರವರ್ತಿಗೆ ಒಪ್ಪಿಸಿದಳು. ಶಂತನು ಯುವರಾಜನನ್ನಾಗಿಸಿದನು.

**ಭೀಷ್ಮನ ಕುಲ, ಕಾಲ, ನೆಲ... ಹಿನ್ನೆಲೆ ಹೀಗಿದೆ:**

ಜಂಬೂದ್ವೀಪದಲ್ಲಿ ಅತ್ಯಂತ ಮನೋಹರ ಹಾಗೂ ಸಂಪದ್ಭರಿತವಾದ ನಾಡು ಕುರುಜಾಂಗಣನಾಡು, ರಾಜಧಾನಿ ಹಸ್ತಿನಾಪುರ. ಇಲ್ಲೇ ಭರತಕುಲ ತಿಲಕರ ವಂಶಾವತಾರವಾದದ್ದು. ಊರು ಮೂಲೋಕದ ಚೆಲುವೆಲ್ಲವನ್ನು ತನ್ನ ಒಡಲಲ್ಲಿ ತುಂಬಿಕೊಂಡಂತಿತ್ತು. ವಿಷ್ಣುವಿನ ನಾಭಿ ಕಮಲದಲ್ಲಿ ಹಿರಣ್ಯಗರ್ಭ ಬ್ರಹ್ಮನು ಜನಿಸಿ ಅವನ ಹೃತ್ಕಮಲದಿಂದ ಕಮಂಡಲು ಧಾರಕರಾದ ಪುಲಹ, ಮರೀಚ, ಅತ್ರಿ, ಅಂಗಿರಸ, ಪುಲಸ್ತ್ಯ ಮತ್ತು ಕೃತು ಎಂಬುವರು ಜನಿಸಿದರು. ಇವರಲ್ಲಿ ಮರೀಚಿ ಮಹರ್ಷಿಯ ಸುತ ಕಶ್ಯಪ ಮಹರ್ಷಿಯಿಂದ ಸಂತಾನ ಸೃಷ್ಟಿ ಪ್ರಾರಂಭವಾಯಿತು. ಇವನ ಮಗನೇ ಸೂರ್ಯದೇವ ಇವನಿಂದ ಬಂದ ವಂಶವೇ ಸೂರ್ಯವಂಶ.

ಅತ್ರಿ ಮಹರ್ಷಿಯ ಹಿರಿಯಸುತ ಭುವನತ್ರಯ ಸೋಮನು ಸಕಲ ಕ್ಷತ್ರಕುಲ ಪೂಜ್ಯ ಸೋಮವಂಶ ಲಲಾಮ ಈ ಸೋಮವಂಶೀಯರಲ್ಲಿ ದುಷ್ಯಂತ, ಭರತರು ಕೀರ್ತಿವಂತರು ಹಲವಾರು ಕಾಲದ ನಂತರ ಪ್ರಸಿದ್ಧನಾದವನು. ಪ್ರತಿಮ ಈತನ ಕೀರ್ತಿವಂತ ಮಕ್ಕಳೇ ಶಂತನು ಬಾಹ್ಲಿಕ ವಿನೂತ ಮತ್ತು ದೇವಾಪಿ. ಶಂತನುವಿನ ಸುತನೇ ಭೀಷ್ಮ. ಒಂದು ದಿನ ಶಂತನು ಮಹಾರಾಜ ಬೇಟೆಗೆ ಹೋದವನು ದಾಶರಾಜನ ಪುತ್ರಿ ಸತ್ಯವತಿಯನ್ನು ನೋಡಿ ಮೋಹಿತನಾಗುತ್ತಾನೆ. ಅವಳ ತಂದೆಯಲ್ಲಿ ತಾನು ಆಕೆಯನ್ನು ವಿವಾಹವಾಗುವುದಾಗಿ ತಿಳಿಸುತ್ತಾನೆ. ಆದರೆ ದಾಶರಾಜ, "ಮುಂದೆ ಸತ್ಯವತಿಯ ಗರ್ಭದಲ್ಲಿ ಜನಿಸಿದ ಪುತ್ರನನ್ನು ಉತ್ತರಾಧಿಕಾರಿಯಾಗಿ ಮಾಡುವ ಮಾತು ಕೊಟ್ಟರೆ ಮಗಳನ್ನು ಕೊಡುವುದಾಗಿ ಕರಾರು ಹಾಕುತ್ತಾನೆ. ಶಂತನು ಒಪ್ಪಲಿಲ್ಲ. ಆದರೆ ಮೋಹಿಸಿದ ಸತ್ಯವತಿಯನ್ನು ಮರೆಯದಾದ ಭೀಷ್ಮನಿಗೆ ವಿಷಯ ತಿಳಿಯಿತು. ತಂದೆಯ ಕೊರಗನ್ನು ಇಲ್ಲವಾಗಿಸಲು ನಿರ್ಧರಿಸಿದ. ತಾನು ಬ್ರಹ್ಮಚಾರಿ ಆಗಿಯೇ ಉಳಿಯುವುದಾಗಿ ಶಪಥ ಮಾಡಿದ. ತಂದೆಯ ವಿವಾಹವನ್ನು ಸತ್ಯವತಿಯೊಡನೆ ನೆರವೇರಿಸಿದ ಶಂತನು ಆನಂದದಿಂದ ಮಗನಿಗೆ "ಇಚ್ಛಾಮರಣಿ" ಯಾಗೆಂದು ವರವನ್ನು ನೀಡಿದ.

ಶಂತನು - ಸತ್ಯವತಿ ಸಂಸಾರ ಸುಖದಿಂದಿತ್ತು. ಚಿತ್ರಾಂಗದ, ವಿಚಿತ್ರವೀರ್ಯರೆನ್ನುವ ಸುತರೀರ್ವರು ಜನಿಸಿದರು. ಕೆಲ ಕಾಲದಲ್ಲಿಯೇ ಶಂತನು ಕಾಲವಶನಾದ ಗಾಂಗೇಯ ಚಿತ್ರಾಂಗದನಿಗೆ ಪಟ್ಟ ಕಟ್ಟಿದ. ಚಿತ್ರಾಂಗದನೊಮ್ಮೆ ಗಂಧರ್ವರೊಡನೆ ಯುದ್ಧ ಮಾಡಿದಾಗ ಅಸುನೀಗಿದ. ಗಾಂಗೇಯ ವಿಚಿತ್ರವೀರ್ಯನಿಗೆ ಪಟ್ಟಕಟ್ಟಿದ. ಭೀಷ್ಮ ಸ್ವಯಂವರವೊಂದಕ್ಕೆ ಹೋಗಿ ಕಾಶೀರಾಜನ ಪುತ್ರಿಯಾದ ಅಂಬೆ, ಅಂಬಿಕೆ, ಅಂಬಾಲಿಕೆಯರನ್ನು ಸೋದರನಿಗಾಗಿ ಗೆದ್ದು ಕರೆ ತಂದ. ಅಂಬೆ ವಿಚಿತ್ರವೀರ್ಯನನ್ನು ವಿವಾಹವಾಗಲು ನಿರಾಕರಿಸಿದಳು. ಭೀಷ್ಮ ಅವಳನ್ನು ಅವಳು ಮೆಚ್ಚಿದ ಸಾಲ್ವರಾಜನಲ್ಲಿಗೆ ಕಳುಹಿಸಿಕೊಟ್ಟನು. ಆದರೆ ಸಾಲ್ವ ನಿರಾಕರಿಸಿ ಹಿಂದಕ್ಕೆ ಕಳುಹಿಸಿದ.

ಅಂಬೆ ಭೀಷ್ಮನಲ್ಲಿಗೆ ಬಂದು ತನ್ನನ್ನು ಮದುವೆಯಾಗಲು ಕೋರಿಕೊಂಡಳು. ಭೀಷ್ಮ ನಿರಾಕರಿಸಿದ. ಅಂಬೆ ಕೋಪಗೊಂಡಳು. ಪರಶುರಾಮನ ಆಶ್ರಮಕ್ಕೆ ಹೋದಳು. ಶಿಷ್ಯ ಭೀಷ್ಮನ ಮನವೊಲಿಸಲು ಪರಶುರಾಮರೇ ಬಂದರು. ವಿಫಲರಾದರು ಕೋಪದಿಂದ ಶಿಷ್ಯನೊಡನೆ ಯುದ್ಧ ಮಾಡಿದರು. ಸೋತರು



ಅಂಬೆ ಕೋಪದಿಂದ ಭೀಷ್ಮನನ್ನು ಕೊಲ್ಲುವುದಾಗಿ ಶಪಥ ಮಾಡಿ ಪ್ರಾಣತೆತ್ತಳು. ಮುಂದೆ ಶಿಖಂಡಿಯಾಗಿ ಜನಿಸಿದಳು.

ಅಂಬಿಕೆ, ಅಂಬಾಲಿಕೆ ವಿಚಿತ್ರವೀರ್ಯನನ್ನು ಮದುವೆ ಯಾದರು.ಆದರೆ ಮಕ್ಕಳು ಆಗಲೇ ಇಲ್ಲ. ವಿಚಿತ್ರವೀರ್ಯ ಸತ್ತ. ಭರತವಂಶ ಕೊನೆಯಾಗುವಂತಾಯಿತು.ಸತ್ಯವತಿಯು ಅಂಬಿಕೆ ಅಂಬಾಲಿಕೆಯವರೊಂದಿಗೆ ಸಂತಾನಕ್ಕಾಗಿ ಕೂಡಲು ಭೀಷ್ಮನನ್ನು ಪ್ರೇರೇಪಿಸಿದಳು. ಭೀಷ್ಮ ನಿರಾಕರಿಸಿದ. ಬಳಿಕ ಸತ್ಯವತಿ ತನ್ನ ಮೊದಲಸುತ ವ್ಯಾಸನನ್ನು ಬರಮಾಡಿ ಕೊಂಡಳು. ಆಕೆಯ ಸೊಸೆಯರಿಬ್ಬರು ಹಾಗೂ ದಾಸಿಗೆ ವ್ಯಾಸ ಸಂತಾನಭಾಗ್ಯ ಕರುಣಿಸಿದ.ಜನಿಸಿದ ಸುತರೇ ಹುಟ್ಟುಗುರುಡ ಧೃತರಾಷ್ಟ್ರ, ಬಿಳಿಚಿಕೊಂಡ ಪಾಂಡು, ಮಹಾಜ್ಞಾನಿ ವಿದುರ.

ಧೃತರಾಷ್ಟ್ರರ ಪುತ್ರರು ಕೌರವರೆಂದೂ, ಪಾಂಡುವಿನ ಪುತ್ರರು ಪಾಂಡವರೆಂದೂ ಕರೆಸಿಕೊಂಡರು. ಭೀಷ್ಮನೇ ಎಲ್ಲರ ಪೋಷಣೆಗೆ ಮುಂದಾದ ಬೇಕಾದ ವಿದ್ಯೆಗಳ ಕಲಿಕೆಗೆ ಏರ್ಪಾಡು ಮಾಡಿದ. ಈ ಪ್ರಸಂಗವನ್ನು ಕವಿ ಪಂಪ ವರ್ಣಿ ಸಿದ್ದು ಹೇಗೆ:

ಮದುಮಂ ಮುಕ್ಕಳಿಸಿರ್ದ ಇಭಂಗಳಂ, ಉದಗ್ರಾಶ್ರೃಂಗಳಂ
ತಕ್ಕಿನಗ್ಗದ ಬಾಡಂಗಳಂ, ಆಯ್ದುಕೊಟ್ಟ ತಣಿದೆಂಪೋ ಸಾಲ್ಲುವೆಂಬನ್ನಮಾಂ
ನೂರಿರುವರ್ ಕುಮಾರರುಮನಟ್ಟಿ, ಈ ಕೂಸುಗಳ್ ಯೋಗ್ಯರ
ಪ್ಪುದನಿನ್ನೊಲ್ಪೊಡೆ ಶಸ್ತ್ರ ವಿದ್ಯೆ ಗೋವಜಂ ನೀನಾಗು ಕುಂಬೋದ್ಭವಾ

ಮುಂದೆ ಭೀಷ್ಮನ ಉಸ್ತುವಾರಿಯಲ್ಲಿ ಮಕ್ಕಳು ಬೆಳೆಯು ತ್ತಿದ್ದರು.ಕೌರವನ ಮತ್ಸರದ ಕಾರಣದಿಂದ ಪಾಂಡವರು ಪಡ ಬಾರದ ಬವಣೆಯನ್ನು ಅನುಭವಿಸಿದರು. ಹಿರಿಯರಾಗಿದ್ದರೂ ಭೀಷ್ಮ ಅಸಹಾಯಕನಾಗಿದ್ದ.ತಾನು ಕೌರವನ ಹಂಗಿನಲ್ಲಿ ಇದ್ದೇನೆಂಬ ಕೀಳರಿಮೆ ಆತನನ್ನು ಕಾಡತೊಡಗಿತ್ತು. ಕೌರವರ ಬಗೆಗಿನ ಅಸಮಾಧಾನವನ್ನು ತೋರಲಾರದವನಾಗಿದ್ದ. ಪಾಂಡವರಿಗೆ ಆಗುತ್ತಿದ್ದ ಅನ್ಯಾಯಕ್ಕೆ ನೋಯುತ್ತಿದ್ದ ಆದರೆ ಕೌರವನ ಮನವೊಲಿಸುವಲ್ಲಿ ಸೋಲುತ್ತಿದ್ದ ಈ ಸಮಯದಲ್ಲಿ ನಡೆದ ರಾಜಸೂಯ ಯಾಗದಲ್ಲಿ ಶ್ರೀಕೃಷ್ಣನಿಗೆ ಆಗ್ರಪೂಜೆ ಸಲ್ಲಿ ಸುವಂತೆ ಭೀಷ್ಮನೇ ಸೂಚಿಸಿದ. ಇದು ಕೃಷ್ಣಾವತಾರದ ಹಿನ್ನೆಲೆ ಹಾಗೂ ಶ್ರೀಕೃಷ್ಣನಲ್ಲಿ ಭೀಷ್ಮನಿಗಿದ್ದ ಅಂತರಂಗ ಭಕ್ತಿಯ ಸೂಚನೆಯಾಗಿತ್ತು ಮುಂದೆ ಭೀಷ್ಮ ಶ್ರೀ ಕೃಷ್ಣನ ಅನನ್ಯಭಕ್ತ ನಾಗಿ ಪರಮಭಾಗವತನಂತಿದ್ದ.

ಪಾಂಡವರ ಅಜ್ಞಾತವಾಸದ ಕೊನೆಯ ದಿನಗಳಲ್ಲಿ ಉತ್ತರಗೋಗ್ರಹಣ ನಡೆದು. ಪಾಂಡವರ ಪತ್ತೆಯಾದಾಗ ಪಾಂಡವರ ಅಜ್ಞಾತ ವಾಸದ ಅವಧಿ ಮುಗಿದಿದೆಯೆಂದು ಕೌರವನಿಗೆ ತಿಳಿ ಹೇಳಿದ ನಡೆದ ಯುದ್ಧದಲ್ಲಿ ಅರ್ಜುನನನ್ನು ಎದುರಿಸಿಯೂ ಧರಾಶಾಯಿಯಾದ ಕೃಷ್ಣಾರ್ಜುನರು ನರ ನಾರಾಯಣಾವತಾರವೆಂದು ದುರ್ಯೋಧನನಿಗೆ ಸಂದರ್ಭ ಬಂದಾಗ ತಿಳಿ ಹೇಳಿದ ಸಂಧಾನಕ್ಕಾಗಿ ಶ್ರೀ ಕೃಷ್ಣ ರಾಜಧಾನಿಗೆ ಬಂದಾಗ ಆತನ ಹಿರಿಮೆಯನ್ನೂ ಅರುಹಿದ. ಯುದ್ಧವೇ ಎಂದು ನಿಶ್ಚಯವಾದಾಗ ಮೊದಮೊದಲು ತನ್ನ ಅಸಮ್ಮತಿಯನ್ನು ಸೂಚಿಸಿದ. ಕೌರವ ಭೀಷ್ಮನನ್ನು ಕಡೆಗಣಿಸಿ ಆಪ್ತಮಿತ್ರ ಕರ್ಣನ ಸಹಾಯದಿಂದ ತಾನು ಯುದ್ಧವನ್ನು ಗೆಲ್ಲುತ್ತೇನೆಂದು ಬೀಗಿದಾಗ ಭೀಷ್ಮ ಕರ್ಣನನ್ನು ಹೀಗೆಳೆದ.

ಯುದ್ಧ ನಿಶ್ಚಯವಾಯಿತು. ಕೌರವರ ಬತ್ತಾಯಕ್ಕೆ ಭೀಷ್ಮ ಕುರುಸೇನೆಯ ಸೇನಾಧಿಪತಿಯಾದ ಆದರೆ ಕರ್ಣ ಯುದ್ಧಕ್ಕೆ ಬರದಂತೆ ಮಾಡಿದ ತಾನೊಬ್ಬನೇ ಯುದ್ಧದಲ್ಲಿ ಪ್ರತೀದಿನ ಹತ್ತು ಸಾವಿರ ಮಂದಿ ಜನರನ್ನು ಸಂಹರಿಸುವುದಾಗಿ ಪ್ರತಿಜ್ಞೆ ಮಾಡಿದ. ಅಸ್ತ್ರವನ್ನು ಹಿಡಿಯಲಾರನೆಂದು ಶಪಥ ಮಾಡಿದ್ದ ಶ್ರೀ ಕೃಷ್ಣ ಅಸ್ತ್ರ ಹಿಡಿಯುವಂತೆ ಮಾಡಿದ ಸಂತಸ ಮೆರೆದ ಇಚ್ಚಾ ಮರಣಿಯಾಗಿದ್ದ ಆತ ತನ್ನ ಮರಣದ ಗುಟ್ಟನ್ನು ಅಂಗಲಾಚಿದ್ದ ಧರ್ಮಜನಿಗೆ ತಾನೇ ಹೇಳಿದ್ದ. ಕೌರವನಲ್ಲಿ“ ಪಾಂಡವರಲ್ಲಿ ಸಂಧಾನ ಮಾಡಿಕೋ ಎಂದು ಪದೇ ಪದೇ ಬೋಧನೆಯನ್ನು ಮಾಡುತ್ತಿದ್ದ”.ಅದರಂತೆ ಯುದ್ಧದ ಹತ್ತನೇ ದಿನ ಶಿಖಂಡಿ ಅರ್ಜುನನ ರಥದಲ್ಲಿ ಎದುರು ಕಾಣಿಸಿಕೊಂಡಾಗ ಶಸ್ತ್ರ ತ್ಯಾಗ ಮಾಡಿ ಬಿದ್ದ. ಆರ್ಜುನ ಭೀಷ್ಮಜ್ಜನ ಆಸೆಯನುಸಾರ ಅವನಿಗೆ ಬಾಣಗಳ ಹಾಸಿಗೆಯನ್ನು ನಿರ್ಮಿಸಿದ ಅದು ಶರಶಯ್ಯೆ ಎಂದಾ ಯಿತು, ಮತ್ತೆ ಬಾಯಾರಿಕೆಯೆಂದು ಅರ್ಜುನನನ್ನು ದಿಟ್ಟಿಸಿದಾಗ ಅರ್ಜುನ ಪರ್ಜನ್ಯಾಸ್ತ್ರದಿಂದ ನೆಲವನ್ನು ಭೇದಿಸಿ ಪಾತಾಳ ಗಂಗೆಯನ್ನು ಚಿಮ್ಮಿಸಿದ. ಭೀಷ್ಮನ ನೀರಡಿಕೆ ನೀಗಿಸಿದ ಮತ್ತೆ ಕೌರವನಲ್ಲಿ ಸಂಧಾನಕ್ಕೆ ಮುಂದಾಗಲು ಒತ್ತಾಯಿಸಿದ. ಸರಿ ರಾತ್ರಿಯಲ್ಲಿ ಬಂದ ಕರ್ಣನಿಗೆ ಅವನ ಜನ್ಮವೃತ್ತಾಂತವನ್ನು ಹರುಹಿ ಹರಿಸಿದ.

ಮುಂದೆ ಕುರುಕ್ಷೇತ್ರ ಯುದ್ಧ ಒಟ್ಟು ಹದಿನೆಂಟು ದಿನಗಳಲ್ಲಿ ಮುಗಿಯಿತು. ಪಾಂಡವರು ಜಯಗಳಿಸಿದರು ಅಧಿಕಾರಸ್ಥರಾದರು.ಶ್ರೀಕೃಷ್ಣನ ಉಪದೇಶದನುಸಾರ ಪಾಂಡವರೆಲ್ಲರೂ ಭೀಷ್ಮನಲ್ಲಿ ಧಾವಿಸಿದರು. ಶ್ರೀಕೃಷ್ಣನು ಭೀಷ್ಮನಿಗೆ ಯುಧಿಷ್ಠಿರನಲ್ಲಿರುವ ಧಾರ್ಮಿಕ,ತಾತ್ವಿಕ ಸಮಸ್ಯೆಗಳಿಗೆ ಸಮಾಧಾನ ಹೇಳಲು ವಿನಂತಿಸಿದನು. ಭೀಷ್ಮನ ಸರ್ವಜ್ಞತ್ವವನ್ನು ಕೊಂಡಾಡಿದನು ಕೊನೆಗೆ ಭೀಷ್ಮನಲ್ಲಿ ಕುಸಿದು ಹೋಗಿ ರುವ ಶಕ್ತಿಯನ್ನು ಮತ್ತೆ ಸಂಚಯಿಸಿಕೊಳ್ಳುವಲ್ಲಿ ವರ ನೀಡಿದನು.

ಧರ್ಮಜನಲ್ಲಿ ಹಲವಾರು ರಾಜಧರ್ಮದ ಪ್ರಶ್ನೆ ಸಂಶಯಗಳಿದ್ದವು. ಅವೆಲ್ಲವನ್ನು ಭೀಷ್ಮ ಪರಿಹರಿಸಿದ ನುಡಿಯುಪದೇಶದ ಸಾರಾಂಶ ಇಂತಿವೆ.

ರಾಜನು ಪ್ರಯತ್ನ ಶೀಲನಾಗಿರಬೇಕು. ದೈವವೇ ಎಲ್ಲವನ್ನೂ ಮಾಡುವುದೆಂದು ರಾಜನು ಕೈಕಟ್ಟಿ ಕುಳಿತಿರಬಾರದು. ತಾನು ಮಾಡಬೇಕಾಗಿರುವ ಕೆಲಸವನ್ನು ಆದಷ್ಟು ಚೆನ್ನಾಗಿ ಮಾಡಿ ದೈವವನ್ನು ಪ್ರಾರ್ಥಿಸಿಕೊಳ್ಳಬೇಕು. ಒಂದು ಕಾರ್ಯದ ಸಿದ್ಧಿಗೆ ಅದೃಷ್ಟ ಪುರುಷ ಪ್ರಯತ್ನಗಳು ಬೇಕೇ ಬೇಕು. ಇವೆರಡರಲ್ಲಿ ಪುರುಷ ಪ್ರಯತ್ನವೇ ಶ್ರೇಷ್ಠವಾದದು.

ಪ್ರಾರಂಭಿಸಿದ ಕಾರ್ಯಗಳು ಫಲದಾಯಕವಾಗದಿದ್ದರೆ. ಅದಕ್ಕಾಗಿ ಸಂತಾಪ ಪಡುತ್ತಾ ಕೂರಬಾರದು. ಎಲ್ಲ ಕುಂದು ಕೊರತೆಗಳನ್ನೂ ಮತ್ತೊಮ್ಮೆ ಪರಿಶೀಲಿಸಿ ಮತ್ತೆ ಮತ್ತೆ ಪ್ರಯತ್ನಿಸಬೇಕು.

ರಾಜನು ಸತ್ಯನಿಷ್ಟನಾಗಿರಬೇಕು. ಎಲ್ಲ ಕಾರ್ಯಗಳಲ್ಲಿಯೂ ಸರಳತೆ - ನಿಯಮತೆಯನ್ನು ಆಶ್ರಯಿಸಬೇಕು. ನೀತಿ ಶಾಸ್ತ್ರವನ್ನೂ ಅನುಸರಿಸಿ ನಡೆದುಕೊಳ್ಳಬೇಕು. ಎಲ್ಲವೂ ಎಲ್ಲರಿಗೂ ಎಲ್ಲ ಕಾಲದಲ್ಲಿಯೂ ತಿಳಿಯುವುದು ಅನವಶ್ಯಕ. ಮಂತ್ರಿ - ಸೇನಾಪತಿಗಳೊಡನೆ ಮಾಡುವ ಗುಪ್ತ ಸಮಾಲೋಚನೆಗಳು ತನ್ನಲ್ಲಿರುವ ಕುಂದು ಕೊರತೆಗಳು ಶತ್ರುಪಕ್ಷದ ಕುಂದು ಕೊರತೆಗಳನ್ನು ಗುಟ್ಟಾಗಿಡಬೇಕು. ತನಗೆ ತಿಳಿದು ಬಂದಿರುವುದನ್ನು ಯಾರೊಡನೆಯೂ ಹಂಚಿಕೊಳ್ಳಬಾರದು .

ರಾಜನಿಗೆ ಜನಸಂಗ್ರಹವೇ ಬಹಳ ಮುಖ್ಯ. ಬೊಕ್ಕಸದಲ್ಲಿ ಶೇಖರಿಸಿರುವ ಚಿನ್ನ - ರತ್ನಗಳಿಗಿಂತಲೂ ಜನರ ಪ್ರೀತಿ ವಿಶ್ವಾಸಗಳೇ ಹೆಚ್ಚು ಬೆಲೆ ಬಾಳುವಂಥದ್ದು ಇದೇ ನಿಜವಾದ ಬೊಕ್ಕಸ. ಇದನ್ನು ರಾಜಶೇಖರಿಸಬೇಕು. ರಾಜನು ಕಟ್ಟಬಹುದಾದ ಕಲ್ಲುಕೋಟೆಗಳಿಗಿಂತ ದೃಢವಾದುದು ಮನುಷ್ಯ ದುರ್ಗ ಇದೇ ರಾಜ ಪ್ರೀತಿಯೆನ್ನುವ ಕೋಟೆ.

ರಾಜನು ದಯಾವಂತನಾಗಿರಬೇಕು. ಮೃದುವಾಗಿರಬೇಕು. ಆದರೆ ಎಲ್ಲ ಕಾಲಗಳಲ್ಲಿಯೂ ರಾಜನು ಕ್ಷಮಾವಂತನಾಗಿರಕೂಡದು. ಬಹಳ ಮೃದು ಸ್ವಭಾವವಿರುವ ರಾಜನನ್ನು ಕಂಡರೆ ಯಾರು ಭಯ ಪಡುವುದಿಲ್ಲ. ಸದಾ ಕ್ಷಮಾವಂತನಾಗಿರುವುದು ಅಧರ್ಮವೇ ಆಗುತ್ತದೆ. ರಾಜನು ಸಾಮಾನ್ಯವಾಗಿ ಮೃದುಸ್ವಭಾವದವನಾಗಿ ಪರಿಸ್ಥಿತಿಗೆ ಅನುಗುಣವಾಗಿ ಕಠಿಣನೂ ಆಗಿರಬೇಕು.

ರಾಜನು ದೀನರು ಅನಾಥರು, ವೃದ್ಧರು, ವಿಧವೆಯರು ಇವರ ಯೋಗಕ್ಷೇಮವನ್ನು ಗಮನಿಸಿ ಅವರಿಗೆ ಜೀವನೋಪಾಯವನ್ನು ಕಲ್ಪಿಸಬೇಕು. ಪ್ರಜೆಗಳನ್ನು ಹೆತ್ತವರ ಮನೆಯಲ್ಲಿರುವ ಮಕ್ಕಳಂತೆ ಸುಕ್ಷೇಮದಿಂದ ನೋಡಿಕೊಂಡರೆ ಅಂತ ರಾಜ ಶ್ರೇಷ್ಠರಾಜ ಎನಿಸುತ್ತಾನೆ.

ಜೇನುಹುಳವು ಹೂವುಗಳಿಂದ ಅವಕ್ಕೆ ಘಾಸಿಯಾಗದಂತೆ ಜೇನನ್ನು ಸಂಗ್ರಹಿಸುವಂತೆ ರಾಜನು ಪ್ರಜೆಗಳಿಗೆ ಹಿಂಸೆ ಕೊಡದೆ ತೆರಿಗೆಯನ್ನು ತೆಗೆದುಕೊಂಡು ಭಂಡಾರದಲ್ಲಿ ಸಂಗ್ರಹಿಸಿಕೊಳ್ಳಬೇಕು. ಕ್ಷಾಮ-ಪ್ರವಾಹ ಯುದ್ಧ ಸಮಯಗಳಲ್ಲೆ ಆಪತ್ತುಗಳ ನಿವಾರಣೆಗಾಗಿ ಹಣವನ್ನು ಸಂಗ್ರಹಿಸಿ ಇಟ್ಟು ಕೊಳ್ಳಬೇಕು. ಶಸ್ತ್ರಾಸ್ತ್ರ ಸಂಗ್ರಹಣೆಗೆ ಹೆಚ್ಚು ಗಮನ ಕೊಡಬೇಕು. ರಾಜ್ಯದ ಗಡಿಗಳ ಸಂರಕ್ಷಣೆಗೆ ವಿಶೇಷ ಗಮನ ಕೊಡಬೇಕು.

ರಾಜನು ಯಾವುದೇ ನಿರ್ಣಯವನ್ನು ತಾನೊಬ್ಬನೇ ತೆಗೆದುಕೊಳ್ಳಬಾರದು. ಅಮಾತ್ಯರೊಡನೆ ಆಸ್ಥಾನಿಕ ಕುಲವೃದ್ಧರೊಡನೆ ಸಮಾಲೋಚಿಸಿ ನಿರ್ಣಯವನ್ನು ತೆಗೆದುಕೊಳ್ಳಬೇಕು ಬಹು ವಿದ್ಯಾಪಾರಂಗತ ವಿದ್ವಾಂಸರನ್ನು ಗೌರವಿಸಿ ತನ್ನ ರಾಜ್ಯದಲ್ಲವರು ನೆಲೆಸುವಂತೆ ವ್ಯವಸ್ಥೆ ಮಾಡಬೇಕು. ಅರ್ಹರಾದವರಿಗೆ ದಾನ ಮಾಡಬೇಕು ಹಿರಿಯರ, ವೃದ್ಧರ ಸೇವೆಯನ್ನು ಮಾಡಿದರೆ ಒಳಿತಾಗುತ್ತದೆ.

ಶ್ರೀಕೃಷ್ಣನ ಕೋರಿಕೆಯಂತೆ ಯುಧಿಷ್ಠರನಿಗೆ ರಾಜಧರ್ಮ ಬೋಧಿಸಿದ ಭೀಷ್ಮನು. ತನಗೆ ಶ್ರೇಯಸ್ಸನ್ನು ನೀಡುವಂತೆ ಶ್ರೀಕೃಷ್ಣನನ್ನು ಪ್ರಾರ್ಥಿಸಿದನು. ಉತ್ತರಾಯಣ ಕಾಲಕ್ಕೆ ಬರುವುದಾಗಿ ಶ್ರೀಕೃಷ್ಣ ನುಡಿದನು, ಎಲ್ಲರೂ ಹಿಂದಿರುಗಿದರು.

ಮಾಘಮಾಸವು ಪ್ರಾರಂಭವಾಯಿತು. ಮಾಘಮಾಸದ ಶುಕ್ಲ ಪಕ್ಷದ ಅಷ್ಟಮಿಯ ದಿನ ಶ್ರೀಕೃಷ್ಣ ಪಾಂಡವರೆಲ್ಲರೊಡಗೂಡಿ ಶರಶಯ್ಯೆಯಲ್ಲಿ ಪವಡಿಸಿದ್ದ ಭೀಷ್ಮನಿದ್ದೆಡೆಗೆ ಹೋದರು. ಆಗಲೇಅಲ್ಲಿ ನಾರದ, ವ್ಯಾಸ, ಅಸಿತದೇವಲ ಋಷಿಗಳು ಸುತ್ತುವರಿದಿದ್ದರು. ಬಂದಿದ್ದ ಯುಧಿಷ್ಠಿರನನ್ನು ನೋಡಿ ಭೀಷ್ಮನು-“ಯುಧಿಷ್ಠಿರ ! ನಾನು ಈ ಶರತಲ್ಪದಲ್ಲಿ ಮಲಗಿ ಐವತ್ತೆಂಟು ರಾತ್ರಿಗಳನ್ನು ಕಳೆದಿರುವೆ. ನನಗೀಗ ನೂರು

ವರ್ಷಗಳನ್ನು ಇಲ್ಲಿ ಕಳೆದೆನೋ ಎಂದೆನಿಸುತ್ತಿದೆ!" ಎಂದನು ಧೃತರಾಷ್ಟ್ರನನ್ನು ಕರೆದು ಬುದ್ಧಿ ಹೇಳಿದನು. ಅನಂತರ ಶ್ರೀ ಕೃಷ್ಣನಲ್ಲಿ ತನ್ನ ಕೊನೆಯಾಸೆಯಾದ ವಿಶ್ವರೂಪವನ್ನು ತೋರ ಬೇಕೆಂದು ಪ್ರಾರ್ಥಿಸಿದ್ದಾನೆ.

" ಭೀಷ್ಮನೆದೆ ಪ್ರಾರ್ಥನೆಗೆ ಓಗೊಟ್ಟ ಶ್ರೀಕೃಷ್ಣ
ವಿಶ್ವರೂಪವ ತೋರಿ ಪೊರೆದಿಕರು ಭೀಷ್ಮರನು
ಅನಂತಾನಂತ ಕೋಟಿ ಬ್ರಹ್ಲಾಂಡ ಒಂದೆಡೆಯು
ರುದ್ರ ರಮಣೀಯ ದಿವ್ಯ ಅದ್ಭುತದ ವರರೂಪ
ಅಧ್ಯಾತ್ಮ ಬೆಳಕಲ್ಲಿ ಪ್ರೀತಿದಯೆ ಕರುಣೆ" ।

ಸಂತೃಪ್ತಿಯಲ್ಲಿ ಭೀಷ್ಮ ಆನಂದ ಸೂಸುತ್ತಿದ್ದಂತೆ ಶ್ರೀಕೃಷ್ಣ ಅವನಿಗೆ ನೀನಿನ್ನು ನಿನ್ನ ನಿಜ ಧಾಮಕ್ಕೆ ಹೊರಡು ಎಂದನು, ಗಾಂಗೇಯ ದೇದೀಪ್ಯಮಾನದಲ್ಲಿ ಬೆಳಗುತ್ತ ಕೆಲಘಳಿಗೆ ಧ್ಯಾನದಲ್ಲಿ ಲೀನನಾದನು. ಕಣ್ಣೆರೆದು, ಯುಧಿಷ್ಠಿ ರಾಧಿಗಳಿಗೆ ಸತ್ಯವಂತರಾಗಿರಿ, ದಯಾವಂತರಾಗಿರಿ, ನಿತ್ಯ ತಪಸ್ವಿಗಳಾಗಿರಿ ಎಂದು ಹೇಳಿ ಯೋಗದ ಮೂಲಕವಾಗಿ ಶರೀರವನ್ನು ತ್ಯಜಿಸಿ ದನು. ಭೀಷ್ಮನ ಆತ್ಮವು ಅವನ ತಲೆಯ ಮೇಲ್ಭಾಗವನ್ನು ಛೇದಿಸಿ ಕೊಂಡು ಮಿಂಚಿನಂತೆ ಹೊಳೆಯುತ್ತ ಸ್ವರ್ಗಲೋಕಕ್ಕೆ ಹೊರಟು ಹೋಯಿತು.

ಭೀಷ್ಮರು ಗತಿಸಿದ್ದು 'ಭೀಷ್ಮಾಷ್ಟಮಿ' ಎಂದು ಪ್ರಸಿದ್ಧವಾದ ರಥಸಪ್ತಮಿಯ ಮರುದಿನ ಅಂದು ರೋಹಿಣಿ ನಕ್ಷತ್ರವಿತ್ತು.

ಭೀಷ್ಮನ ದೇಹಾವಸಾನದ ನಂತರ ಯುಧಿಷ್ಠರ ಧೃತ ರಾಷ್ಟ್ರಾದಿಗಳು ರಾಜಮರ್ಯಾದೆಯಿಂದ ಭೀಷ್ಮನ ಅಂತ್ಯ ಸಂಸ್ಕಾರ ಮಾಡಿದರು. ಗಂಗಾನದಿಯಲ್ಲಿ ಮುಳುಗಿ ತರ್ಪಣ ನೀಡಿದರು. ಮಾರನೇ ದಿನ ಚಿತಾಭಸ್ಮವು ಗಂಗೆಯಲ್ಲಿ ಮೇಲೆ ಬಂದಿತು.ಗಂಗಾದೇವಿ ಕಣ್ಣೀರ ಅಭಿಷೇಕ ಮಾಡಿದಳು. ಸುತನ ಗುಣಗಾನ ಮಾಡಿ ಅಳತೊಡಗಿದಳು.ಮುಂಬಂದ ಶ್ರೀಕೃಷ್ಣ ಸಂತೈಸಿದನು."ನಿನ್ನ ಸುತ ವಸುಗಳನ್ನು ಸೇರಿದನು. ಅವನು ಸಾಮಾನ್ಯನಲ್ಲ" ಎಂದಂತೆ ಗಂಗೆ ಅದೃಶ್ಯಳಾದಳು. ಅವಳೆದೆ ಯಲ್ಲಿ ಶೋಕ - ಸಂತಸವೆರಡೂ ತುಂಬಿತ್ತು.

ಬಹು ಸಮರ್ಥ ದಕ್ಷ, ವಿದ್ವತ್ತು - ವಿವೇಕದ ಸಂಗಮ ಭೀಷ್ಮನ ಯುಗವು ಅಂತ್ಯ ಕಂಡಿತು.

ನಮಗೆಲ್ಲ ಭೀಷ್ಮ ಒಂದು ಆದರ್ಶ ಒಂದು ಕ್ಷೇತ್ರದಲ್ಲಿ ತುಂಬಾ ಕೆಲಸಮಾಡಿ ವೃದ್ಧರಾದವರನ್ನು ಆ ಕ್ಷೇತ್ರದ ಭೀಷ್ಮ' ಎಂದು ಗುರುತಿಸುತ್ತೇವೆ. ಇದು ಭೀಷ್ಮರಿಗೆ ನಾವು ತೋರುವ ಗೌರವವೂ ಆಗಿದೆ.

# ಕುಮಾರಧಾರಾ ತೀರ್ಥ



ತಾರಕಾಸುರ ವಧಃ ಪಶ್ಚಾತ್ ಶಿವಪುತ್ರ ಸ್ತಪಃ ಸ್ಥಳಃ।
ಕುಮಾರಧಾರಾ ತೀರ್ಥೇನ ಪುಣ್ಯನಾಮಃ ಪ್ರಕೀರ್ತಃ॥

ನಿತ್ಯ ಹರಿದ್ವರ್ಣದ ದಟ್ಟವಾದ ಅರಣ್ಯಸಂಪತ್ತಿನಿಂದ ಕೂಡಿದ ಶ್ರೀ ಸಪ್ತಗಿರಿ ಶ್ರೇಣಿಯಲ್ಲಿರುವ ಇನ್ನೊಂದು ಪ್ರಮುಖ ವಾದ ಪರಮ ಪುಣ್ಯ ತೀರ್ಥವೆಂದರೆ "ಕುಮಾರಧಾರಾ ತೀರ್ಥ". ಬೆಟ್ಟದ ಕಿಣಿವೆಗಳಿಂದ ಹಾದು ಬಂದಿರುವ ಈ ತೀರ್ಥವು ಪ್ರಕೃತಿಯ ಸುಂದರ ಸೊಬಗಿನ ಮಧ್ಯದಲ್ಲಿ ಕಣ್ಮನಗಳನ್ನು ತಣಿಸುತ್ತಾ, ಕೇವಲ ನೋಟದಲ್ಲೇ ಸುಮ ನೋಹರವಾಗಿದೆ.ಪ್ರತಿಯೊಂದು ತೀರ್ಥ ಮತ್ತು ಗಿರಿಗಳಿಗೂ ಹಿನ್ನೆಲೆಯಾದ ಪರಮಾತ್ಮನ ಒಂದೊಂದು ಲೀಲಾ ಪ್ರಸಂಗ ವಿರುವಂತೆ, ಈ ಕುಮಾರಧಾರಾ ತೀರ್ಥಕ್ಕೂ ಕೂಡಾ ಒಂದು ಪೌರಾಣಿಕ ಕಥೆಯಿದೆ. ಹಿಂದೆ ಧರ್ಮಸಂಸ್ಥಾ ಪನಾ ಕಾರ್ಯೋನ್ಮುಖನಾದ ಶ್ರೀ ಪರಮೇಶ್ವರನ ಪುತ್ರನಾದ ಕುಮಾರಸ್ವಾಮಿಯು ತಾರಕಾಸುರನೆಂಬ ದೈತ್ಯನನ್ನು ಸಂಹಾರ ಮಾಡಿ, ತದನಂತರ ಈ ತೀರ್ಥದ ತೀರದಲ್ಲೇ ತಪೋನಿರತನಾಗಿದ್ದನಂತೆ, ಅಷ್ಟೇ ಅಲ್ಲ, ಒಮ್ಮೆ ಶ್ರೀಮನ್ಮಹಾ ವಿಷ್ಣುವಿನ ಪರಮ ಭಕ್ತನೊಬ್ಬನು ಅರಣ್ಯ ಮಧ್ಯದಲ್ಲಿ ದಾರಿ ತಪ್ಪಿ ಸನ್ಮಾರ್ಗಕ್ಕಾಗಿ ಭಗವಂತನನ್ನು ಕುರಿತ ತಪಸ್ಸಾ ಚರಣೆಯಲ್ಲಿ ತೊಡಗಿದಾಗ, ಭಕ್ತರ ಸಕಲ ಸಂಕಷ್ಟಗಳಿಗೂ ನೆರವಾಗುತ್ತೇನೆ."ಯೋಗ ಕ್ಷೇಮಂ ವಹಾಮ್ಯಹಂ" ಎಂಬ ಪ್ರತಿಜ್ಞಾಬದ್ಧ ಭಕ್ತ ರಕ್ಷಣ ದೀಕ್ಷಿತನಾದ ಭಗವಂತನು ತಕ್ಷಣವೇ ಪ್ರತ್ಯಕ್ಷನಾಗಿ ಈ ದಿವ್ಯ ತೀರ್ಥದಲ್ಲಿ ಸ್ನಾನವನ್ನು ಮಾಡುವಂತೆ ಅಪ್ಪಣೆ ಕೊಡುತ್ತಾನೆ. ಅದರಂತೆ ಆತನು ಆ ಪುಣ್ಯ ತೀರ್ಥದಲ್ಲಿ ಮಿಂದೆದ್ದಾಗ, ನವಯುವಕನಂತೆ ಮಹಾನ್ ತೇಜಸ್ಸಿನಿಂದ ಕಂಗೊಳಿಸುತ್ತಾನೆ. ಅಂದಿನಿಂದ, ಆ ತೀರ್ಥವು "ಕುಮಾರ ಧಾರತೀರ್ಥ" ಎಂದು ಪ್ರಖ್ಯಾತಿ ಯನ್ನು ಪಡೆದಿದೆಯೆನ್ನಲಾಗಿದೆ.

# ಅಗಸ್ತ್ಯ ಮಹಾಮುನಿ

- ಡಾ॥ ಸಿ. ಎಸ್. ಊರ್ಮಿಳಾ
9380426830

(ಕಳೆದ ಸಂಚಿಕೆಯಿಂದ ಮುಂದುವರಿದಿದೆ)

ಮಂದಸ್ಮಿತ ಮುಖ ಶ್ರೀಮಾನಿದಂ ವಚನ ಮಬ್ರ ವೀತ್
ಅಹಂ ದ್ರಾವಿಡ ದೇಶೇಸ್ಮಿನ್ ಅವತಾರನ್ಕರೋಮಿ ತಾನ್
ಯೇನಾವತಾರೇಣಮಯಾ ಲೋಕೇ ಶಿಷ್ಟ ಪರಿಗ್ರಹಾ
ಸರ್ವತ್ರ ದ್ರಾವಿಡೀ ಭಾಷಾ ಭವಿಷ್ಯತಿ ನ ಸಂಶಯಃ
ಶಂಖ ಚಕ್ರಾಧ್ಯಾಯುಧಾನಿ ವಿಶ್ವಕ್ಸೇನಾದಿಕಾನ್ ಸುರಾನ್
ಲೋಕೇ ವತಾರಯಿಷ್ಯಾಮಿ ದ್ರಾವಿಡೇ ಕಲಶೋದ್ಭವ
ಮಯಾ ಮದಂಶ ಜೈಸ್ಸರ್ವೈರ್ದಶಭಿ ರ್ದ್ರಾವಿಡೋತ್ತಮೈಃ
ಕ್ರಿಯಂತೇ ಖಿಲ ವೇದಾರ್ಥಾ ದಿವ್ಯ ದ್ರಾವಿಡ ಭಾಷಯಾ
ತೇಷು ದಿವ್ಯ ಪ್ರಬಂಧೇಷು ದ್ರಾವಿಡೇಷು ಘಟೋದ್ಭವ
ಯಸ್ಸಕಸ್ಸ ಭವೇದ್ಭಕ್ತಿಃ ಸಮಕ್ತೋ ನಾತ್ರ ಸಂಶಯಃ
ಯಸ್ಯಕಸ್ಯ ಭವೇದ್ಭಕ್ತಿ ಃ ಸಮುಕ್ತೋ ನಾತ್ರ ಸಂಶಯಃ

ಈ ಶ್ಲೋಕದಲ್ಲಿ ಕಲಶೋದ್ಭವ ಘಟೋದ್ಭವ ಎಂದು ಅಗಸ್ತ್ಯರನ್ನು ಸಂಬೋಧಿಸಿರುವುದು ಅವರ ಜನ್ಮ ವೃತ್ತಾಂತ ವನ್ನು ತಿಳಿಸುತ್ತದೆ. ಕಾರಣ ಮಿತ್ರಾ ಹಾಗೂ ವರುಣನ ತೇಜಸ್ಸಿನ ಅಂಶದಲ್ಲಿ (ಕುಂಭಗಳಲ್ಲಿ) ಮಡಿಕೆಯಿಂದ ಹುಟ್ಟಿದವರು ಅಗ ಸ್ತ್ಯರು ನಾನೇ ದ್ರಾವಿಡ ದೇಶದಲ್ಲಿ ಅವತರಿಸುತ್ತೇನೆ. ನನ್ನ ಸಂಬಂಧದಿಂದ ದ್ರಾವಿಡ ಭಾಷೆಯು ಪಾವಿತ್ರ್ಯವನ್ನು ಹೊಂದಿ ಶಿಷ್ಯರಿಂದ ಪರಿಗ್ರಹಿಸಲ್ಪಡುತ್ತದೆ. ನನ್ನ ಶಂಖ ಚಕ್ರಾಧ್ಯಾಯುಧ ಗಳನ್ನು , ನನಗೆ ನಿತ್ಯ ಕೈಂಕರ್ಯ ಮಾಡುತ್ತಿರುವ ವಿಶ್ವಕ್ಸೇನಾದಿ ನಿತ್ಯರನ್ನೂ ಸಹ ಈ ದ್ರಾವಿಡ ದೇಶದಲ್ಲಿ ಅವತರಿಸುವಂತೆ ಮಾಡುವೆನು. ನನ್ನ ಅಂಶಸಂಭೂತರಾದ ಹತ್ತು ಮಂದಿಭಕ್ತರು ಸಂಸ್ಕೃತ ವೇದದಲ್ಲಿರುವ ಸಾರಾಂಶವನ್ನು ತಮಿಳು ಭಾಷೆಯಲ್ಲಿ ಪ್ರಕಾಶಪಡಿಸುವರು.ಈ ಭಕ್ತರ ಸೂಕ್ತಿಯೇ ದಿವ್ಯ ಪ್ರಬಂಧ ಗಳೆಂದು ಪ್ರಸಿದ್ಧವಾಗುತ್ತದೆ. ಈ ದಿವ್ಯಪ್ರಬಂಧದಲ್ಲಿ ಯಾರಿಗೆ ಭಕ್ತಿ ಶ್ರದ್ಧೆಯಿದೆಯೋ ಅವರು ಮೋಕ್ಷವನ್ನು ಹೊಂದುತ್ತಾರೆ. ಇದರಲ್ಲಿ ಸಂದೇಹವೇ ಇಲ್ಲ.ಅಷ್ಟೇ ಅಲ್ಲ ತಮಿಳು ಭಾಷೆಯು "ಸರ್ವಭಾಷಾಧಿಕಾ ಭಾಷಾ ದ್ರಾವಿಡೀ ಸಾ ಭವಿಷ್ಯತಿ"- ಎಲ್ಲಾ ಭಾಷೆಗಳಿಗಿಂತಲೂ ಸರ್ವೋತ್ಕೃಷ್ಟತೆಯನ್ನು ಪಡೆಯುತ್ತದೆ.



ಏವಮುಕ್ತ್ವಾ ತದಾಗಸ್ತ್ಯಂ ಲಕ್ಷ್ಮೀಶಃ ಕರುಣಾನಿಧಿಃ
ತೋಷಯಿತ್ವಾಮುನಿಶ್ರೇಷ್ಠಂ ತತ್ರೈವಾಂತರ್ದದೇ ಹರಿಃ

ಹೀಗೆ ದಯಾನಿಧಿಯಾದ ಮಹಾವಿಷ್ಣುವು ಅಗಸ್ತ್ಯ ಮುನಿ ಗಳಿಗೆ ವರವನ್ನು ಅನುಗ್ರಹಿಸಿ ಅಂತರ್ಧಾನನಾದನು. ಹರಿ ಕೃಪೆಗೆ ಪಾತ್ರರಾದ ಅಗಸ್ತ್ಯರೂ ಸಹ ಸಂತುಷ್ಟರಾಗಿ ಹರಿ ಸ್ಮರಣೆ ಮಾಡುತ್ತಾ ತಮ್ಮ ಆಶ್ರಮಕ್ಕೆ ತೆರಳಿದರು.

ಭಗವಾನ್ ಮಹಾವಿಷ್ಣುವು ಅಗಸ್ತ್ಯ ಮಹರ್ಷಿಗಳಿಗೆ ವಚನ ಕೊಟ್ಟಂತೆ ಶ್ರೀಕೃಷ್ಣಾವತಾರವು ಅಂದರೆ ದ್ವಾಪರ ಯುಗವು ಸಮಾಪ್ತಿಯಾಗಿ ಕಲಿಯುಗದ ಆರಂಭವಾದಾಗ ಜನಿಸಿದರು ಎಂಬ ಪ್ರತೀತಿ ಇದೇ. ಆದರೆ "ಗುರು ಪರಂಪರಾ ಪ್ರಭಾವಂ" ಎಂಬ ಕೃತಿಯಲ್ಲಿ ಮೊದಲಾಳ್ವಾರ್‌ರು ದ್ವಾಪರ ಯುಗದಲ್ಲಿ ಜನಿಸಿದರೆಂಬ ಪ್ರತೀತಿಯಿದೆ. ಅಂದರೆ ಪೊಯಗೈ ಆಳ್ವಾರರು ತಾವರೆ ಪುಷ್ಪದಲ್ಲಿಯೂ, ಭಗವಂತನ ಪಾಂಚಜನ್ಯ ಅಂಶದಿಂದ ಜನಿಸಿದರೆಂದೂ,ಪೂದತ್ತಾಳ್ವಾರರು ಒಂದು

ಕೆರೆಯಲ್ಲಿ ಬೆಳೆದಿದ್ದ ತಾವರೆ ಪುಷ್ಪದಲ್ಲಿಯೂ ಭಗವಂತನ ಗದೆಯ ಅಂಶದಿಂದ ಜನಿಸಿದರೆಂದೂ,ಪೇಯಳ್ವಾರರು ಮಯಾ ಲಾಪುರದ ಕ್ಷೇತ್ರದಲ್ಲಿ ಭಗವಂತನ ನಂದಕಾಂಶರಾಗಿ ಒಂದು ಬಾವಿಯಿಂದ ಉದ್ಭವಿಸಿದರು ಎಂದು ಗುರುಪರಂಪರಾ ಪ್ರಭಾವವು ತಿಳಿಸುತ್ತದೆ. ಅಂತೆಯೇ ತಿರುಮಳಿಶೈ ಆಳ್ವಾರರಿಗೆ ಭಕ್ತಿಸಾರರ್ ಎಂದು ಸಾಕ್ಷಾತ್ ಶಿವನೇ ಹೆಸರಿಟ್ಟನು.ಹೀಗಾಗಿ ಈ ನಾಲ್ವರೂ ದ್ವಾಪರಯುಗದಲ್ಲಿ ಜನಿಸಿದರೆಂದೂ ಗುರು ಪರಂಪರಾ ಪ್ರಭಾವದಿಂದ ನಮಗೆ ತಿಳಿಯುತ್ತದೆ.

ನಂತರ ಅಂದರೆ ಕಲಿಯುಗದ 43 ನೇ ದಿವಸ ವಿಶ್ವಕ್ಸೇನರ ಅಂಶವಾಗಿ ನಮ್ಮಾಳ್ವಾರರು ಜನಿಸಿದರು. ಮಧುರಕವಿ ಆಳ್ವಾರರು ವಿಷ್ಣುವಿನ ಕುಮುದಾಂಶ ಮತ್ತು ವೈನತೇಯ ಅಂಶರಾಗಿ ಜನಿಸಿದರು.

ತಿರುಪ್ಪಾಣ್ಣಾಳ್ವಾರ್ ಅವರು ಭಗವಂತನ ಶ್ರೀ ವತ್ಸಾಂಶರಾಗಿ ಅಯೋನಿಜರಾಗಿ ಜನಿಸಿದರು.

ತೊಂಡರಡಿಪ್ಪೊಡ್ಡಿ ಆಳ್ವಾರರು ವಿಷ್ಣು ಭಕ್ತರ ಪಾದಧೂಳಿಯೆಂದು ತಾವೇ ಹೇಳಿಕೊಂಡಿದ್ದಾರೆ. ತುಳಸೀ ಮಾಲೆಯನ್ನು ದೇವರಿಗೆ ಸಮರ್ಪಿಸುವುದೇ ಇವರ ಕೈಂಕರ್ಯವಾಗಿದ್ದಿತು. ಪೆರಿಯಾಳ್ವಾರರು ಬ್ರಾಹ್ಮಣ ವಂಶದಲ್ಲಿ ಭಗವಂತನ ಗರುಡಾಂಶರಾಗಿ ಜನಿಸಿದರು.

(ಆಂಡಾಳ್ , ಪೆರಿಯಾಳ್ವಾರರ ಸಾಕು ಮಗಳು, ತುಳಸೀ ತೋಟದಲ್ಲಿ ದೊರೆತ ಅಯೋನಿಜೆ. )

ಕುಲಶೇಖರಾಳ್ವಾರ್ ಅವರು ಕೋಳಿಕೋಡಿನ ವಂಜಿಕುಳಂನಲ್ಲಿ ಜನಿಸಿದರ ರಾಜ ತಿರುಮಂಗೈ ಆಳ್ವಾರರು ಭಗವಂತನ ಶಾರ್ಙ್ಗಾಂಶವಾಗಿ ಜನಿಸಿದರು.

ಹೀಗೆ ಈ ಆಳ್ವಾರರ ಅವತಾರವನ್ನು ಅಭಿನವದಶಾವತಾರ ಎಂದು ಹೇಳಿ ಸ್ತುತಿಸಿದ್ದಾರೆ. ಈ ಆಳ್ವಾರರು ರಚಿಸಿದ ನಾಲಾಯಿರ ದಿವ್ಯ ಪ್ರಬಂಧವು ಸಕಲ ವೇದಗಳ ಸಾರವೆಂದು ಪ್ರಸಿದ್ಧವಾಗಿದೆ.

ಅಷ್ಟೇ ಅಲ್ಲದೆ ಈ ಆಳ್ವಾರರು ತಮಿಳುನಾಡಿನ ಅನೇಕ ನದೀ ತೀರಗಳಲ್ಲಿ ಜನಿಸಿ ಆ ಭೂಮಿಯನ್ನೇ ಪುಣ್ಯ ಭೂಮಿಯನ್ನಾಗಿ, ಪವಿತ್ರ ಭೂಮಿಯನ್ನಾಗಿ ಮಾಡಿದರು. ಹೀಗಾಗಿ ಭಗವಂತನು ಅಗಸ್ತ್ಯಮಹರ್ಷಿಗಳಿಗೆ ಕೊಟ್ಟ ಮಾತನ್ನು ಸಮರ್ಪಕವಾಗಿ ನಡೆಸಿಕೊಟ್ಟನು.

"ಕಲೌ ಖಲು ಭವಿಷ್ಯಂತಿ ನಾರಾಯಣ ಪರಾಯಣಾಃ
ಕ್ವಚಿತ್ ಕ್ವಚಿತ್ ಮಹಾಭಾಗಾ ದ್ರವಿಡೇಷುಚಭೂರಿಶಃ
ತಾಮ್ರಪರ್ಣೀ ನದಿ ಯತ್ರ ಕೃತಮಾಲಾ ಪಯಸ್ವಿನೀ
ಕಾವೇರಿ ಚಮಹಾಭಾಗ ಪ್ರತೀಚೀ ಚಮಹಾನದಿ


ಎನ್ರು ಮಹರ್ಷಿ (ಶುಕ) ಅರುಳ್‌ಚ್ಚೆಯದಾನ್ ಎಂದಿದೆ. ಈ ಭಾಗವತರು ತಾಮ್ರಪರ್ಣೀ,ವೈಗೈ, ಕಾವೇರಿ, ಪ್ರತೀಚೀ ಮುಂತಾದ ನದಿ ತೀರದಲ್ಲಿ ಜನಿಸುವರೆಂದೂ ಶುಕಬ್ರಹ್ಮಾ, ಇವರು ಅವತರಿಸುವುದಕ್ಕೆ ಮುಂಚೆಯೇ ಸೂಚಿಸಿದ್ದರು. ಹೀಗಾಗಿ ತಮಿಳುನಾಡ ಪುಣ್ಯ ನದಿಗಳ ತಾಣವಾಗಿವೆ. ಭಗವಂತನನ್ನು ಆಳ್ವಾರರೇ ಸ್ತುತಿಸಿದ ಸ್ಥಳಗಳು ದಿವ್ಯ ಕ್ಷೇತ್ರಗಳಾಗಿವೆ.

ಆಗಸ್ತ್ಯರು ತಮಿಳಿನಲ್ಲಿ ವ್ಯಾಕರಣ ಗ್ರಂಥ "ಅಗತ್ತಿಯಮ್"ನ್ನು ರಚಿಸಿದ್ದಾರೆ. ಅಷ್ಟೇ ಅಲ್ಲದೆ ತಾಮ್ರಪರ್ಣಿಯಮ್ ಎಂಬ ಸಿದ್ಧ ವೈದ್ಯಕ್ಕೆ ಸಂಬಂಧಪಟ್ಟ ಕೃತಿಯನ್ನು ರಚಿಸಿದ್ದಾರೆ. ಉಭಯ ಭಾಷಾ ಪಾಂಡಿತ್ಯವನ್ನು ಪಡೆದ ಅಗಸ್ತ್ಯರು ಸಂಸ್ಕೃತದಲ್ಲಿ ವರಾಹಪುರಾಣವನ್ನು ಬರೆದಿದ್ದಾರೆ. ಸ್ಕಂದಪುರಾಣದಲ್ಲಿ ಅಗಸ್ತ್ಯ ಸಂಹಿತದಲ್ಲಿ ಇವರ ಪ್ರಸ್ತಾಪವಿದೆ.

ಅಗಸ್ತ್ಯಮಹಾಮುನಿಗಳ ಬಗ್ಗೆ ವಾಲ್ಮೀಕಿ ರಾಮಾಯಣ, ಮಹಾಭಾರತಗಳಲ್ಲಿ ವರ್ಣಿಸಲ್ಪಟ್ಟಿವೆ.ಇವರು 18 ಸಿದ್ಧರಲ್ಲಿ ಒಬ್ಬರು. ಮಹಾಮೇಧಾವಿ ಎಂದೇ ಪ್ರಸಿದ್ಧರಾದವರು. ಸಿದ್ಧ ವೈದ್ಯದಲ್ಲಿ ಸಾಕಷ್ಟು ನೈಪುಣ್ಯವನ್ನು ಪಡೆದವರು.ಅಗಸ್ತ್ಯ ಮುನಿಗಳ ತಾಯಿಯ ಹೆಸರು ಮಾನಿನಿ. ತಂದೆ ಪುಲಸ್ತ್ಯರು ಹೆಂಡತಿಯ ಹೆಸರು ಲೋಪಾಮುದ್ರಾ-ಮಗನ ಹೆಸರು ದೃಡಸ್ಯ ಸಹೋದರ-ವಿಶ್ರವಸ್ ಒಮ್ಮೆ ಸಮುದ್ರ ಮಂಥನ ಕಾಲದಲ್ಲಿ ಅಸುರರನ್ನು ಸಂಹರಿಸಲು ದೇವತೆಗಳು ಅಗಸ್ತ್ಯರ ಸಹಾಯವನ್ನು ಇಚ್ಛಿಸಿದರು. ಆಗ ಅಗಸ್ತ್ಯರು ತಮ್ಮ ತಪೋಬಲದಿಂದ ಸಮುದ್ರದ ನೀರನ್ನಷ್ಟೂ ಕುಡಿದರು. ನಂತರ ಅಸುರ ಸಂಹಾರವಾಯಿತು. ದೇವತೆಗಳು ಅಗಸ್ತ್ಯರು ತಾವು ಕುಡಿದ ನೀರನ್ನು ಮತ್ತೆ ಕೊಡಬೇಕೆಂದು ಪ್ರಾರ್ಥಿಸಿದರು. ಆದರೆ ಅದು ಅವರಿಗೆ ಸಾಧ್ಯವಾಗದೆ ಮೂತ್ರ ರೂಪದಲ್ಲಿ ಎಲ್ಲ ನೀರನ್ನೂ ಹೊರಚೆಲ್ಲಿದರು. ಆದ್ದರಿಂದ ಆ ನೀರು ಸಿಹಿಯ ರುಚಿಯನ್ನು ಕಳೆದುಕೊಂಡು ಉಪ್ಪು ನೀರಾಯಿತು ಎಂಬ ಪ್ರತೀತಿ ಇದೆ. ಅಗಸ್ತ್ಯರನ್ನು ಮಾನ, ಕಲಶಜ, ಕುಂಭಜ, ಕುಂಭಯೋನಿ - ಮೈತ್ರಾವರುಣ ಎಂದು ಮೊದಲಾಗಿ ಕರೆಯುವುದುಂಟು. ಇವರ ಹೆಸರು ಇಳಂಗೊ ಅಡಿಗಳ್ ಅವರ ಆದಿ ತಮಿಳು ಗ್ರಂಥ ಶಿಲಪ್ಪದಿಕಾರಂ ಹಾಗೂ ಮಣಿಮೇಖಲೈಗಳಲ್ಲಿ ಉಲ್ಲೇಖವಾಗಿದೆ.

ದಕ್ಷಿಣ ಭಾರತದಲ್ಲಿ ಅಷ್ಟಾಗಿ ಜೀವ ನದಿಗಳು ಇರಲಿಲ್ಲ... ಇದನ್ನು ಕಂಡ ಅಗಸ್ತ್ಯರು ಬ್ರಹ್ಮನನ್ನು ಕುರಿತು ದೀರ್ಘ ತಪಸ್ಸು ಮಾಡಿದರು. ಹೀಗಾಗಿ ಬ್ರಹ್ಮನ ವರದಿಂದ ಕಾವೇರಿ ನದಿಯು ದಕ್ಷಿಣದೇಶದಲ್ಲಿ ಹರಿದು ದಕ್ಷಿಣಗಂಗೆಯೆಂದೇ ಪ್ರಸಿದ್ಧವಾಯಿತು. ಅಗಸ್ತ್ಯಮಹಾಮುನಿಗಳಿಗೆ ಸಾಕ್ಷತ್ ಶಿವನ ಪುತ್ರ ಷಣ್ಮುಖನೇ ಸಿದ್ಧ ವೈದ್ಯವನ್ನು ಕಲಿಸಿದರು ಎಂಬುದು ಪ್ರಚಲಿತವಾಗಿದೆ.

(ಸಶೇಷ)



# ಶ್ರೀನಿವಾಸನ ಕಂಡ ಶ್ರೀ ವ್ಯಾಸರಾಯರು

– ಡಾ|| ರಾಮಚಂದ್ರ ದಾಸ್ ಸಿ.ಜೆ.
9483384584



ಅಧ್ಯಾತ್ಮಿಕ ಜಗತ್ತು ಕಂಡ ಅತ್ಯದ್ಭುತ ವೈಡೂರ್ಯ ಶ್ರೀ ವ್ಯಾಸರಾಜರು. ವಿಜಯನಗರದ ಇತಿಹಾಸದಲ್ಲಿ, ಧೃವ ನಕ್ಷತ್ರದಂತೆ ಬೆಳಗುತ್ತ, ಮಾಧ್ವವಾಙ್ಮಯಕ್ಕೆ ಅಪೂರ್ವಕೊಡುಗೆ ನೀಡಿದ, ವಿಜಯನಗರದ ಚಕ್ರವರ್ತಿಗಳೆನಿಸಿ ಕರ್ನಾಟಕ ವಿದ್ಯಾಸಿಂಹಾಸನಾಧೀಶ್ವರ ಎಂಬ ಬಿರುದಾಂಕಿತರಾಗಿ, ಭೂವೈಕುಂಠವೆನಿಸಿದಂತಹ ತಿರುಪತಿಯ ಆಡಳಿತ ಹನ್ನೆರಡು ವರುಷ ಮಾಡಿ,ಪುನಃ ಅದರ ಅರ್ಚಕ ಸಂತತಿಯವರಿಗೆ ವಹಿಸಿಕೊಟ್ಟ ನಿಸ್ಪೃಹರು.ತಾವು ಸ್ವಯ ಸಿಂಹಾಸನಾರೂಢರಾಗಿದ್ದಾಗ ಧರ್ಮರಕ್ಷಣೆಗಾಗಿ ದಾನ ದತ್ತಿಗಳನ್ನು ನೀಡಿದಂತಹ ಮಹಾನುಭಾವರು. ಇವರ ಶಿಷ್ಯ ಪರಂಪರೆಯಲ್ಲಿ ದಿಗ್ಗಜಗಳಂತಿದ್ದ ಶ್ರೀವಾದಿರಾಜರು, ಶ್ರೀ ವಿಜಯೀಂದ್ರರು, ಶ್ರೀ ಶ್ರೀನಿವಾಸ ತೀರ್ಥರು. ಶ್ರೀ ಪುರಂದರದಾಸರು, ಶ್ರೀಕನಕದಾಸರಂತಹ ರತ್ನಗಳನ್ನು ಸಮಾಜಕ್ಕೆ ನೀಡಿದ ಹೆಗ್ಗಳಿಕೆ ಇವರದು.

### ಶ್ರೀ ವ್ಯಾಸರಾಜರ ಅವತಾರ

ಶ್ರೀ ಗೋಪಾಲದಾಸರು “ನಿನ್ನದೊಂದು ಕಾರ್ಯವು ದ್ವಂದ್ವವಾಯಿತು.” ಎಂಬ ಉಕ್ತಿಯಂತೆ. ವ್ಯಾಸರಾಜರ ಅವತಾರಕ್ಕೆ ಅನೇಕ ಕಾರಣಗಳು ಪೋಷಕವಾಗಿವೆ.ಬ್ರಹ್ಮಣ್ಯ ತೀರ್ಥರು ಬದರಿನಿವಾಸಿ ವೇದವ್ಯಾಸಾತ್ಮಕ ನಾರಾಯಣನನ್ನು ಅತ್ಯಂತ ಭಕ್ತಿಯಿಂದ ಸೇವಿಸಿ ಶ್ರೀ ಮದಾಚಾರ್ಯರು ಸ್ಥಾಪಿಸಿದ ಈ ವೇದಾಂತ ಸಾಮ್ರಾಜ್ಯವನ್ನು ಸಮರ್ಥವಾಗಿ ನಿರ್ವಹಿಸಬಲ್ಲ ತಮ್ಮ ಉತ್ತರಾಧಿಕಾರಿಯಾಗುವ ಜ್ಞಾನ ಪೂರ್ಣ ನಾದವನನ್ನು ದಯಪಾಲಿಸು ಸ್ವಾಮಿ...ಎಂದು ಆತನ ಚರಣಾರವಿಂದಲ್ಲಿ ಮೊರೆ ಹೊಕ್ಕಿದ್ದರ ಪರಿಣಾಮವಾಗಿ, ಸ್ವಯಂ ನಾರಾಯಣನೇ “ಜ್ಞಾನಪುತ್ರನನ್ನು ಕರುಣಿಸುವೆ” ಎಂಬುದಾಗಿ ಅನುಗ್ರಹಿಸಿದ್ದನ್ನು, ಶ್ರೀ ಪುರಂದರದಾಸರು “ಅಂದು ಬ್ರಹ್ಮಣ್ಯ ತೀರ್ಥರಿಗೆ ಬದರಿಯಲಿ ಮುದದಿಂದಲಿ ನರನಾರಾಯಣರು, ಕಂದನಾ ಕೊಡುವೆನೆಂದು ಭೀಕ್ಷೆಯ ನೀಡೆ.. ಎಂಬುದಾಗಿ ವರ್ಣಿಸಿದ್ದಾರೆ. ಪ್ರಹ್ಲಾದರಾಜರೇ ಯತಿರೂಪದಲ್ಲಿ ಅವತರಿಸುವನೆಂಬ ವಿಷಯ ಸೂರ್ಯಾಂಶರಾದ ಬ್ರಹ್ಮಣ್ಯತೀರ್ಥರಿಗೆ ವೇದ್ಯವಾಯಿತು. “ಪ್ರಹ್ಲಾದ ದೇವನೇ ವ್ಯಾಸಮುನಿ ರಾಘವೇಂದ್ರರು ಅಹುದೆಂದು ಭಜಿಸಿರೋ ವಿಜಯವಿಠಲನೆಂದು”.

ಈಗಿನ ಮೈಸೂರು ಜಿಲ್ಲೆಯಲ್ಲಿನ ಬನ್ನೂರಿನಲ್ಲಿ ಬಲ್ಲಣ ಸುಮತಿ (ರಾಮಾಚಾರ್ಯ) ದಂಪತಿಗಳು ಗಂಡು ಸಂತಾನಕ್ಕಾಗಿ ಹರಿವಾಯು ಗುರುಗಳನ್ನು ಅನನ್ಯ ಭಕ್ತಿಯಿಂದ ಉಪಾಸಿಸುತ್ತಿದ್ದರ ಪರಿಣಾಮ, ಒಂದು ರಾತ್ರಿ ಸ್ವಪ್ನದಲ್ಲಿ ವೇದವ್ಯಾಸರೂಪಿ ನಾರಾಯಣನು ಕಾಣಿಸಿಕೊಂಡು” ನೀವು ಯತಿವರೇಣ್ಯರ ಕೃಪಾನುಗ್ರಹವನ್ನು ಸಂಪಾದಿಸಿ, ನಿಮಗೆ ಜಗನ್ ಮಾನ್ಯವಾದ ಸತ್ಪುತ್ರನೊಬ್ಬನು ಜನಿಸುತ್ತಾನೆ.” ಎಂದು ಹೇಳಿ, ಆ ಯತಿವರೇಣ್ಯರ ರೂಪವನ್ನು ತೋರಿಸಿ ಅದೃಶ್ಯನಾದನು. ತಕ್ಷಣ ಎಚ್ಚರಗೊಂಡ ದಂಪತಿಗಳಿಗೆ,ಆ ಯತಿಗಳು ಶ್ರೀ ಬ್ರಹ್ಮಣ್ಯ ತೀರ್ಥರೆಂಬುದು ಖಾತ್ರಿಯಾಯಿತು.ಕೂಡಲೇ ಅವರು ಅಬ್ಬೂರಿನಲ್ಲಿದ್ದ. ಶ್ರೀಗಳವರ ಬಳಿ ತಮ್ಮ ಸ್ವಪ್ನ ವೃತ್ತಾಂತವನ್ನು ಅರುಹಿದಾಗ, ಬದರಿನಾರಾಯಣನ ಅನುಗ್ರಹವನ್ನು ಸ್ಮರಿಸಿದ ಶ್ರೀಗಳು ಆನಂದ ತುಂದಿಲರಾಗಿ, ಆ ದಂಪತಿಗಳನ್ನು ಕುರಿತು ನಿಮಗೆ ಇಬ್ಬರು ಗಂಡು ಮಕ್ಕಳಾಗುತ್ತಾರೆ. ಅವರಲ್ಲಿ ಒಬ್ಬ ಮಗನನ್ನು

ಭೂಸ್ಪರ್ಷವಾಗದಂತೆ ಶ್ರೀಮಠಕ್ಕೆ ಒಪ್ಪಿಸಬೇಕೆಂದು ಹೇಳಿದಾಗ, ಅವರು ಸಂತೋಷಚಿತ್ತರಾಗಿ ಒಪ್ಪಿಕೊಂಡರು. ಪರಿಣಾಮವಾಗಿ, ಪ್ರಭವ ಸಂವತ್ಸರದ ವೈಶಾಖ ಶುದ್ಧ ಸಪ್ತಮಿ, ಭಾನುವಾರ, ದಿನಾಂಕ 22-4-1447 ರಂದು ಪ್ರಹ್ಲಾದ ರಾಜರು ಅಂದರೆ, ಕರ್ಮಜ ದೇವತೆಯಾದ ಶಂಖುಕರ್ಣರು ಭುವಿಯಲ್ಲಿ ಭಗವಂತನ ಕಾರ್ಯಾರ್ಥವಾಗಿ, ಬನ್ನೂರಿನ ಅಗ್ರಹಾರದಲ್ಲಿ ಅವತರಿಸಿದರು. ಶ್ರೀಗಳವರ ಆಜ್ಞೆಯಂತೆ, ಮಗುವಿಗೆ ಭೂಸ್ಪರ್ಷವಾಗದಂತೆ,ಚಿನ್ನದ ಹರಿವಾಣದಲ್ಲಿ ಮಲಗಿಸಿ ಅವರಿಗೆ ಒಪ್ಪಿಸಿದರು. ಈ ವಿಷಯವನ್ನು ಶ್ರೀನಿವಾಸ ತೀರ್ಥರು ಶ್ರೀ ವ್ಯಾಸವಿಜಯದಲ್ಲಿ ವರ್ಣಿಸಿದ್ದಾರೆ. "ಜನನಿ ಗರ್ಭದಿಂದ ಅವನಿ ಸ್ಪರ್ಷವಾಗದೆ ಜನಿಸಿ ಬ್ರಹ್ಮಣ್ಯ ಮುನಿಗಳ ಕೋಲೆ" ಎಂಬುದಾಗಿ ಮೋಹನದಾಸರು ಕೋಲು ಹಾಡಿನಲ್ಲಿ ವರ್ಣಿಸಿದ್ದಾರೆ. ಈ ಮಗುವು ಮುಂದೆ ಯತಿಯಾಗುವನೆಂದರಿತು "ಯತಿರಾಜ" ನೆಂದೇ ನಾಮಕರಣ ಮಾಡಿದರು.

ಯತಿರಾಜನಿಗೆ ಸಕರ್ಮ ಚೂಡಾಕರ್ಮ, ಅಕ್ಷರಾಭ್ಯಾಸ, ಗರ್ಭಾಷ್ಟಮದಲ್ಲಿ ಉಪನಯನ, ಗುರುಕುಲದಲ್ಲಿ ಶಾಸ್ತ್ರ, ಸಾಹಿತ್ಯ,ಕಾವ್ಯ ಇತ್ಯಾದಿ ಗ್ರಂಥಗಳ ಅಭ್ಯಾಸದ ನಂತರ ಶ್ರೀಬ್ರಹ್ಮಣ್ಯತೀರ್ಥರು, ಶ್ರೀಮುಖವನ್ನು ರಾಮಾಚಾರ್ಯ ದಂಪತಿಗಳಿಗೆ ಕಳಿಸಿ, ಯತಿರಾಜನನ್ನು ಶ್ರೀಮಠಕ್ಕೆ ಕರೆತರುವಂತೆ ಸೂಚಿಸಿದರು. ಕೊಟ್ಟಮಾತನ್ನು ಉಳಿಸಿಕೊಳ್ಳುವುದರ ವಿನಾ ಅನ್ಯಮಾರ್ಗವಿಲ್ಲವೆಂದು ಆ ದಂಪತಿಗಳು ಯತಿರಾಜನನ್ನು ಶ್ರೀಗಳವರ ಚರಣದಲ್ಲಿ ಒಪ್ಪಿಸಿದರು. ಆಗ ಶ್ರೀಗಳವರು ದಂಪತಿಗಳ ಸತ್ಯ ನಿಷ್ಠೆಯನ್ನು ಕಂಡು, ಭದ್ರ ಬಲ್ಲಣ, ಪೂರ್ವದಲ್ಲಿ ಹರಿಶ್ಚಂದ್ರನೇ ಮೊದಲಾದವರು ಸತ್ಯಸಂಧರಾಗಿ ಹೋದರು. ಅವರೆಲ್ಲರಿಗಿಂತ ನೀನು ಅಧಿಕನೆನೆಸಿದ ಜ್ಞಾನ ಸಾಗರನಾದ ಯತಿರಾಜನನ್ನು ನಮ್ಮ ಸಂಸ್ಥಾನಕ್ಕೆ ಒಪ್ಪಿಸಿ ಮಹೋಪಕಾರ ಮಾಡಿದ್ದೀಯ ಯತಿರಾಜ "ಯತಿರಾಜ" ನಾಗುವನೆಂದೇ ಹರಿಸಿದರು. ಅವನ, ಬ್ರಹ್ಮ ತೇಜಸ್ಸಿನಿಂದ ಕಂಗೊಳಿಸುತ್ತಿದ್ದ, ಮುದ್ದು ಸುರಿಯುವಂತಿದ್ದ ಆ ಮುಗ್ಧ ಮುಖವನ್ನು ಪರಮ ವಿರಕ್ತರಾದ ಬ್ರಹ್ಮಣ್ಯತೀರ್ಥರೇ ಮಂತ್ರ ಮುಗ್ಧರಾಗಿ ನೋಡುತ್ತಾ, ಆನಂದಿಸುತ್ತಾ ಕುಳಿತು ಬಿಡುತ್ತಿದ್ದರು. ಅವನ ಬಾಲಲೀಲೆಗಳು, ಶ್ರೀಗಳವರಿಗೆ ಬಾಲಕೃಷ್ಣನನ್ನು ನೆನಪಿಸಿ, ಧನ್ಯತಾ ಭಾವವನ್ನು ಹೊಂದುತ್ತಿದ್ದರು.

ಏಕ ಸಂಧಿಗ್ರಾಹಿಯಾದ ಯತಿರಾಜನಿಗೆ ಹೆಚ್ಚುಕಾಲ ಪಾಠ ಹೇಳುವ ಅವಶ್ಯಕತೆ ಕಂಡುಬರಲಿಲ್ಲ. ಅವನ ಪಾಂಡಿತ್ಯ ವಿನಯಾದಿ ಸದ್ಗುಣಗಳಿಗೆ ಮೆಚ್ಚಿ ಮನಸಾರೆ ಹರಸುತ್ತಿದ್ದರು. ಸಮಯ ನೋಡಿ ಸನ್ಯಾಸಾಶ್ರಮ ನೀಡುವುದೊಂದೆ ಬಾಕಿ ಉಳಿಯಿತು. ತಾನಾಗಿಯೇ ಕೇಳಲೆಂದು,ತಮ್ಮ ಮನೋಗತವನ್ನು ಬ್ರಹ್ಮಣ್ಯತೀರ್ಥರು ಯತಿರಾಜನಿಗೆ ತಿಳಿಸಲಿಲ್ಲ, ಅವನು ಗುರುಗಳ ಮನೋಗತವನ್ನು ತಿಳಿದು ಗಾಬರಿಯಾಗಿ,ತನ್ನಲ್ಲಿ ತಾನೇ, ನಾನೆಂದರೇನು? ನನ್ನ ವಯಸ್ಸೇನು? ನನ್ನ ಯೋಗ್ಯತೆಯೇನು? ಸನ್ಯಾಸ ಧರ್ಮವನ್ನು ಪಾಲಿಸುವ ಶಕ್ತಿ ನನಗಿದೆಯೇ? ಶ್ರೀಮದಾಚಾರ್ಯರ ಪೀಠದಲ್ಲಿದ್ದ ವೇದಾಂತ ಸಾಮ್ರಾಜ್ಯವನ್ನು ನಿರ್ವಹಿಸಬಲ್ಲೆನೆ? ಎಂದು ಮೊದಲಾಗಿ ಸ್ವಗತದಿಂದ ಚಿಂತಿಸುತ್ತ, ನಿಂತಲ್ಲಿ ನಿಲ್ಲಲಾರದೆ, ಮಧ್ಯಾಹ್ನದ ಸುಡುಬಿಸಿಲಿನಲ್ಲಿಯೇ, ಎಲ್ಲಿಗೆ ಹೋಗುತ್ತಿರುವೆನೆಂಬುದರ ಪರಿವೇ ಇಲ್ಲದೆ ಮಠದಿಂದ ಹೊರಟು, ನಡೆದು, ಆಯಾಸದಿಂದ ವನದ ಮಧ್ಯದ ಒಂದು ಮರದ ನೆರಳಲ್ಲಿ ಕುಳಿತು, ಹಾಗೆಯೇ ನಿದ್ರೆಗೆ ಜಾರಿದನು. ಅವನ ಮನೋ ಭೂಮಿಕೆಯಲ್ಲಿ, ಗರುಡಾರೂಢನಾದ ಲಕ್ಷ್ಮೀನಾರಾಯಣರನ್ನು ನಾರದಾದಿ ಮಹಾಮುನಿಗಳು, ದೇವತೆಗಳು ಸ್ತೋತ್ರ ಮಾಡುತ್ತಿರುವಂತೆ ಕಾಣಿಸಿತು. ಆಗ ಶ್ರೀ ನಾರಾಯಣನು ಯತಿರಾಜಾ, ನೀನು ನನ್ನ ಪರಮ ಪ್ರಿಯನಾದ ಭಾಗವತೋತ್ತಮನಾದ ಪ್ರಹ್ಲಾದನು, ಬ್ರಹ್ಮನು ನೀಡಿದ ಶಾಪವೇ ನಿನಗೆ ಈಗ ವರವಾಗಿ ಪರಿಣಮಿಸಿ,ನಿನ್ನಿಂದ ಮಹತ್ತರವಾದ ದೇವತಾ ಕಾರ್ಯಸಾಧನೆಯಾಗ ಬೇಕಾಗಿದೆ. ನಿನ್ನ ಜೊತೆಗೆ ಋಜುಗಣಸ್ಥರಾದ ಲಾತವ್ಯರು,ನಾರದರು, ಯಮಧರ್ಮರಾಜ,ಎಲ್ಲಕ್ಕೂ ಮಿಗಿಲಾಗಿ ಸವಿತೃ ನಾಮಕ ಸೂರ್ಯಾಂಶರಾದ ಬ್ರಹ್ಮಣ್ಯತೀರ್ಥರಲ್ಲಿ ನಾನೇ ಬಿಂಬನಾಗಿ ನಿಂತು,ನಿನ್ನಿಂದಾಗ ಬಹುದಾದ ದೇವತಾ ಕಾರ್ಯಕ್ಕೆ ಅನುಗ್ರಹಿಸುತ್ತಿದ್ದೇನೆ. ನಿನ್ನ ಭವಿತವ್ಯತೆಯ ಬಗ್ಗೆ ಚಿಂತಿಸಬೇಡ ಎಂದು ಹೇಳಿದಂತಾಗಿ, ದಿಗ್ಗನೆದ್ದು ಕುಳಿತನು, ಭಗವದ್ದರ್ಶನದಿಂದ ಅವನ ಕಣ್ಣುಗಳಲ್ಲಿ ಆನಂದಭಾಷ್ಪವು ಧಾರಾಕಾರವಾಗಿ ಮೇರೆಮೀರಿ ಹರಿದು ಹೋಗುತ್ತಿತ್ತು, ಇದೇನು ಜಾಗ್ರತೆಯೋ? ಸ್ವಪ್ನವೋ? ನಾನೇಕೆ ಇಲ್ಲಿಗೆ ಬಂದೆ? ಎಂದೆಲ್ಲಾ ಯೋಚಿಸುತ್ತ, ಎಲ್ಲವೂ ಭಗವದಧೀನವೆಂದು ಚಿಂತಿಸಿ, ಲಜ್ಜಿತನಾಗಿ, ಮಠಕ್ಕೆ ಬಂದು ಗುರುಗಳೆದುರಿನಲ್ಲಿ ವಿನೀತಭಾವದಿಂದ ಕುಳಿತನು, ಸರ್ವವನ್ನು ಅರಿತ್ತಿದ್ದ ಶ್ರೀಗಳವರು, ಇಷ್ಟು ಕಾಲ ಎಲ್ಲಿದ್ದೆಯೆಂದು ಅವರೂ ಕೇಳಲಿಲ್ಲ, ಯತಿ ರಾಜನೂ ಹೇಳಲಿಲ್ಲ. ಕೇವಲ ಅವನನ್ನು ಮುಗುಳು ನಗೆಯಿಂದ ನೋಡಿ, ಅವನ ತಲೆಯನ್ನು ನೇವರಿಸಿದಾಗ, ಮೈಯಲ್ಲಿ ವಿದ್ಯುತ್ ಸಂಚಾರವಾದಂತಾಗಿ ಒಂದು ರೀತಿಯ ದೇವೋನ್ಮಾದಲ್ಲಿದ್ದನು. ಯಾರೂ ಅವನನ್ನು ಈ ಸಮಯದಲ್ಲಿ ಮಾತನಾಡಿಸಬಾರದೆಂದು ಗುರುಗಳು ಎಲ್ಲರಿಗೂ ಆದೇಶಿಸಿದ್ದರು. ದೇವೋನ್ಮಾದವೆಂದರೆ, ಅದೊಂದು ರೀತಿಯ ಸಮಾಧಿಸ್ಥಿತಿ, ಭಕ್ತಿ ಯೋಗಿಗಳಿಗೆ ಆಗಾಗ ಆಗುವ ಭಕ್ತಿ ಪಾರವಶ್ಯ ಇಂತಹ ಪಾರವಶ್ಯವನ್ನು ಹರಿದಾಸರುಗಳಲ್ಲಿ,

ಯತಿಗಳಲ್ಲಿ ಕಾಣಬಹುದಾಗಿದೆ. ಮಾರನೆಯದಿನ, ಯತಿರಾಜನು ಸಾಮಾನ್ಯ ಸ್ಥಿತಿಯಲ್ಲಿದ್ದುದನ್ನು ಕಂಡ ಗುರುಗಳು, ಅನೇಕ ತತ್ವಗಳು, ಯತ್ಯಾಶ್ರಮದ ಮಹತ್ವ ಹಾಗೂ ಅದನ್ನು ಸಾಧಿಸಲು ಬೇಕಾದ ಪರಿಕರಾದಿಗಳ ವಿಚಾರವನ್ನು ಬೋಧಿಸಿದರು. ಇದರಿಂದ ಪ್ರಭಾವಿತನಾಗಿ ಪಾರವಶ್ಯತೆಯಿಂದ ಗುರುಗಳ ಚರಣಾರವಿಂದದಲ್ಲಿ ಶಿರವಿಟ್ಟು, "ಮಹಾಸ್ವಾಮಿ-ನನಗೆ ಸನ್ಯಾಸಾಶ್ರಮ ಕೊಟ್ಟು ನನ್ನ ಸ್ವರೋಪೋದ್ಧಾರ ಮಾಡಬೇಕೆಂದು" ಪ್ರಾರ್ಥಿಸಿದನು.

ಬ್ರಹ್ಮಣ್ಯತೀರ್ಥರು ಶಿಷ್ಯನ ಪರಿಪಕ್ವದೆಶೆಯನ್ನು ಕಂಡು, ಅವನ ತಂದೆ ತಾಯಿಗಳಿಗೆ ತಿಳಿಸಿ, ಅವನಿಂದ ನಡೆಸಬೇಕಾದ ಆತ್ಮ ಶ್ರಾದ್ಧಾದಿ ಕರ್ಮಗಳನ್ನು ಮಾಡಿಸಿ, ಯತಿರಾಜನಿಗೆ ತುರೀಯಾಶ್ರಮವಿತ್ತು "ಶ್ರೀ ವ್ಯಾಸತೀರ್ಥರೆಂದು ನಾಮಕರಣ ಮಾಡಿದ್ದು, ವೇದವ್ಯಾಸರ ಅನುಗ್ರಹದಿಂದ ಜನಿಸಿದ್ದುದು ಮೊದಲ ಕಾರಣ' ಇವರ ತಂದೆಯು ವೇದವ್ಯಾಸರ ಉಪಾಸಕರಾಗಿದ್ದುದು ಎರಡನೆ ಕಾರಣ ಇವರ ಗುರುಗಳಿಗೆ ವೇದವ್ಯಾಸರ ಪ್ರೇರಣೆಯಾದುದು ಮೂರನೆಯ ಕಾರಣ, ಜನನದಾರಭ್ಯ ಪ್ರತಿಯೊಂದು ಘಟ್ಟದಲ್ಲೂ ವೇದವ್ಯಾಸ ರೂಪಿ ಶ್ರೀನಿವಾಸನ ಅನುಗ್ರಹವಾಗುತ್ತಿದ್ದುದು ನಾಲ್ಕನೇ ಕಾರಣ. ಆಶ್ರಮ ಸ್ವೀಕಾರದ ನಂತರ ಧರ್ಮಪ್ರಚಾರದ ನಿಮಿತ್ತ ದೇಶಪರ್ಯಟನ ಪ್ರಾರಂಭಿಸಿದರು. ಮಿಥಿಲೆಯಲ್ಲಿ ಅಜೇಯನಾಗಿದ್ದ ತಾರ್ಕಿಕ ಪಂಡಿತ ಪಕ್ಷಧರಮಿಶ್ರನನ್ನು ವಾದದಲ್ಲಿ ಸೋಲಿಸಿದರು. ಆ ಪಂಡಿತನು ವ್ಯಾಸತೀರ್ಥರನ್ನು ಮನಸಾರೆ ಕೊಂಡಾಡಿ ಭಾಗವತ ಧರ್ಮವನ್ನು ಅವಲಂಬಿಸಿದನು. ಈ ಸಮಯದಲ್ಲಿ ಅಸೂಯಾಪರರಾದ ಕೆಲವರು ಶ್ರೀಗಳವರಿಗೆ ವಿಷ ಪ್ರಯೋಗ ಮಾಡಿಸಿದರು.

ಅದ್ಭುತವೆಂದರೆ ಆ ವಿಷವು ಶ್ರೀಗಳಿಗೆ ಬಾಧಿಸಲಿಲ್ಲ ಕಾರಣ, ಶ್ರೀನಿವಾಸನು ಆ ವಿಷದಲ್ಲಿನ ಪ್ರಾಣಹರಣದ ಶಕ್ತಿಯನ್ನು ಉಪಮರ್ಧನಗೊಳಿಸಿದ್ದರಿಂದ ಯಾವ ತೊಂದರೆಯೂ ಆಗಲಿಲ್ಲ. ಇದರಿಂದ ಶ್ರೀಗಳವರ ಕೀರ್ತಿಯು ದಿಗಂತದೆತ್ತರಕ್ಕೆ ಹರಡಿತು. ಶ್ರೀ ಶ್ರೀಪಾದರಾಜರಲ್ಲಿ ಶಿಷ್ಯತ್ವವಹಿಸಿ, ಅವರಲ್ಲಿ ಶಾಸ್ತ್ರಾಭ್ಯಾಸ ಮಾಡಿದ್ದುದು ಅವರ ಕೀರ್ತಿಗೆ ಮತ್ತೊಂದು ಕಾರಣವಾಯಿತು.

ವಿಜಯನಗರದ ಅರಸ ಸಾಳುವ ನರಸಿಂಹ ಭೂಪಾಲನ ಕೋರಿಕೆಯಂತೆ, ಶ್ರೀಪಾದರಾಜರು ಶ್ರೀವ್ಯಾಸತೀರ್ಥರನ್ನು ರಾಜಗುರುಗಳಾಗಿ ಕಳುಹಿಸಿ, ತಿರುಪತಿಯಲ್ಲಿ ಅರ್ಚಕ ಸಂತತಿಯಲ್ಲಿನ ಒಬ್ಬ ಬಾಲಕನು ದೊಡ್ಡವನಾಗುವವರಿಗೆ ತಾವೇ ಸ್ವತಃ ಜಗದೊಡೆಯನಾದ ಶ್ರೀನಿವಾಸನ ಸೇವಾ ಕೈಂಕರ್ಯಗಳನ್ನು ಸುಮಾರು 12 ವರ್ಷಗಳ ಪರ್ಯಂತರ ಮಾಡಿದರು. ಜೊತೆಗೆ ರಾಜ್ಯಭಾರದ ಕಾರ್ಯಗಳಲ್ಲಿ ನಿಷ್ಣಾತರಾಗಿದ್ದುದರಿಂದ ಇವರಿಗೆ "ಶ್ರೀ ವ್ಯಾಸರಾಜ"ರು ಎಂದು ಹೆಸರಾಯಿತು, ನಂತರ ಶ್ರೀಕೃಷ್ಣ ದೇವರಾಯನು ತನ್ನ ಕುಹು ಯೋಗ (ಜ್ಯೋತಿಷ್ಯಶಾಸ್ತ್ರದ ಪ್ರಕಾರ ರಾಹು, ರವಿ, ಶನಿ, ಕುಜ ಗ್ರಹಗಳು ವಿಷ ಘಳಿಗೆಯಲ್ಲಿ ಚಂಡಾಲತ್ವವನ್ನು ಪಡೆದು ಶೂನ್ಯ ಚಂದ್ರ ತಿಥಿಯಾದ ಅಮಾವಾಸ್ಯೆಯಲ್ಲಿ ಮಕರರಾಶಿಯಲ್ಲಿ ಸಂಧಿಸುವ ಯೋಗ) ಪರಿಹಾರಕ್ಕಾಗಿ ತನ್ನ ಸಿಂಹಾಸನದಲ್ಲಿ ವ್ಯಾಸ ರಾಜರನ್ನು ಕೂಡಿಸಿ ಪಟ್ಟಾಭಿಷಿಕ್ತರನ್ನಾಗಿ ಮಾಡಿದ್ದರಿಂದ ಚಕ್ರ ವರ್ತಿಗಳಾಗಿದ್ದ ಕಾರಣ ಶ್ರೀಗಳವರಿಗೆ "ರಾಯ" ಶಬ್ದದಿಂದ ಸಂಬೋಧಿಸಲಾರಂಭಿಸಿದರು. (ದಿ. 8-1-1521, ವಿಕ್ರಮ ಸಂಪುಷ್ಯ ಬಹುಳ ಅಮಾವಾಸ್ಯೆ, ಕುಹುಯೋಗ ಸಂಭವಿಸಿದ ದಿನಾಂಕ)

ತಿರುಪತಿಯಲ್ಲಿ ಶ್ರೀನಿವಾಸನ ಸೇವೆ ನಿರಾತಂಕವಾಗಿ ನಡೆಯಲು, ವಿವಿಧ ವಿಭಾಗಗಳನ್ನು ರಚಿಸಿ ಎಲ್ಲವೂ ಒಂದಕ್ಕೊಂದು ಅನುಸರಿಸಿ ನಡೆಯುವಂತೆ ವ್ಯವಸ್ಥೆ ಮಾಡಿದ ಕೀರ್ತಿ ವ್ಯಾಸರಾಯರಿಗೆ ಸಲ್ಲುತ್ತದೆ. "ಈಸು ಮುನಿಗಳಿದ್ದೇನು ಮಾಡಿದರು, ವ್ಯಾಸಮುನಿ ಮಧ್ವಮತವನುದ್ಧರಿಸಿದ" ಎಂದು ಪುರಂದರ ದಾಸರು ಕೊಂಡಾಡಿದ್ದಾರೆ. ವ್ಯಾಸರಾಯರು ಶ್ರೀನಿವಾಸನನ್ನು ಕುರಿತ "ಪ್ರಾತಃಸ್ಮರಾಮಿ ರಮಯಾಸಹ ವೇಂಕಟೇಶಂ." ಎಂಬ ಸ್ತೋತ್ರವನ್ನು ರಚಿಸಿದ್ದಾರೆ.

ಭಾರತೀಯ ತತ್ವಶಾಸ್ತ್ರದ ಇತಿಹಾಸದ ದೃಷ್ಟಿಯಲ್ಲಿ ಶ್ರೀ ವ್ಯಾಸರಾಯರ ವ್ಯಕ್ತಿತ್ವವು ಅಸಾಧಾರಣವಾದುದು. ಇವರ ಪ್ರಭಾವ ಅಗಾಧವಾದದ್ದು. ವೈದಿಕ ಸಾಮ್ರಾಜ್ಯ ಪರಿಪಾಲನೆಯ ಜೊತೆಗೆ ವಿಜಯನಗರದ ಐದು ಅರಸರಿಗೆ ಕುಲಗುರುಗಳಾಗಿ ಶೋಭಿಸಿ, ಹಿಂದೂ ಧರ್ಮವನ್ನು ರಕ್ಷಿಸಿ, ವಿದ್ವಜ್ಜನ ಕಲ್ಪತರುವಾಗಿ ಶೋಭಿಸಿ ಶ್ರೀಕೃಷ್ಣದೇವರಾಯನ ಸಿಂಹಾಸನದಲ್ಲಿ ಪಟ್ಟಾಭಿಷಿಕ್ತರಾಗಿ, ಚಕ್ರವರ್ತಿಗಳೆನಿಸಿ, ಭಯಂಕರವಾದ ಕುಹುಯೋಗವನ್ನು ಪರಿಹರಿಸಿದರು, ಇದರ ಸೂಚನೆಯಾಗಿ ಸೋಸಲೆ ಶ್ರೀ ವ್ಯಾಸರಾಜ ಮಠದಲ್ಲಿ ಇಂದಿಗೂ ನಿತ್ಯ ದರ್ಬಾರ್ ನಡೆಯುತ್ತಿರುವುದು ಹೆಮ್ಮೆಯ ವಿಷಯ. ಆ ಸಮಯದಲ್ಲಿ ಅನೇಕ ಸತ್ಪಾತ್ರರಿಗೆ ಭೂಮಿ, ಕಾಣಿ, ಗ್ರಾಮ, ಸುವರ್ಣ ಇತ್ಯಾದಿಗಳನ್ನು ದಾನ ಮಾಡಿ ಜೀವನೋಪಾಯಕ್ಕೆ ಅವಕಾಶ ಮಾಡಿಕೊಟ್ಟು ತಮಗಾಗಿ ಏನೂ ಇಟ್ಟುಕೊಳ್ಳದ ನಿಸ್ಪೃಹರು.

ಶ್ರೀ ವಾದಿರಾಜರು, ಶ್ರೀ ಸುರೇಂದ್ರರು, ಶ್ರೀ ವಿಜಯೀಂದ್ರರು, ಶ್ರೀ ನಾರಾಯಣಯತಿಗಳು, ಶ್ರೀ ಗೋವಿಂದ ತೀರ್ಥರು, ಶ್ರೀ ಶ್ರೀನಿವಾಸ ತೀರ್ಥರಂಥ ಶ್ರೇಷ್ಠಯತಿಗಳಿಗೆ ಗುರುಗಳಾಗಿ

ಶೋಭಿಸಿದವರು. ಇದೂ ಅಲ್ಲದೆ ವಲ್ಲಭಾಚಾರ್ಯರು, ಕೃಷ್ಣ ಚೈತನ್ಯರು ಇವರಲ್ಲಿ ಶಿಷ್ಯತ್ವವಹಿಸಿದ್ದರು,ವ್ಯಾಸಸಾಹಿತ್ಯದ ಸೂರ್ಯನಂತೆ ಬೆಳಗಿದವರು. ಶ್ರೀ ಪುರಂದರದಾಸರು, ಶ್ರೀ ಕನಕದಾಸರಿಗೆ ಗುರುಗಳಾಗಿ ಹರಿದಾಸ ಪಂಥವನ್ನು ಬೆಳೆಸಿ ದಾಸಸಾಹಿತ್ಯವನ್ನು ಶ್ರೀಮಂತಗೊಳಿಸಿದವರು. ಇಡೀ ಭಾರತಕ್ಕೆ ಶ್ರೇಷ್ಠಗುರುಗಳೆನಿಸಿದ ಮಹಾತ್ಮರು.

ಶ್ರೀ ವ್ಯಾಸರಾಜರು ಯಂತ್ರೋದ್ಧಾರಕ ಪ್ರಾಣದೇವರ ಸಮೇತ ಒಟ್ಟು 732 ಪ್ರಾಣ ಪ್ರತೀಕಗಳನ್ನು ಪ್ರತಿಷ್ಠಾಪಿಸಿ ಜೀವಕಳೆ ತುಂಬಿದವರು. ಶ್ರೀ ಕೃಷ್ಣದೇವರಾಯನಿಂದ ಹಸಿರು ಛತ್ರಿ, ಒಂಟಿ ನಗಾರಿ ಗೌರವವನ್ನು ಪಡೆದವರು. ಸನಾತನ ಧರ್ಮದ ರಕ್ಷಕರಾಗಿ ಕಂಗೊಳಿಸಿದವರು. ವ್ಯಾಸತ್ರಯಗಳನ್ನು ರಚಿಸಿ ಸಾರಸ್ವತ ಲೋಕ ಶ್ರೀಮಂತಗೊಳಿಸಿದವರು. ಇವರ ನ್ಯಾಯ್ಯಾನುಸಂಧಾನ ಬಹುಶ್ರೇಷ್ಠವಾದುದು.

ಇಂತಹ ಮಹಾನುಭಾವರು, ಶ್ರೀವಿಳಂಬಿನಾಮ ಸಂವತ್ಸರದ ಫಾಲ್ಗುಣ ಬಹುಳ ಚತುರ್ಥಿ ಶನಿವಾರ ದಿ- 8-3-1539 ರಂದು ನವವೃಂದಾವನ ಗಡ್ಡೆಯಲ್ಲಿ ವೃಂದಾವನ ಪ್ರವೇಶ ಮಾಡಿದರು. "ಚಿತ್ತೈಸಿದ ವ್ಯಾಸರಾಯ ಚಿತ್ತಜನಯ್ಯನ ಸಭೆಗೆ.." ಎಂಬುದಾಗಿ ಪುರಂದರದಾಸರು ಸ್ತುತಿಸಿದಾಗ, ಜ್ಞಾನ ಸೂರ್ಯನು ಅಸ್ತಂಗತನಾದನೆಂದು ದುಃಖಿಸಿದವರಾರು. ಅವರು ತೋರಿದ ಮಾರ್ಗವೇ ನಮಗೆ ಸಾಧನೆಗೆ ಬೆಳಕು.



# ಸಂಸ್ಕೃತ ಕಲಿಯೋಣ...!! चतुर्थः पाठः ಪಾಠ-4

**ರಚನೆ :- ಮಹಾ ಮಹೋಪಾಧ್ಯಾಯ ಕಾಶಿ ಕೃಷ್ಣಾಚಾರ್ಯ**
**ನಿರ್ವಹಣೆ :- ಮಹಾ ಮಹೋಪಾಧ್ಯಾಯ ಸಮುದ್ರಾಲ ಲಕ್ಷ್ಮಣಯ್ಯ**

एते = ಇವರು , अद्य = ಇಂದು, आसन् = ಇದ್ದರು, के = ಯಾರು, एकदा = ಒಮ್ಮೆ,
आस्त = ನೀವು ಇರಿ, सर्वे = ಎಲ್ಲರೂ, सर्वदा = ಯಾವಾಗಲೂ, आस्म = ಇದ್ದೆವು.

## ಪ್ರಶ್ನೆ

१.एते अद्य कुत्रासन्? २.ते एकदा तत्रासन्। ३.यूयं सर्वदा अत्रास्त। ४. वयं कदा अत्रास्म? ५. तत्र के आसन्? ६. सर्वे तत्रासन्।
७. ते के? ८. वयं अद्य तत्र स्मः। ९. त्वम् अत्र नासीः। १०.बत! अहम् अत्रासम्।

1. ನೀವು ಯಾರು ? 2. ನಾವು ಇಲ್ಲಿ ಇದ್ದೇವೆ. 3.ಇಂದು ಅವನು 4.ನೀನು ಅಲ್ಲಿ ಇಲ್ಲವೇ? 5. ನಾವೆಲ್ಲ ಅಲ್ಲಿ ಇದ್ದೆವು. 6. ನೀವೆಲ್ಲರೂ ಅಲ್ಲಿದ್ದೀರಾ?
7. ಯಾರು ಇಂದು ಅಲ್ಲಿದ್ದಾರೆ? 8.ಅವರು, ಇವರು, ನಾವು ಅಲ್ಲಿದ್ದೆವು. 9. ನೀವು ಯಾವಾಗ ಅಲ್ಲಿ ಇದ್ದಿರಿ? 10. ನಾವು ಇಂದು ಅಲ್ಲಿದ್ದೇವೆ.

## ಉತ್ತರ

1. ಇವರು ಈ ದಿನ ಎಲ್ಲಿ ಇದ್ದರು? 2. ಅವರು ಒಂದು ಕಾಲದಲ್ಲಿ ಅಲ್ಲಿ ಇದ್ದರು. 3. ನೀವು ಯಾವಾಗಲೂ ಇಲ್ಲಿ ಇರುತ್ತಿದ್ದೀರಿ? 4. ನಾವು ಯಾವಾಗ ಇಲ್ಲಿ ಇದ್ದೆವು.
5. ಅಲ್ಲಿ ಯಾರು ಇದ್ದರು? 6. ಎಲ್ಲರೂ ಅಲ್ಲಿ ಇದ್ದರು. 7. ಅವರು ಯಾರು? 8. ನಾವು ಈ ದಿನ ಅಲ್ಲಿ ಇದ್ದೇವೆ 9.ನೀನು ಇಲ್ಲಿ ಇರಲಿಲ್ಲ 10. ಅಯ್ಯೋ ! ನಾನು ಇಲ್ಲಿ ಇದ್ದಿದ್ದೆ.

१. यूयं के? २. वयं अत्र आस्म। ३. अद्य सः तत्रास्ति। ४. किं त्वं तत्र नासीः? ५. वयं सर्वे तत्र आस्म।
६. यूयं सर्वे किं तत्र आस्त? ७. के अद्य तत्र सन्ति? ८. ते, एते, वयं तत्र आस्म। ९. यूयं कदा तत्र आस्त? १०. वयं अद्य तत्र आस्म।

# ಕರ್ನಾಟಕದ ವೈಷ್ಣವ ದೇವಾಲಯಗಳು

4



# ಕನಕಗಿರಿಯ ಕನಕಾ ಚಲಪತಿ ದೇವಾಲಯ


- ಕೆಂಗೇರಿ ಚಕ್ರಪಾಣಿ

9448386886


ಕನಕಗಿರಿಯು ಕೊಪ್ಪಳ ಜಿಲ್ಲೆ ಗಂಗಾವತಿ ತಾಲ್ಲೂಕಿನ ಒಂದು ಪಟ್ಟಣ. ಇದು ಗಂಗಾವತಿಯಿಂದ ಸುಮಾರು 25 ಕಿ.ಮೀ. ಉತ್ತರದ ಲಿಂಗಸುಗೂರು ಮಾರ್ಗದಲ್ಲಿದೆ. ಈ ಗ್ರಾಮದ ಮೂರು ದಿಕ್ಕುಗಳನ್ನು ಇಲ್ಲಿ ಹರಿಯುವ ಎರಡು ತೊರೆಗಳು ಸುತ್ತುವರೆದಿದೆ. ಕನಕಗಿರಿಯ ಸಮೀಪದಲ್ಲೇ ಮಸ್ಕಿಯಲ್ಲಿ ಅಶೋಕನ ಶಾಸನವು ದೊರೆತಿದ್ದು, ಅದರಲ್ಲಿ ಉಲ್ಲೇಖವಾಗಿರುವ ಸುವರ್ಣಗಿರಿ ಕನಕಗಿರಿಯೇ ಇರ ಬೇಕೆಂಬ ಅಭಿಪ್ರಾಯವಿದೆ. ಟಾಲಮಿಯ ಭೂಗೋಳದಲ್ಲಿ "ಕಲ್ಲಿಗೇರೀಸ್" ಎಂದು ಉಲ್ಲೇಖಿತವಾದ ಪ್ರದೇಶ ಕನಕಗಿರಿ ಇರಬೇಕೆಂದು ಊಹಿಸಲಾಗಿದೆ.

ಕನಕಗಿರಿಯಲ್ಲಿ ಕನಕಗಿರಿಯ ನಾಯಕರು ಎಂದು ಕರೆಯುವ ಗುಜ್ಜಲವಂಶದ ಪಾಳೆಯಗಾರರು ವಿಜಯನಗರ ಕಾಲದಲ್ಲಿದ್ದರು. ಕನಕಗಿರಿಯಲ್ಲಿ ಜಯಂತಿ, ಪುಷ್ಪಾ ಮತ್ತು ಗೋಪಿಕಾ ಎಂಬ ನದಿಗಳ ಸಂಗಮ ತೀರದಲ್ಲಿ ಕನಕಮುನಿ ಎಂಬ ಮಹಾ ಸನ್ಯಾಸಿ ತಪಸ್ಸನ್ನು ಕೈಗೊಂಡನು ಮತ್ತು ಹೊನ್ನಿನ ಮಳೆಯನ್ನು ಸತತವಾಗಿ ಸುರಿಸಿದನು ಎಂಬ ಐತಿಹ್ಯವಿದೆ.

ಕನಕಗಿರಿಯಲ್ಲಿ 701 ದೇವಾಲಯಗಳು, 701 ಬಾವಿಗಳು ಇದ್ದುದಾಗಿ ಹೇಳುವರು. ಕನಕಗಿರಿಯಲ್ಲಿರುವ ದೇವಾಲಯಗಳಲ್ಲಿಯೇ ಅತ್ಯಂತ ದೊಡ್ಡ ದೇವಾಲಯ ಶ್ರೀಲಕ್ಷ್ಮೀನರಸಿಂಹ ದೇವಾಲಯವಾಗಿರುವುದು ತಿರುಪತಿಯ ವೆಂಕಟೇಶ್ವರ ಸ್ವಾಮಿಯು ಇಲ್ಲಿ ಬಂದು ನೆಲಸಿರುವನೆಂದು ಆದುದರಿಂದ ಇದಕ್ಕೆ ಎರಡನೆಯ ತಿರುಪತಿ ಎಂತಲೂ ಕರೆಯುವರು.

ದೇವಾಲಯವು ವಿಜಯನಗರ ಕಾಲದಲ್ಲಿ ಕನಕಗಿರಿ ನಾಯಕ ಪರಸ ಉಡಿಚಪ್ಪನಾಯಕನಿಂದ ನಿರ್ಮಾಣವಾಗಿದೆ. ಕನಕಗಿರಿಯ ನರಸಿಂಹ ದೇವಾಲಯಕ್ಕೆ ಪ್ರೌಢದೇವರಾಯ, ನರಸಿಂಗರಾಯ, ಕೃಷ್ಣದೇವರಾಯ, ಅಚ್ಯುತರಾಯ, ರಾಮರಾಯ, ತಿರುಮಲರಾಯ ಮುಂತಾದ ವಿಜಯನಗರ ಅರಸರುಗಳು ದಾನದತ್ತಿಗಳನ್ನು ಬಿಟ್ಟಿರುವರು. ಕ್ರಿ.ಶ. 1675 ರಲ್ಲಿ ಗುಜ್ಜಲವಂಶದ ಇಮ್ಮಡಿ ಉಡಚನಾಯಕನ ಪತ್ನಿ ದೇವಾಲಯಕ್ಕೆ ಹಾಸುಗಲ್ಲನ್ನು ಹಾಕಿಸಿಕೊಟ್ಟಿರುವಳು.

ಕನಕಗಿರಿಯ ನರಸಿಂಹಸ್ವಾಮಿ ಆಲಯವು ಬಹು ದೊಡ್ಡ ಪ್ರಾಕಾರದಲ್ಲಿದ್ದು, ಪೂರ್ವ ಉತ್ತರ ದಕ್ಷಿಣ ದಿಕ್ಕಿನಲ್ಲಿ ಗೋಪುರಗಳಿವೆ. ದೇವಾಲಯವು ಗರ್ಭಗೃಹ ಅಂತರಾಳ. ನವರಂಗ, ಮಹಾರಂಗಮಂಟಪವನ್ನು ಹೊಂದಿದೆ. ಗರ್ಭಗೃಹದಲ್ಲಿ ಲಕ್ಷ್ಮೀನರಸಿಂಹಸ್ವಾಮಿಯು ವಿಗ್ರಹ ರೂಪದಲ್ಲಿದೆ ನಿರಾಕಾರವಾಗಿ ಸಾಲಿಗ್ರಾಮ ಶಿಲೆಯ ರೂಪದಲ್ಲಿದೆ ದೇವರಿಗೆ ಲೋಹದ ಮುಖವಾಡವನ್ನು ತೊಡಿಸಿರುತ್ತಾರೆ.

ರಂಗಮಂಟಪವು ಹಲವಾರು ಕಂಬಗಳನ್ನು ಒಳಗೊಂಡು ಹಂಪಿಯ ವಿರೂಪಾಕ್ಷ ದೇವಾಲಯದ ರಂಗಮಂಟಪದಂತೆಯೇ ಇದೆ. ಇದು 54 ಅಡಿ ಅಗಲ, 136 ಅಡಿ ಉದ್ದವಾಗಿದೆ. ಯಾಳಿಸ್ತಂಭಗಳನ್ನೊಳಗೊಂಡ ನವರಂಗದ ಕೆಲವು ಕಂಬಗಳ ಮೇಲೆ ಲಕ್ಷ್ಮೀನರಸಿಂಹ, ಯೋಗಾ ನರಸಿಂಹ,



ಗೋಪಾಲಕೃಷ್ಣ, ಹನುಮಂತ, ಮುಂತಾದ ದೇವತೆಗಳ ಶಿಲ್ಪಗಳಿವೆ. ಗರ್ಭಗುಡಿಗೆ ಅಂದವಾದ ಶಿಖರವಿದೆ. ನರಸಿಂಹ ದೇವಾಲಯಕ್ಕೆ ಹೊಂದಿಕೊಂಡಂತೆ ಲಕ್ಷ್ಮೀ ದೇವಾಲಯವಿದ್ದು, ಗರ್ಭಗುಡಿಯಲ್ಲಿ ಲಕ್ಷ್ಮಿಯ ಅಂದವಾದ ಮೂರ್ತಿಯಿದೆ, ಮತ್ತು ದೇವಿಯ ಗುಡಿಗೂ ಅಂದವಾದ ಶಿಖರವಿದೆ.

ಈ ದೇವಾಲಯದ ಮತ್ತೊಂದು ವಿಶೇಷವೇನೆಂದರೆ ಪಂಚ ಶಿಖರಗಳ ದರ್ಶನ, ಗರ್ಭಗುಡಿಯ ಹಿಂಭಾಗದಲ್ಲಿ ನಿಂತು ನೋಡಿದರೆ ಐದು ಗೋಪುರಗಳ ದರ್ಶನ ಲಭಿಸುತ್ತದೆ. ಇದು ಬಹಳ ಪವಿತ್ರ ವೆಂದು ಆಸ್ತಿಕರ ನಂಬಿಕೆ. ಲಕ್ಷ್ಮೀನರ ಸಿಂಹ ದೇವಾಲಯಕ್ಕೆ ಹೊಂದಿ ಕೊಂಡಂತೆಯೇ ಏಕಶಿಲೆಯಲ್ಲಿ ಮಾಡಿದ ಸುಮಾರು 12 ಅಡಿ ಎತ್ತರದ ದಿವ್ಯವಾದ ಆಂಜನೇಯನ ಮೂರ್ತಿಯಿದೆ. ಸ್ವಾಮಿಯು ಪ್ರಣಾಮ ಭಂಗಿಯಲ್ಲಿದ್ದು ಕನಕಗಿರಿಯ ಹಾಗೂ ಸುತ್ತಮುತ್ತಲಿನ ಜನತೆ ಬಹಳ ಭಕ್ತಿಯಿಂದ ನಡೆದು ಕೊಳ್ಳುವರು.

ಕನಕಗಿರಿಯ ಲಕ್ಷ್ಮೀನರಸಿಂಹ ನನ್ನು ಕುರಿತು ದಾಸಶ್ರೇಷ್ಠರಾದ ಪುರಂದರದಾಸರು ಕೀರ್ತನೆಯನ್ನು ರಚಿಸಿರುವರು. ಮತ್ತೊಬ್ಬದಾಸರಾದ ವಿಜಯದಾಸರು ಕನಕಗಿರಿನಾಥನ ಮೇಲೆ ಸುಳಾದಿಗಳನ್ನು ರಚಿಸಿರುವರು. ಕನಕದಾಸರು ಕೆಲವು ದಿನಗಳ ಕಾಲ ಈ ದೇವಾಲಯದಲ್ಲಿ ತಂಗಿದ್ದು, ನಂತರ ತಿರುಪತಿಗೆ ತೆರಳಿದರೆಂದು ಹೇಳುವರು.



ಕನಕಗಿರಿಯ ನರಸಿಂಹ ಸ್ವಾಮಿಯನ್ನು ಇಲ್ಲಿ ದೊರೆತಿರುವ ಶಾಸನದಲ್ಲಿ ಹೀಗೆ ಸ್ತುತಿಸಲಾಗಿದೆ.

ಶುಭಮಸ್ತು ! ಶ್ರೀ ಕನಕಗಿರಿ ನಾಥಾಯ ನಮಃ ಲಕ್ಷ್ಮೀನರಸಿಂಹ ಮುನೀಶ್ವರಂ

ಕನಕಾಚಲವಾಸಿನ ಪಾತವಃ ಸರ್ವಲೋಕೇಶಃ ವಾಂಚಿ ತಾರ್ಥ

ಪ್ರದಾಯಕಃ ಬ್ರಹ್ಮೇಂದ್ರ ಮಣಿ ಮಾಣಿಕ್ಯ ರಂಜಿತ ಶ್ರೀ ಪದಾಂಬುಜಂ

ಪಾತುವಃ ತ್ರಿಜಗತ್ಪತ್ತಿ॥


ಕನಕಗಿರಿಯಲ್ಲಿ ಈಗಲೂ ಅಷ್ಟಮಹಿಷಿ ಕೃಷ್ಣ ದೇವಾಲಯ, ಎದುರು ಹನುಮಪ್ಪ ದೇವಾಲಯ, ನೀಲಕಂಠೇಶ್ವರ ದೇವಾಲಯ, ಪಂಪಾಪತಿ ದೇವಾಲಯ, ಪೇಟೆ ಬಸವಣ್ಣನ ದೇವಾಲಯ,ಮಲ್ಲಿಕಾರ್ಜುನ ದೇವಾಲಯ, ವೀರಭದ್ರ ದೇವಾಲಯ, ಶಂಕರಲಿಂಗ ದೇವಾಲಯ, ಮುಂತಾದ ದೇವಾಲಯಗಳು ಹಾಗೂ ಕಲಾತ್ಮಕವಾಗಿರುವ ವೆಂಕಟಪ್ಪನ ಬಾವಿ ಇದೆ.ವೆಂಕಟಪ್ಪನ ಬಾವಿಯು ಊರಿನ ಬಸ್ ನಿಲ್ದಾಣದ ಸಮೀಪವಿದ್ದು ಇಂಡೋ ಸಾರ್ಸನಿಕ್ ಶೈಲಿಯಲ್ಲಿದೆ ಆಳವಾದ ಕಲ್ಯಾಣಿ ಸುತ್ತಲೂ ಕೆತ್ತನೆಗಳಿಂದ ಕೂಡಿದ ಮಂಟಪ ಕಮಾನಿನಾಕಾರದ ಬಾಗಿಲುಗಳು, ಉಪ್ಪರಿಗೆ ಬಹಳ ಸೊಗಸಾಗಿವೆ. ಪ್ರಚಾರದ ಕೊರತೆಯಿಂದ ಹೆಚ್ಚು ಬೆಳಕಿಗೆ ಬಂದಿಲ್ಲವೆಂದು ಹೇಳಬಹುದು.

ಕನಕಗಿರಿಯ ಕನಕಾಚಲಪತಿಯ ರಥೋತ್ಸವವು ಪ್ರತಿವರ್ಷ ಹೋಳಿ ಹುಣ್ಣಿಮೆಯ ದಿನದಂದು ಪ್ರಾರಂಭವಾಗಿ ಎಂಟು ದಿನಗಳ ಕಾಲ ಜರುಗುವುದು.

"ಕಣ್ಣಿದ್ದವರು ಕನಕಗಿರಿ ನೋಡಬೇಕು. ಕಾಲಿದ್ದವರು ಹಂಪೆಗೆ ಹೋಗಬೇಕು" ಎಂಬ ನಾಣ್ಣುಡಿ ಈ ಪ್ರದೇಶದಲ್ಲಿ ಪ್ರಚಲಿತದಲ್ಲಿದೆ.

### ಹೀಗೆ ಬನ್ನಿ

ಕೊಪ್ಪಳ ಜಿಲ್ಲೆ ಗಂಗಾವತಿ ತಾಲ್ಲೂಕು, ಕನಕಗಿರಿ ಕನಕಾಚಲಪತಿಯನ್ನು ದರ್ಶಿಸಲು ಗಂಗಾವತಿಗೆ ಬಂದು ನಂತರ ಗಂಗಾವತಿ ಲಿಂಗಸುಗೂರು ಮಾರ್ಗದಲ್ಲಿರುವ ಕನಕಗಿರಿಯನ್ನು ಸೇರಬಹುದು. ಗಂಗಾವತಿಯಿಂದ ಕನಕಗಿರಿಯು ಸುಮಾರು 15 ಕಿ.ಮೀ. ದೂರವಿರುವುದು.



# ಪವಿತ್ರತೆಯ ಸರ್ವಶ್ರೇಷ್ಠ ಮಾಘಮಾಸ

**- ಶ್ರೀಮತಿ ಗಿರಿಜಾ ಎಸ್. ದೇಶಪಾಂಡೆ**

ಹಿಂದೂ ಧರ್ಮದಲ್ಲಿ ಪ್ರತಿಯೊಂದು ಮಾಸಕ್ಕೂ ಅದರದ್ದೇ ಆದ ಪ್ರಾಧಾನ್ಯತೆ ಇದೆ. ತಿಂಗಳುಗಳಲ್ಲಿ ಬರುವ 11 ನೇ ತಿಂಗಳೇ ಮಾಘಮಾಸ. ಪುಷ್ಯ ಮಾಸದ ಹುಣ್ಣಿಮೆಯಂದು ಬನದ ಅಂದರೆ ಬನಶಂಕರಿ ಹುಣ್ಣಿಮೆ ಆದರೆ ಮಾಘ ಮಾಸದಲ್ಲಿ ಇರುವ ಹುಣ್ಣಿಮೆ. ಭಾರತ ಹುಣ್ಣಿಮೆ ಕಾರ್ತಿಕ ಮಾಸಕ್ಕಿಂತಲೂ ಶ್ರೇಷ್ಠ ಮಾಸ ಮಾಘ ಮಾಸವಾಗಿದೆ.

ಪುಷ್ಯದಲ್ಲಿ ಬರುವ ಬನಶಂಕರಿ ಹುಣ್ಣಿಮೆ ಅಥವಾ ಬನದ ಹುಣ್ಣಿಮೆ ಒಂಬತ್ತು ದಿನದ ನವರಾತ್ರಿಯನ್ನು ಬನಶಂಕರಿ ದೇವಿ ಮನೆದೇವರು ಇರುವವರು ಆಚರಿಸಿ ಬನದ ದೇವತೆ ಬನಶಂಕರಿಯಾಗಿರುವುದರಿಂದ ಹುಣ್ಣಿಮೆಯ ಹಿಂದಿನ ದಿನ ಎಲ್ಲ ಪಲ್ಯಗಳನ್ನು ಮಾಡಿ ದೇವಿಗೆ ನವಣಕ್ಕಿ ಪಾಯಸ. ಎಲ್ಲ ಹಣ್ಣನ್ನು ಸೇರಿಸಿ ಸಿಹಿ,ಎಲ್ಲ ರೀತಿಯ ಸೊಪ್ಪು ಸೇರಿಸಿ ಪಲ್ಯ ಮಾಡಿ, ಬೆಂಡು, ಬತ್ತಾಸದಿಂದ ಮಾಡಿದ ಭಕ್ಷ್ಯ ಮಾಡಿ ದೇವಿಗೆ ನೈವೇದ್ಯ ಮಾಡುತ್ತಾರೆ. ಅದೇ ರೀತಿ ಮಾಘಮಾಸದಲ್ಲಿ ಭಾರತ ಹುಣ್ಣಿಮೆಯು ತುಳಜಾಭವಾನಿಯ ಹುಟ್ಟಿದ ಹಬ್ಬದ ಪ್ರಯುಕ್ತ ದೇವಿಗೆ ಹೋಳಿಗೆ ಪಾಯಸದ ನೈವೇದ್ಯ ಹೂರಣದ ಆರತಿ ಮಾಡಿ ಸಂಭ್ರಮದಿಂದ ಆಚರಿಸಿ ಎಷ್ಟೋ ಮನೆತನದಲ್ಲಿ ಪದ್ಧತಿ ಇರುವವರು ದೇವಸ್ಥಾನದಲ್ಲಿ ವಾದ್ಯ ಬಾರಿಸಿ ದೇವಿಗೆ ಗೊಂದಳ ಅನ್ನದ ಪದ್ಧತಿ ಮಾಡುತ್ತಾರೆ.

ದೇವಿಯ ಆರಾಧನೆಯಲ್ಲದೇ ಪುಷ್ಯ ಮಾಸದ ಹುಣ್ಣಿಮೆ ನಂತರದ ದಿನದಲ್ಲಿ ಆರಂಭವಾಗುವ ಇನ್ನೊಂದು ಆಚರಣೆಯೇ ಮಾಘಸ್ನಾನ, ಮಾಘ ಸ್ನಾನವೆಂದರೆ ಪವಿತ್ರ ಕ್ಷೇತ್ರಗಳಲ್ಲಿರುವ ಜಲಮೂಲಗಳಲ್ಲಿ ಮಾಡುವ ಪವಿತ್ರ ಸ್ನಾನ - ದೇವಾದಿ ದೇವತೆಗಳಾದ ಬ್ರಹ್ಮ,ವಿಷ್ಣು, ಮಹೇಶ್ವರ ಹಾಗೂ ಆದಿತ್ಯಾದಿ ದೇವತೆಗಳು ಮಾಘ ಮಾಸದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಪುಣ್ಯ ಸ್ನಾನ ಮಾಡುತ್ತಾರೆ. ಈ ತಿಂಗಳಲ್ಲಿ ಮಾಘಸ್ನಾನ ಮಾಡಿದರೆ ಪಾಪ ಕರ್ಮ ನಿವಾರಣೆಯಾಗುವುದೆಂಬ ನಂಬಿಕೆ ಇದೆ. ಮಾಘಸ್ನಾನವು ಪುಷ್ಯಮಾಸದ ಹುಣ್ಣಿಮೆಯೆಂದು ಪ್ರಾರಂಭವಾಗಿ ಮಾಘಮಾಸದ ಹುಣ್ಣಿಮೆಯಂದು ಮುಕ್ತಾಯವಾಗುತ್ತದೆ. ಮಾಘಮಾಸದ ವಿಶೇಷತೆಯೆಂದರೆ ಆ ಅವಧಿಯಲ್ಲಿ ಪ್ರತಿಯೊಂದು ಪ್ರಾಕೃತಿಕ ಜಲವು ಗಂಗೆಯಂತೆ ಪವಿತ್ರವಾಗುತ್ತದೆ.

ಮಾಘಸ್ನಾನಕ್ಕಾಗಿ ಉತ್ತರಭಾರತದ ಪ್ರಯಾಗ, ವಾರಣಾಸಿ, ನೈಮಿಷಾರಣ್ಯ, ಹರಿದ್ವಾರ ಹಾಗೂ ನಾಸಿಕ, ಗುಜರಾತಿನ ಪುಷ್ಕರ ಸರೋವರವು ಮಾಘ ಸ್ನಾನಕ್ಕೆ ಜನಪ್ರಿಯವಾದರೆ ಕನ್ಯಾಕುಮಾರಿ ರಾಮೇಶ್ವರಂನಲ್ಲಿ ಪವಿತ್ರ ಸ್ನಾನ ಮಾಡಿದರೆ ಕೋಟಿ ಪುಣ್ಯ ಬರುವುದೆಂಬ ನಂಬಿಕೆ ಇದೆ.ನಮ್ಮ ರಾಜ್ಯದಲ್ಲಿ ಕಾವೇರಿ, ತುಂಗಭದ್ರಾ, ಕೃಷ್ಣಾನದಿಗಳಲ್ಲಿ ಸ್ನಾನ ಮಾಡಿದರೆ ಪುಣ್ಯ ಸಿಗುವುದೆಂಬ ನಂಬಿಕೆ ನಮ್ಮಲ್ಲಿದೆ.

ಮಾಘ ಮಾಸದಲ್ಲಿ ಪವಿತ್ರ ಜಲಮೂಲಗಳಲ್ಲಿ ಸ್ನಾನ ಮಾಡಲು ಆಗದೇ ಇದ್ದಲ್ಲಿ, ಪುಷ್ಯ ಹುಣ್ಣಿಮೆಯಂದು ಅಂದರೆ ಬನಶಂಕರಿ ಹುಣ್ಣಿಮೆ,ಮಕರ ಸಂಕ್ರಾಂತಿ ಮೌನಿಅಮಾವಾಸ್ಯೆ ವಸಂತ ಪಂಚಮಿ,ಮಾಘ ಮಾಸದ ಭಾರತ ಹುಣ್ಣಿಮೆ ಮಹಾಶಿವರಾತ್ರಿಯಂದು ಮಾಡಬಹುದು.

ಮಾಘಸ್ನಾನದ ಮಹತ್ವ-ಮಾಘಸ್ನಾನದಿಂದ ಆಧ್ಯಾತ್ಮಿಕ ಶಕ್ತಿ.ಪ್ರಾಪ್ತಿಯಾಗುವುದರೊಂದಿಗೆ ಆರೋಗ್ಯವಂತ ಶರೀರ ಪಡೆಯಬಹುದು, ಪವಿತ್ರನದಿ ಮಹಾ ಸಂಗಮದಲ್ಲಿ ಸ್ನಾನ ಯಾರು ಮಾಡುತ್ತಾರೋ ಅವರು ಪಾಪದಿಂದ ಮುಕ್ತರಾಗುವರು. ಈ ಮಾಸದಲ್ಲಿ ಮಾಡುವ ವ್ರತ ದಾನ, ತಪಸ್ಸಿಗಿಂತ ತೀರ್ಥಸ್ನಾನ ಮಾಡಿದರೆ ಭಗವಾನ್‌ವಿಷ್ಣುವು ಪ್ರಸನ್ನವಾಗುತ್ತಾನೆ ಎಂದು ಪದ್ಮ ಪುರಾಣದಲ್ಲಿ ಹೇಳಲಾಗಿದೆ. ಯಾರು ಮಾಘಸ್ನಾನ ಮಾಡಿ, ವ್ರತ ಮಾಡಿ, ಶಂಖ, ಚಕ್ರದ ರಂಗೋಲಿ ಬಿಡಿಸಿ ವಿಷ್ಣುವಿಗೆ ಅರ್ಘ್ಯ ನೀಡಿದರೆ ಯಾವ ಜನ್ಮದಲ್ಲೂ ದಾರಿದ್ರ್ಯ ಬರುವುದಿಲ್ಲವೆಂದು ವಿಷ್ಣು ಪುರಾಣದಲ್ಲಿ ಉಲ್ಲೇಖ ಮಾಡಲಾಗಿದೆ.

ವೈಜ್ಞಾನಿಕವಾಗಿ ಮಾಘ ಮಾಸದ ಮೊದಲ ತಿಂಗಳು ಶೀತ ವಾತಾವರಣ ಹಾಗೂ ಮಂಜಿನ ಕಾರಣದಿಂದ ಸಮರ್ಪಕ ಸೂರ್ಯನ ಶಾಖ ಇರುವುದಿಲ್ಲ. ಇದರಿಂದ ಮನುಷ್ಯನ ದೇಹ ದುರ್ಬಲಗೊಳ್ಳುತ್ತದೆ. ಮಾಘ ಮಾಸದಲ್ಲಿ ಸೂರ್ಯನ ಕಿರಣಗಳು ಹೆಚ್ಚು ಶಾಖ ನೀಡುವುದರಿಂದ ನೀರಿನೊಳಗಿನ ಬ್ಯಾಕ್ಟೀರಿಯಾಗಳನ್ನು ನಾಶ ಮಾಡುತ್ತದೆ. ಸಾಮಾನ್ಯವಾಗಿ ಉಪ್ಪು ಪ್ರತಿ ಜೀವಕವಾಗಿ ಕಾರ್ಯನಿರ್ವಹಿಸುತ್ತದೆ ಹಾಗೂ ನಮ್ಮ ದೇಹವನ್ನು ಧರ್ಮವನ್ನು ಶುದ್ಧೀಕರಿಸುತ್ತದೆ. ಸುಮಾರು 48 ನಿಮಿಷಗಳ ಕಾಲ ಸಮುದ್ರ ಅಥವಾ ನದಿ ನೀರಿನಲ್ಲಿ ಸ್ನಾನ ಮಾಡುವುದರಿಂದ ನಮ್ಮ ಬಾಹ್ಯ ದೇಹವು ನಮ್ಮನ್ನು ಪುನಶ್ಚೇತನ ಗೊಳಿಸುವುದೆಂದು ನಂಬಿಕೆ ಇದೆ.



# ರಥಸಪ್ತಮಿ ಮಹತ್ವ ಮತ್ತು ಪೌರಾಣಿಕ ಹಿನ್ನೆಲೆ

ಶ್ರೀಮತಿ. ಕೆ.ವಿ. ಪದ್ಮಾವತಿ
99722 22791

ಬಾಲ್ಯದಲ್ಲಿ ಅಜ್ಜಿ ಪಾಡ್ಯ, ಬಿದಿಗೆ, ತದಿಗೆ...ಅಮಾವಾಸ್ಯೆಯವರೆಗೆ ಕಂಠ ಪಾಠ ಮಾಡಿಸುವಾಗ ಒಂದೊಂದು ತಿಥಿಗೂ ಒಂದೊಂದು ಹಬ್ಬವನ್ನು ಸೇರಿಸಿ ಹೇಳಿ ಕೊಡುತ್ತಿದ್ದರು.

ಪಾಡ್ಯ - ಯುಗಾದಿ ಪಾಡ್ಯ, ಬಿದಿಗೆ - ಭಾನು ಬಿದಿಗೆ, ತದಿಗೆ - ಅಕ್ಷ ತದಿಗೆ, ಚೌತಿ - ವಿನಾಯಕನ ಚೌತಿ .. ಹೀಗೆ

'ಸಪ್ತಮಿ'ಯ ಸರದಿ ಬಂದಾಗ ರಥಸಪ್ತಮಿ ಸೇರಿಕೊಳ್ಳುತ್ತಿತ್ತು ಸಮಯ ಸಿಕ್ಕಾಗಲೆಲ್ಲ ಹಬ್ಬಗಳ ಮಹತ್ವದ ಬಗ್ಗೆ ವಿವರಿಸುತ್ತಿದ್ದರು. ಹಬ್ಬಗಳು ಪ್ರತಿವರ್ಷ ಬರುತ್ತವೆ, ಹೋಗುತ್ತವೆ. ಆದರೆ ಅವುಗಳ ಆಚರಣೆಯ ಹಿಂದಿನ ಗೂಡಾರ್ಥ, ವೈಜ್ಞಾನಿಕ ಅಂಶಗಳನ್ನು ಅರಿತಾಗ ಅರ್ಥಪೂರ್ಣ ಆಚರಣೆಯಾಗುತ್ತದೆ. ಯುಗಾದಿ ಹೊಸತನವನ್ನು ಹೊತ್ತು ತಂದರೆ, ಅದಕ್ಕೂ ಮುನ್ನ ಬರುವ ರಥಸಪ್ತಮಿ ಹಳತರ ಜಾಗದಲ್ಲಿ ಹೊಸತನ್ನು ತಂದಿಟ್ಟು ಬದುಕನ್ನು ಆನಂದಮಯ ವಾಗಿಸಿಕೊಳ್ಳಲು ಪ್ರೇರೇಪಿಸುತ್ತದೆ. "ಮಾಘ ಮಾಸದ ಶುಕ್ಲ ಪಕ್ಷದ ಸಪ್ತಮಿ ತಿಥಿಯಂದು ದಿನ ಸೂರ್ಯ ಹಳೆಯ ರಥವನ್ನು ಬಿಟ್ಟು ಹೊಸ ರಥ ಹತ್ತುತ್ತಾನಂತೆ" ಅಂತ ಅಜ್ಜಿ ಹೇಳುತ್ತಿದ್ದುದು ನೆನಪಾಗುತ್ತದೆ.

ಅಲ್ಲದೆ ಈ ದಿನವನ್ನು ಸೂರ್ಯನ ಜನ್ಮ ದಿನವೆಂದೂ ಪ್ರಾಜ್ಞರು ಹೇಳುತ್ತಾರೆ. ಯಾವುದೇ ವಸ್ತು ಹಳೆಯದಾದ ಮಾತ್ರಕ್ಕೆ ಬದುಕು ಹಳತಾಗದು. ಅದು ನಿತ್ಯ ನವೀನ. ಹೀಗಾಗಿಯೇ ದೇಹ ಹಳತಾದಂತೆ ಹಳೆಯ ಬಟ್ಟೆ ಕಳಚಿ ಹೊಸದನ್ನು ಧರಿಸಿದಂತೆ ಅದನ್ನು ವಿಸರ್ಜಿಸಿ ಆತ್ಮ ಹೊಸತನ್ನು ಪಡೆಯುತ್ತದೆ ಎಂಬ ನಂಬಿಕೆಯಿದೆ. ಸೂರ್ಯನೂ ಹಾಗೆಯೇ, ಪ್ರತಿವರ್ಷ ರಥ ಬದಲಿಸಿ ತನ್ನ ಕಾರ್ಯವನ್ನು ಚುರುಕುಗೊಳಿಸುತ್ತಾನೆ. ತನ್ಮೂಲಕ ಭುವಿಯ ನಿವಾಸಿಗಳಿಗೆ ಚೈತನ್ಯ ನೀಡುತ್ತಾನೆ. ಈ ಹಿನ್ನೆಲೆಯಲ್ಲಿ ಆತನನ್ನು ಗೌರವಿಸುವ ಸಲುವಾಗಿ ಇಂದು (ಮಾಘ ಮಾಸ, ಶುಕ್ಲ ಪಕ್ಷದ ಸಪ್ತಮಿ ತಿಥಿ ) ದೇಶಾದ್ಯಂತ ರಥಸಪ್ತಮಿ ಆಚರಿಸಲಾಗುತ್ತಿದೆ. ಆರೋಗ್ಯಂ ಭಾಸ್ಕರಾದಿಚ್ಛೇತ್... ಚಳಿಗಾಲದಲ್ಲಿ ಮುದುಡುವ ಶರೀರ, ರಥಸಪ್ತಮಿಯ ಬಳಿಕ ಸೂರ್ಯನ ಶಾಖದಿಂದಾಗಿ ನವ ಚೈತನ್ಯ ತುಂಬಿಕೊಳ್ಳುತ್ತದೆ.

ಆರೋಗ್ಯಂ ಭಾಸ್ಕರಾದಿಚ್ಛೇತ್ ಅಂದರೆ ಸೂರ್ಯ ಆರೋಗ್ಯದಾಯಿ, ವೈಜ್ಞಾನಿಕವಾಗಿಯೂ ಇದು ಸಾಬೀತಾಗಿದೆ. ಹಸುಗೂಸಿನ ಕಣ್ಣುಗಳು ಸಾಮಾನ್ಯವಾಗಿ ಹಳದಿ ಬಣ್ಣಕ್ಕೆ ತಿರುಗಿದ ಸಂದರ್ಭದಲ್ಲಿ ಪ್ರತಿದಿನ ಎಳೆ

ಬಿಸಿಲಿಗೆ ಮಗುವನ್ನು ಮಲಗಿಸುವಂತೆ ವೈದ್ಯರು ಸಲಹೆ ನೀಡುತ್ತಾರೆ. ಚಂದ್ರನ ಬೆಳಕಿನಲ್ಲಿ ವಿಟಮಿನ್ 'ಬಿ' 12 ಇದ್ದರೆ ಸೂರ್ಯನ ಕಿರಣಗಳಲ್ಲಿ ವಿಟಮಿನ್ 'ಡಿ' ಹೇರಳವಾಗಿದೆ ಎಂಬುದು ಎಲ್ಲರಿಗೂ ತಿಳಿದಿರುವ ವಿಷಯ. ಹೀಗಾಗಿಯೇ ಪ್ರತ್ಯಕ್ಷವಾಗಿ ಕಾಣುವ ದೈವಸ್ವರೂಪಿ ಸೂರ್ಯನ ಆರಾಧನೆಗೆ ವಿಗ್ರಹಾರಾಧನೆ ಬಳಕೆಗೆ ಬರುವ ಮುಂಚಿನಿಂದಲೂ ಪ್ರಾಶಸ್ತ್ಯವಿದೆ. ಆಹಾರಕ್ಕಾಗಿ ರೋಗ ನಿವಾರಣೆಗಾಗಿ ಸೂರ್ಯೋಪಾಸನೆ ಮಾಡಬೇಕೆಂದು ಸ್ಕಂದ, ವರಾಹ ಪುರಾಣಗಳಲ್ಲಿಯೂ ಹೇಳಲಾಗಿದೆ. ರೋಗನಿವಾರಣೆ, ದೇಹದಾಢ್ಯ ಹಾಗೂ ಆರೋಗ್ಯವನ್ನು ಬಯಸುವವರು ಸೂರ್ಯನ ಆರಾಧನೆ ಮಾಡಬೇಕೆಂಬ ನಿಯಮವಿದೆ.

ರೋಗಾಣುಗಳನ್ನು ನಾಶ ಪಡಿಸುವ ಶಕ್ತಿ ಸೂರ್ಯನ ಕಿರಣಗಳಲ್ಲಿವೆ. ಬೆಳಗಿನ ಹಾಗೂ ಸಂಜೆಯ ಸೂರ್ಯ ಕಿರಣಗಳಿಂದ ಆರೋಗ್ಯ ವರ್ಧನೆಯಾಗುತ್ತದೆ.ರೋಗದಿಂದ ನರಳುವವರು ರಥಸಪ್ತಮಿಯ ದಿನದಿಂದಲಾದರೂ ಸೂರ್ಯಾರಾಧನೆಯನ್ನು ಮಾಡಿದರೆ ಅರ್ಥಾತ್ ಆತನ ಕಿರಣಗಳಿಗೆ ಸೂಕ್ತ ವೇಳೆಯಲ್ಲಿ ಮೈಯೊಡ್ಡಿದರೆ ಬೇಗ ಗುಣ ಹೊಂದುತ್ತಾರೆ ಎಂಬುದು ವೈಜ್ಞಾನಿಕವಾಗಿ ಸಾಬೀತಾಗಿದೆ.

ಸೂರ್ಯಾರಾಧನೆಯನ್ನು ಮುಖ್ಯವಾಗಿ ಭಾರತ, ಮಧ್ಯ ಆಫ್ರಿಕಾ,ಈಜಿಪ್ಟ್, ಗ್ರೀಸ್ ಹಾಗೂ ಮಧ್ಯ ಏಷ್ಯಾಗಳಲ್ಲಿ ಆಚರಿಸಲಾಗುತ್ತಿದೆ. 108 ಸೂರ್ಯ ನಮಸ್ಕಾರ ಯೋಗಾಸನಗಳಲ್ಲಿ ಮೊದಲ ಪ್ರಾಶಸ್ತ್ಯ ಸೂರ್ಯನಮಸ್ಕಾರಕ್ಕಿದೆ. ಏಕೆಂದರೆ ಈ ಅಭ್ಯಾಸವು ಮನಸ್ಸು,ದೇಹ ಮತ್ತು ಉಸಿರಾಟ ವ್ಯವಸ್ಥೆಗಳಿಗೆ ವಿಶೇಷವಾಗಿ ಪರಿಣಾಮಕಾರಿಯಾಗಿದೆ.

ಭೂಮಿಯಲ್ಲಿ ಸಕಲ ಜೀವರಾಶಿಗಳ ಚಟುವಟಿಕೆಗಳ ಸೂರ್ಯನಿಂದ ನಡೆಯುತ್ತಿದೆ. ಸೂರ್ಯನಿಲ್ಲದೆ ಜೀವನ ಅಸ್ತಿತ್ವ ಇರಲು ಸಾಧ್ಯವಿಲ್ಲ ಹೀಗಾಗಿ ರಥಸಪ್ತಮಿಯಂದು 108 ಸೂರ್ಯ ನಮಸ್ಕಾರಗಳು ಹಾಗೂ ಸಪ್ತಾಶ್ವಗಳ ಪ್ರತೀಕವಾಗಿ ಸಪ್ತ ನಮಸ್ಕಾರಗಳನ್ನು ಮಾಡುವ ಅಭ್ಯಾಸವಿದೆ.

**ಪೌರಾಣಿಕ ಹಿನ್ನೆಲೆಯೇನು?**

ದ್ವಾಪರ ಯುಗದಲ್ಲಿ ಶ್ರೀ ಕೃಷ್ಣನು ಧರ್ಮರಾಜನಿಗೆ ರಥಸಪ್ತಮಿ ಬಗ್ಗೆ ಹೇಳಿದ ಕಥೆಯಿದೆ. ಯಶೋವರ್ಮನೆಂಬ ರಾಜನಿಗೆ ಹುಟ್ಟಿದ್ದ ಮಗನಿಗೆ ಹುಟ್ಟಿನಿಂದಲೇ ರೋಗಿಷ್ಠನಾಗಿದ್ದ. ಈ ಬಗ್ಗೆ ಜ್ಯೋತಿಷಿಗಳಿಂದ ಮಾಹಿತಿ ಪಡೆದು ಸಂಚಿತ ಕರ್ಮದಿಂದ ಬಂದಿರುವ ಕಾಯಿಲೆಗೆ ರಥಸಪ್ತಮಿ ವ್ರತಾಚರಿಸಲು ಹೇಳಿದ್ದರು. ಅದರಂತೆ ಅಂದು ಸೂರ್ಯಾರಾಧನೆ ಮಾಡಲಾಗಿ




ರಾಜಪುತ್ರನು ಆರೋಗ್ಯವಂತನೂ, ಪ್ರಭಾವಶಾಲಿಯೂ ಆದನು. ಅಲ್ಲದೆ ಪಾಂಡವರು ವನವಾಸದ ಅವಧಿಯಲ್ಲಿ ಶ್ರೀ ಕೃಷ್ಣನ ಆದೇಶದಂತೆ ಸೂರ್ಯಾರಾಧನೆ ಮಾಡಿ ಆತನಿಂದ ಅಕ್ಷಯ ಪಾತ್ರೆಯ ಪಡೆದಿದ್ದರು. ಅಲ್ಲದೆ ರಾವಣನ್ನು ಗೆಲ್ಲ ಬೇಕಾದರೆ ಶ್ರೀರಾಮನು ಕೂಡ ಅಗಸ್ತ್ಯರ ಉಪದೇಶದಂತೆ ಆದಿತ್ಯಹೃದಯದ ಮೂಲಕ ಸೂರ್ಯನ ಆರಾಧನೆ ಮಾಡಿದನೆಂದು ರಾಮಾಯಣದಲ್ಲಿ ಹೇಳಿದೆ. ಸೂರ್ಯಾರಾಧನೆ ಮಾಡಿ, ಚಿನ್ನ ನೀಡುವ ಶಮಂತಕಮಣಿ ಪಡೆದ ಸತ್ರಾಜಿತನ ಕಥೆ ಹರಿವಂಶದಲ್ಲಿ ಬಂದಿದೆ.

ಮಯೂರನೆಂಬ ಕವಿ ಸೂರ್ಯಶತಕವೆಂಬ ಗ್ರಂಥ ಬರೆದು ಕಳೆದುಕೊಂಡ ಕಣ್ಣನ್ನು ಮತ್ತೆ ಪಡೆದನೆಂದು ಹೇಳುತ್ತಾರೆ. ಶ್ರೀರಾಮ ಸೂರ್ಯವಂಶದವನಾದರೆ ಕರ್ಣ, ಸುಗ್ರೀವ, ನವಗ್ರಹಗಳಲ್ಲಿ ಶನಿ ಹಾಗೂ ಯಮ ಸೂರ್ಯನ ಪುತ್ರರಾಗಿದ್ದಾರೆ.

ರಥಸಪ್ತಮಿಯಂದು ಸೂರ್ಯೋದಯಕ್ಕೆ ಸರಿಯಾಗಿ ನದಿ, ಸಮುದ್ರ, ಸರೋವರ, ಸಂಗಮ ಮುಂತಾದೆಡೆ ಸ್ನಾನ ಮಾಡಿ ಸೂರ್ಯನಿಗೆ ಅರ್ಘ್ಯ ನೀಡಿದರೆ ಪೂರ್ವಜನ್ಮದ ಪಾಪಗಳು ಹಾಗೂ ಈ ಜನ್ಮದ ಸಕಲ ದುಃಖಗಳು ಪರಿಹಾರವಾಗುತ್ತವೆ. ಸೂರ್ಯೋದಯಕ್ಕೆ ಮಾಡುವ ಮಾಘಸ್ನಾನ

ತುಂಬಾ ಪುಣ್ಯಪ್ರದವಾದುದು. ಆಯುಷ್ಯ ಆರೋಗ್ಯ ಸಂಪತ್ತು ಲಭಿಸುವುದಲ್ಲದೇ, ಸೂರ್ಯನ ಅನುಗ್ರಹ ಪ್ರಾಪ್ತಿಯಾಗುತ್ತದೆಂದು ಪುರಾಣಗಳು ಸಾರಿ ಸಾರಿ ಹೇಳುತ್ತಿವೆ. ಸೂರ್ಯನ ಆರಾಧನೆ ಋಗ್ವೇದದ ಕಾಲದಿಂದಲೂ ಪ್ರಚಲಿತದಲ್ಲಿದೆ.

ಪ್ರಾಚೀನ ವೈದಿಕ ಧರ್ಮದಲ್ಲಿ ಸೂರ್ಯನಿಗೆ ಅತ್ಯಂತ ಪ್ರಾಮುಖ್ಯತೆ ಇತ್ತು, ಆತನ ಆರಾಧನೆಯಿಂದಲೇ ಸೌರ ಪಂಥ ಹುಟ್ಟಿದ್ದು. ಕಾಲಗಣನೆಯಲ್ಲಿ ಸೌರಮಾನ ಎಣಿಕೆ ಇಂದಿಗೂ ಇದೆ. ಇನ್ನು, "ಭೂರ್ಭುವಸ್ವಃ". ಎಂಬ ಗಾಯತ್ರಿ ಮಂತ್ರದಲ್ಲಿನ ಪ್ರತಿಶಬ್ದವು ಸೂರ್ಯನ ಸಾಮರ್ಥ್ಯಗಳನ್ನು ಕೊಂಡಾಡುತ್ತದೆ.

ಎಕ್ಕದೆಲೆಯ ಸ್ನಾನ ಸೂರ್ಯನ ಕಿರಣಗಳಲ್ಲಿನ ಸತ್ವಗಳನ್ನು ಹೀರಿಕೊಂಡಿರುವ ಅರ್ಕದೆಲೆ ಅಥವಾ ಎಕ್ಕದೆಲೆಗಳನ್ನು ತಲೆ, ಭುಜ, ಕತ್ತು, ಕಂಕುಳು, ತೊಡೆ, ಪಾದಗಳ ಮೇಲಿರಿಸಿ ಸ್ನಾನ ಮಾಡುವುದು ರಥಸಪ್ತಮಿಯ ವಿಶೇಷತೆಗಳೊಲ್ಲೊಂದು. ಎಕ್ಕದ ಎಲೆಗಳಿಗೆ ಚರ್ಮಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ರೋಗಗಳನ್ನು ನಿವಾರಿಸುವ ಸಾಮರ್ಥ್ಯವಿದೆ, ಅಷ್ಟೇ ಅಲ್ಲದೇ, ದೇಹದಲ್ಲಿನ ಕೀಲು ನೋವು, ಹಲ್ಲುನೋವು, ಹೊಟ್ಟೆ ನೋವುಗಳಿಗೂ ಸಹ ಎಕ್ಕದ ಗಿಡ,ಅದರ ಎಲೆಗಳಲ್ಲಿರುವ ಔಷಧೀಯ ಅಂಶಗಳಿಂದ ಪರಿಹಾರ ಕಂಡುಕೊಳ್ಳಬಹುದಾಗಿದೆ. ಹೀಗಾಗಿಯೇ ಈ ದಿನ ಎಕ್ಕದೆಲೆಯ ಸ್ನಾನಕ್ಕೆ ಮಹತ್ವ ನೀಡಲಾಗಿದೆ.

ದೇವರೆಲ್ಲಿದ್ದಾನೆ ಎಂದು ಪ್ರಶ್ನಿಸುವ ಬದಲು ಪ್ರತ್ಯಕ್ಷವಾಗಿ ಕಾಣುವ ದೈವೀ ಸ್ವರೂಪಗಳಾದ,ಯಾವುದೇ ಜಾತಿಭೇದ, ಧರ್ಮದ ಚೌಕಟ್ಟಿಲ್ಲದ ಸೂರ್ಯ, ಚಂದ್ರ , ವೃಕ್ಷ ಬೆಟ್ಟ ನದಿ ನದಿಗಳ ಆರಾಧನೆಯನ್ನು ನಮ್ಮ ಪೂರ್ವಿಕರು ಆಚರಣೆಗೆ ತಂದಿರುವುದು ಎಷ್ಟೊಂದು ಅರ್ಥಪೂರ್ಣವಾಗಿದೆಯಲ್ಲವೇ?

ಪರಮಾತ್ಮನ, ವಾಯುದೇವರ ಆಜ್ಞೆಯಂತೆ ಕಾರ್ಯಗಳನ್ನು ನಿರ್ವಹಿಸುವ ದೇವತಾವರ್ಗದಲಿ, ನವಗ್ರಹಗಳಲ್ಲಿ ಮೊದಲ ದೇವತೆಯಾದ ಕರ್ಮಸಾಕ್ಷಿಯಾದ ಸೂರ್ಯದೇವರು ಜೀವರ ಎಲ್ಲಾ ಕರ್ಮಗಳಿಗೆ ಸಾಕ್ಷಿಯಾಗಿದ್ದಾರೆ. ಜಗತ್ ಚಕ್ಷುಗಳೆಣಿಸಿಕೊಂಡ ಸೂರ್ಯದೇವರು, ಎಲ್ಲರನ್ನು ಉಜ್ಜೀವನಗೊಳಿಸುತ್ತಾ ಗಾಯತ್ರಿ ನಾಮಕ ಪರಮಾತ್ಮನ ಕೃಪೆಗೆ ಪಾತ್ರರಾಗುವಂತೆ ಮಾಡುತ್ತಾರೆ.

ಸಕಲ ಗ್ರಹಬಲ ನೀನೇ ಸರಸಿಜಾಕ್ಷಾ ಎಂದು ಪರಮಾತ್ಮನನ್ನು ಗ್ರಹಗಳ ಅಂತರ್ಗತವಾಗಿಯೇ ಪ್ರಾರ್ಥನೆ ಮಾಡುವ ಕ್ರಮವನ್ನು ನಮ್ಮ ಯತಿಗಳು, ದಾಸಾರ್ಯರು ಎಲ್ಲರೂ ತೋರಿಸಿಕೊಟ್ಟಿದ್ದಾರೆ. ಶ್ರೀಮದ್ವಾದಿರಾಜ ಗುರು ಸಾರ್ವಭೌಮರು ತಮ್ಮ ನವಗ್ರಹ ಸ್ತೋತ್ರದಲ್ಲಿ ಸೂರ್ಯದೇವರನ್ನು ಭಾಸ್ವಾನ್ ಮೇ ಭಾಸಯೇತ್ ತತ್ವಂ ಎಂದು ಸ್ತುತಿಸಿದ್ದಾರೆ... ಇದನ್ನೇ ನಮ್ಮ ಮಾನವಿ ಪ್ರಭುಗಳು ತಮ್ಮ ತತ್ವ ಸುವ್ವಾಲಿಯಲ್ಲಿ

ಆದಿತ್ಯದೇವ ತ್ವತ್ಪಾದಯುಗಳಕೆ ಅಭಿ
ವಾದನವ ಮಾಳ್ಪೆ ಅನುದಿನ ಅನುದಿನದಿ ಸಜ್ಜನರ
ವ್ಯಾಧಿಗಳ ಕಳೆದು ಸುಖವೀಯೋ ॥

ಸಂಜ್ಞಾರಮಣ ನಿನಗೆ ವಿಜ್ಞಾಪಿಸುವೆನು ಸ -
ರ್ವಜ್ಞ ನೀನೆಂದು ಸರ್ವತ್ರ ಸರ್ವತ್ರ ಎನಗೆ ಬ್ರ -
ಹ್ಮಜ್ಞಾನ ಭಕುತಿ ಕರುಣಿಸೋ ॥

ಸೂರಿಗಮ್ಯನೆ ವಾಕ್ ಶರೀರಬುದ್ಧಿಜವಾದ
ಪಾರದೋಷಗಳ ಎಣಿಸದೆ ಎಣಿಸದೆ ಭಗವಂತ
ನಾರಾಧನೆಯನಿತ್ತು ಕರುಣಿಸೋ ॥

ಎಂದು ಪರಮಾದ್ಭುತವಾಗಿ ಸ್ತುತಿಸಿದ್ದಾರೆ.

ರೋಗಾದಿಗಳ ಕಳೆದು, ಆರೋಗ್ಯ ಭಾಗ್ಯ ನೀಡುವ ಸೂರ್ಯನನ್ನು ರಥಸಪ್ತಮಿಯ ಈ ವಿಶೇಷ ದಿನದಿ ಸದಾ ಆರೋಗ್ಯ ಭಾಗ್ಯ ನೀಡಿ ಸಲಹೆಂದು ಸೂರ್ಯದೇವರನ್ನು, ಅಂತರ್ಗತ ನಾರಾಯಣನನ್ನೂ ಸ್ಮರಣೆ ಮಾಡೋಣ ಸತ್ಕರ್ಮಗಳನು ಮಾಡಿಸಿ, ಅವುಗಳ ಸಾಕ್ಷಿಯಾಗುವಂತೆ ಪ್ರಾರ್ಥನೆ ಮಾಡುತ್ತಾ..

ಅಲ್ಲದೆ ನಮ್ಮ ಮಾಧ್ವರ ಪುಣ್ಯ ಅಂದರೆ ಸ್ವಯಂ ಸೂರ್ಯಾಂಶಜರಾದ ಶ್ರೀ ಬ್ರಹ್ಮಣ್ಯತೀರ್ಥರು ನಮಗಾಗಿಯೇ ಹುಟ್ಟಿ ಬಂದು ಇಂದಿಗೂ ಅವರ ಶರಣಾರ್ಥಿಗಳನ್ನು ಸದಾಕಾಲ ರಕ್ಷಣೆ ಮಾಡುತ್ತಲಿರುವುದು. ಶ್ರೀ ಬ್ರಹ್ಮಣ್ಯತೀರ್ಥರ ಅಂತರ್ಗತ ಪರಮಾತ್ಮನ ಕರುಣೆ ಸದಾ ನಮ್ಮೆಲ್ಲರ ಮೇಲಿರಲೆಂದು ಅವರಲ್ಲಿ ಶರಣು ಹೋಗುತ್ತಾ. ಇದೇ ಫೆಬ್ರವರಿ 19ನೇ ತಾರೀಖು ಅಂದರೆ ಮಾಘ ಮಾಸ ಶುಕ್ಲಪಕ್ಷದ ಸಪ್ತಮಿಯ ದಿನ. ಜಗತ್ತಿನ ಮುಂದುವರಿಕೆಗೆ ಚಾಲಕನಾದ ಶ್ರೀ ಸೂರ್ಯ ಭಗವಾನನು ಧನುರ್ ರಾಶಿಯಿಂದ ಮಕರ ರಾಶಿಗೆ ತನ್ನ ರಥವನ್ನೇರಿ ಹೋಗುತ್ತಾನೆ. ಅಂದರೆ ಇಂದಿಗೆ ಛಳಿಗಾಲವು ಮುಗಿದು ಬೇಸಿಗೆಯ ಕಾಲವು ಪ್ರಾರಂಭವಾಗುವುದು. ಸೂರ್ಯನು ತನ್ನ ಏಳು ಕುದುರೆಗಳ ರಥವನ್ನೇರುವನು. ಅವನ ರಥದ ಸಾರಥಿ ಅರುಣ. ಇಂದು ವೇದ ಮಂತ್ರಗಳ ಭಾಗವಾದ ಕೃಷ್ಣ ಯಜುರ್ವೇದ ತೈತ್ತಿರೀಯಾರಣ್ಯಕದಲ್ಲಿ ಪ್ರಸ್ತಾಪಿಸಿರುವ ಅರುಣಪ್ರಶ್ನ ರೀತ್ಯಾ ಸೂರ್ಯನಮಸ್ಕಾರಗಳನ್ನು ಮಾಡುವುದು ಪದ್ಧತಿ.

ಸೂರ್ಯನ ರಥಕ್ಕೆ ಏಳು ಕುದುರೆಗಳು. ಅವುಗಳ ಹೆಸರುಗಳು ಗಾಯತ್ರಿ, ಬೃಹತೀ, ಉಷ್ಣಿಕ್, ಜಗತೀ, ತ್ರಿಷ್ಟುಪ್, ಅನುಷ್ಟುಪ್ ಮತ್ತು ಪಂಕ್ತಿ ಬೆಳಗಿನ ಜಾವದಲ್ಲಿ ತಲೆ, ಭುಜ,

ಕತ್ತು, ಕಂಕುಳು, ತೊಡೆ, ಪಾದ ಇತ್ಯಾದಿಗಳ ಮೇಲೆ ಎಕ್ಕದ ಎಲೆಯನ್ನು ಇಟ್ಟುಕೊಂಡು ಸ್ನಾನ ಮಾಡಿ, ಪೂರ್ವಾಭಿಮುಖ ವಾಗಿ ಸೂರ್ಯನಿಗೆ ನಮಸ್ಕರಿಸುವುದು ರೂಢಿಯಲ್ಲಿದೆ. ಸೂರ್ಯನ ಹೆಸರುಗಳನ್ನು ಉಚ್ಚರಿಸಿ ನಮಸ್ಕಾರಗಳನ್ನು ಮಾಡುವರು. ಮನೆಯ ಒಂದು ಕೋಣೆಯಲ್ಲಿ ಪೂರ್ಣವಾಗಿ ಒಂದು ಸುತ್ತು ಪ್ರದಕ್ಷಿಣೆ ಹಾಕುತ್ತಾ ಅರುಣ ಪ್ರಶ್ನದ ಮಂತ್ರ ಪಠಿಸಿ ನಮಸ್ಕಾರ ಮಾಡುವರು. ಹೀಗೆ ೧೦೮ ನಮಸ್ಕಾರ ಗಳನ್ನು ಮಾಡುವರು. ೧೦೮ ಆಗದಿದ್ದವರು ೧೨ ನಾಮಗಳನ್ನು ಜಪಿಸಿ ನಮಸ್ಕಾರ ಮಾಡುವರು. ಅವಾವುದೆಂದರೆ ಇಂದ್ರ, ಧಾತ, ಪರ್ಜನ್ಯ, ತ್ವಷ್ಟ, ಪೂಷ, ಆರ್ಯಮ, ಭಾಗ, ವಿವಸ್ವನ, ವಿಷ್ಣು, ಅಂಶುಮಾನಸ, ವರುಣ ಮತ್ತು ಮಿತ್ರ.ಈ ಹನ್ನೆರಡು ಹೆಸರುಗಳು ಹನ್ನೆರಡು ತಿಂಗಳುಗಳ ಸೂಚಕ. ಇದೇ ತರಹ ಸೂರ್ಯನಿಗೆ ಇನ್ನೂ ಹನ್ನೆರಡು ಹೆಸರುಗಳಿವೆ. ಅವುಗಳು ಯಾವುವೆಂದರೆ, ಆದಿತ್ಯ, ಸವಿತಾ, ಸೂರ್ಯ, ಮಿಹಿರ, ಅರ್ಕ, ಪ್ರಭಾಕರ, ಮಾರ್ತಾಂಡ,ಭಾಸ್ಕರ, ಭಾನು, ಚಿತ್ರಭಾನು, ದಿವಾ ಕರ ಮತ್ತು ರವಿ. ೧೨ ಜನ ಋತ್ವಿಕರನ್ನು ಮನೆಗೆ ಕರೆಯಿಸಿ ನಮಸ್ಕಾರ ಮಾಡಿಸುವುದೂ ರೂಢಿಯಲ್ಲಿದೆ. ಆ ಹನ್ನೆರಡು ಜನ ಋತ್ವಿಕರ ಅರುಣ ಪ್ರಶ್ನೈರೀತ್ಯಾ ಒಂದು ನಮಸ್ಕಾರವನ್ನು 12 ಎಂದು ಲೆಕ್ಕಕ್ಕೆ ತೆಗೆದುಕೊಳ್ಳುವರು.ಆ ಸಂದರ್ಭದಲ್ಲಿ ಪ್ರಿಯ ವಾದ ರವೆಯ ಪಾಯಸವನ್ನು ನೈವೇದ್ಯಕ್ಕಿರಿಸಿ,ಅದನ್ನು ಪ್ರಸಾದವಾಗಿ ಋತ್ವಿಕರಿಗೆ ಕೊಡುವರು ಮತ್ತು ಇತರರೂ ಸೇವಿ ಸುವರು.

ಒರಿಸ್ಸಾ ರಾಜ್ಯದಲ್ಲಿನ ಕೊನಾರ್ಕದ ಸೂರ್ಯನ ದೇವಸ್ಥಾನ, ಗಯಾದ ದಕ್ಷಿಣಾರ್ಕ ದೇವಸ್ಥಾನ, ರಾಜಸ್ಥಾನದ ರಾನಕ್ಪುರ, ಗುಜರಾತ್ ರಾಜ್ಯದ ಮೊಧೆರಾ, ಮಧ್ಯಪ್ರದೇಶದ ಉನಾವು (ಚರ್ಮ ರೋಗಗಳ ನಿವಾರಣೆಗಾಗಿ ಜನರು ಇಲ್ಲಿಗೆ ಹೋಗುವರು),

ಆಸ್ಸಾಮಿನ ಗೋಲ್ಪರ, ಆಂಧ್ರಪ್ರದೇಶದ ಅರಸವಲ್ಲಿ, ತಮಿಳುನಾಡಿನ ಕುಂಭಕೋಣಂನ ಸೂರ್ಯನ ದೇವಸ್ಥಾನ ಇವುಗಳು ಭಾರತದಲ್ಲಿರುವ ಪ್ರಮುಖ ದೇವಸ್ಥಾನಗಳು.

ಪುರಾಣಗಳ ಪ್ರಕಾರ ಸೂರ್ಯನಿಗೆ ಇಬ್ಬರು ಪತ್ನಿ ಯರು-ಸಂಜನಾ ಮತ್ತು ಛಾಯಾ ಅವನ ಮಕ್ಕಳಲ್ಲಿ ಪ್ರಮುಖ ರೆಂದರೆ,ಮನು,ಯಮ, ಯಮುನಾ, ಕರ್ಣ, ಸುಗ್ರೀವ ಇತ್ಯಾದಿ. ಶ್ರೀರಾಮನು ಸೂರ್ಯನ ವಂಶಸ್ಥನು. ಭಾರತೀಯ ಸಂಸ್ಕೃತಿ ಮತ್ತು ಹಿಂದೂ ಧರ್ಮದಲ್ಲಿ ಸೂರ್ಯನ ಉಪಾಸನೆಗೆ ಅಪಾರ ಮಹತ್ವ ನೀಡಿದ್ದಾರೆ.

೧. ಸೂರ್ಯೋಪಾಸನೆಯಿಂದ ಶರೀರದಲ್ಲಿರುವ ಚಂದ್ರ ನಾಡಿಯು ಪೂರ್ಣಪ್ರಮಾಣದಲ್ಲಿ ಮುಚ್ಚಿ ಹೋಗಿ ಸೂರ್ಯ ನಾಡಿಯು ಬೇಗ ಕಾರ್ಯಗತವಾಗಲು ಸಹಾಯವಾಗುತ್ತದೆ. ಚಂದ್ರನ ಉಪಾಸನೆಗಿಂತ ಸೂರ್ಯನ ಉಪಾಸನೆ ಅಧಿಕ ಶ್ರೇಷ್ಠವಾಗಿದೆ.

೨. ಸೂರ್ಯನಿಗೆ ಬೆಳಗ್ಗೆ ಅರ್ಘ್ಯ ಅರ್ಪಿಸಿ ಅವನ ದರ್ಶನ ಪಡೆದರೆ ಸಾಕು,ಅವನು ಪ್ರಸನ್ನನಾಗುತ್ತಾನೆ. ಸೂರ್ಯನ ದರ್ಶನ ಪಡೆಯುವುದು ಅವನ ಉಪಾಸನೆಯ ಒಂದು ಭಾಗವೇ ಆಗಿದೆ.

೩. ಉದಯಿಸುತ್ತಿರುವ ಸೂರ್ಯನೆಡೆಗೆ ನೋಡಿ 'ತ್ರಾಟಕ' ವನ್ನು ಮಾಡಿದರೆ ಕಣ್ಣುಗಳ ಕ್ಷಮತೆಯು ಹೆಚ್ಚುತ್ತದೆ.

೪.ಸೂರ್ಯನಮಸ್ಕಾರ ಮಾಡುವುದು ಯೋಗಾಸನ ಗಳಲ್ಲಿ ಸೂರ್ಯನಮಸ್ಕಾರ ಮಹತ್ವದ ವ್ಯಾಯಾಮವಾಗಿದೆ. ಇದರಲ್ಲಿ ಸ್ಥೂಲ ಶರೀರದ ಉಪಯೋಗ ಮಾಡಿ ಸೂರ್ಯನಿಗೆ ನಮಸ್ಕಾರ ಮಾಡುತ್ತಾರೆ. ಹೀಗೆ ೨೦ ವರ್ಷ ನಿತ್ಯವೂ ಸೂರ್ಯ ನಮಸ್ಕಾರ ಮಾಡಿದರೆ ಸೂರ್ಯದೇವನು ಪ್ರಸನ್ನನಾಗುತ್ತಾನೆ. ನಿತ್ಯ ನಿರಂತರ ಸೂರ್ಯನಮಸ್ಕಾರವನ್ನು ತಪ್ಪದೇ ಪಾಲಿಸಿ ರುವುದು ಸೂರ್ಯನ ಕೃಪೆಗೆ ಪಾತ್ರ ಆಗುವುದರಲ್ಲಿ ಯಾವುದೇ ಸಂಶಯವಿಲ್ಲ ಶ್ರೀರಾಮಚಂದ್ರ ಆದಿತ್ಯ ಹೃದಯ ಸ್ತೋತ್ರದ ಮೂಲಕ ಸೂರ್ಯೋಪಾಸನೆಯನ್ನು ಮಾಡಿ ರಾವಣನನ್ನು ಗೆದ್ದ ತನ್ನ ಗುರುವಾದ ಸೂರ್ಯದೇವನಿಂದ ಕಲಿತ ವಿದ್ಯೆಗೆ ಹನುಮಂತ ನೀಡಿದ ಶ್ರೇಷ್ಠ ಕಾಣಿಕೆ ಸೂರ್ಯ ನಮಸ್ಕಾರ ಹಾಗೂ ಬೀಜ ಮಂತ್ರಗಳು ನಿತ್ಯ ಸೂರ್ಯೋದಯಕ್ಕೆ ಮುನ್ನ ನಿದ್ರೆಯಿಂದ ಎದ್ದು ಸ್ನಾನಾದಿಗಳನ್ನು ಮುಗಿಸಿ ಉಪಾಸನೆ ಮಾಡುವವರು ಶನಿಕಾಟದಿಂದ ಮುಕ್ತರಾಗುವರು ಎಂದು ಶನೇಶ್ವರ ಅಭಯವನ್ನು ನೀಡಿರುತ್ತಾನೆ.

ಇಷ್ಟೆಲ್ಲ ವೈಶಿಷ್ಟ್ಯಗಳನ್ನು ಹೊಂದಿರುವ ಸೂರ್ಯ ದೇವನ ಆರಾಧನೆಯನ್ನು ರಥಸಪ್ತಮಿಯ ದಿನ 108 ನಮಸ್ಕಾರಗಳ ಮೂಲಕ ಮಾಡುವುದರಿಂದ ನಿತ್ಯನಿರಂತರ ಸೂರ್ಯನ ಕೃಪೆ ಯನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತದೆ ಬನ್ನಿ ಎಲ್ಲಾ ಯೋಗ ಬಂಧುಗಳು ರಥಸಪ್ತಮಿಯ ದಿನ ಒಂದಾಗಿ ಸೇರಿ ಸೂರ್ಯ ದೇವನ ಆರಾಧನೆಯನ್ನು ಮಾಡಿ ಮನಸ್ಸಿನ ಅಂತರಾಳದಲ್ಲಿ ತುಂಬಿಕೊಳ್ಳೋಣ ಹಾಗೆ ಭಗವಂತನ ನಾಮಸ್ಮರಣೆ ಮಾಡೋಣ.

**ಓಂ ಸೂರ್ಯದೇವಾಯ ನಮಃ**

# ಧರ್ಮ - ಪ್ರವಾಸ - ದಾಸಸಾಹಿತ್ಯ

- ಡಾ|| ವಾಸುದೇವ ಅಗ್ನಿ ಹೋತ್ರಿ

ಪುಣ್ಯಭೂಮಿ, ವೇದಭೂಮಿ,ದೇವಭೂಮಿ, ಕರ್ಮ ಭೂಮಿ ಎಂದು ಕರೆಸಿಕೊಳ್ಳುವ ಭಾರತ - ದೇಶದಲ್ಲಿ ಹುಟ್ಟುವುದೇ ಜನ್ಮಜನ್ಮಾದಿಗಳ ಪುಣ್ಯಫಲ.ಭಾರತ ಸಾಂಸ್ಕೃತಿಕ, ದೇಶ. "ಧರ್ಮ" ಇದರ ಆತ್ಮ. ಇಲ್ಲಿ ಜನರು ಧರ್ಮವನ್ನೇ ತಮ್ಮ ಜೀವನದ ತಳಹದಿಯನ್ನಾಗಿಸಿಕೊಂಡು ಜೀವನ ಸಾಗಿಸುತ್ತಾರೆ. ಸಹಸ್ರಾರು ಋಷಿಮುನಿಗಳು, ಮಹಾನ್ ವಿಭೂತಿ ಪುರುಷರು ತಮ್ಮ ಪರಿಶುದ್ಧವಾದ ಜೀವನ ಹಾಗೂ ತಪಶ್ಚರ್ಯೆಗಳಿಂದ ಈ ಭೂಮಿಯನ್ನು ಪವಿತ್ರಗೊಳಿಸಿದ್ದಾರೆ. ಭರತ ಭೂಮಿಯು ಜ್ಞಾನದ ಸಿರಿಧರೆ,ಧರ್ಮದ ನೆಲೆವೀಡು, ಧರ್ಮವೇ ಜೀವನದ ಉಸಿರು ಎಂದು ತಿಳಿದು ಅದರೊಂದಿಗೆ ಅರ್ಥ,ಕಾಮ,ಮೋಕ್ಷ ಎಂಬ ಪುರಾಷಾರ್ಥಗಳನ್ನು ಸೂಚಿಸಿ, ಅದರ ಮುಖಾಂತರ ಜೀವನ ಸಾಗಿಸುವಂತೆ ಹೇಳಿ ನಮ್ಮ ಪೂರ್ವಜರು ಅಪೂರ್ವವಾದ ಪರಂಪರೆಯನ್ನು ಬಿಟ್ಟು ಹೋಗಿದ್ದಾರೆ. ಸಹಸ್ರಾರು ಋಷಿ ಮುನಿಗಳು, ಶರಣರು, ದಾಸರು , ಸಂತಸರು ಎಲ್ಲರೂ ಸಹ ಈ ತತ್ವದ ತಳಹದಿಯ ಹಿನ್ನಲೆಯಲ್ಲಿಯೇ ಧರ್ಮ ಪ್ರಸಾರವನ್ನು ಮಾಡಿದರು.

ಧರ್ಮದ ಲಕ್ಷಣಗಳನ್ನು ಕುರಿತು ಈ ಶ್ಲೋಕದಲ್ಲಿ ನೋಡಬಹುದು.

ಧೃತಿಃ ಕ್ಷಮಾ ದಮಃ- ಆಸ್ತೇಯಂ
ಶೌಚಮ್ ಇಂದ್ರಿಯನಿಗ್ರಹ
ಧೀಃ ವಿದ್ಯಾಸತ್ಯಮ್ ಅಕ್ರೋಧಃ
ದಶಕಂ ಧರ್ಮಲಕ್ಷಣಮ್

ಧರ್ಮ ಎಂದರೇನು? ಎಂಬ ಪ್ರಶ್ನೆಯ ಹುಡುಕಾಟವೇ ಮನುಕುಲದ ಕಥೆ ಕಳೆದ ೧೦ ಸಾವಿರ ವರ್ಷಗಳಿಂದ ಧರ್ಮಕ್ಕೆ ಹೊಸ ಹೊಸ ವ್ಯಾಖ್ಯಾನಗಳನ್ನು ಸಿದ್ಧಾಂತ ಪ್ರಸ್ಥಾನಗಳನ್ನು ಟೀಕೆ ಟಿಪ್ಪಣಿಗಳನ್ನು ಬರೆದು ಪ್ರಸ್ತುತೀಕರಿಸಿದ್ದಾರೆ. ಒಟ್ಟಿನಲ್ಲಿ "ಧಾರಯತಿ ಇತಿ ಧರ್ಮ"ಎಂಬ ವಾಕ್ಯವನ್ನು ನಾವೆಲ್ಲ ಕೇಳಿದ್ದೇವೆ.ನೈತಿಕವಾಗಿ ಕೆಳಗೆ ಬಿದ್ದವರನ್ನು ಮೇಲೆತ್ತುವುದೇ ಧರ್ಮ ಎಂಬ ಕನ್ನಡದ ಭಾವಾರ್ಥವೂ ಕೇಳಿದ್ದೇವೆ.

ಈಗ ನನ್ನ ಚಿಂತನೆಯೆಂದರೆ, ಕೆಳಗೆ ಬಿದ್ದವರು ಯಾರು? ಯಾವಾಗ? ಏಕೆ? ಎಷ್ಟು? ಹೇಗೆ? ಎಂಬುದು ಅಲ್ಲ. ಏಕೆಂದರೆ ಇದರ ಗೋಜಿಗೆ ಹೋದರೆ ಉತ್ತರ ವ್ಯಾಜ್ಯ. ಸಾಹಸೀ ಮನೋಭಾವದ ಯಾವುದೇ ವ್ಯಕ್ತಿ ಇದೇ ವಿಷಯವನ್ನು ಹೀಗೆ ಚಿಂತಿಸುತ್ತಾನೆ. ಕೆಳಗೆ ಬಿದ್ದವನನ್ನು ಮೇಲೆತ್ತುವುದು ಧರ್ಮವಾದರೆ ಮೇಲೆತ್ತ ಬೇಕಾದವನಲ್ಲಿ ಇರಬೇಕಾದ ಗುಣ, ಶೀಲ ಸ್ವಭಾವಗಳು ಎಂತಹವು? ಅವು ಎಲ್ಲಿಂದ ಬರುತ್ತವೆ? ಎನ್ನುವುದೇ ಧರ್ಮದ ನೆಲೆ.

ಈಗ ಸ್ವಲ್ಪ ವಿವರವಾಗಿ ಹೇಳುವುದಾದರೆ ಸಮಯಪ್ರಜ್ಞೆ ವ್ಯವಹಾರ ಕೌಶಲ್ಯ,ಸಂಘಟನಾ ಚತುರತೆ, ಸ್ನೇಹಪರ ಮನೋಭಾವ,ಸ್ವಾಮಿನಿಷ್ಟೆ, ಸತ್ಯಸಂಧತೆ, ಪರೋಪಕಾರ ಮನೋಭಾವ,ಪರನಾರಿ ಸಹೋದರತ್ವ,ಮೊದಲಾದ ಗುಣಗಳೇ ಧರ್ಮದ ಆಧುನಿಕ ವ್ಯಾಖ್ಯಾನಗಳು.ವ್ಯಕ್ತಿ ಕುಳಿತಲ್ಲಿಯೇ ಕುಳಿತರೆ ಪರಾವಲಂಬಿಯೂ ಹಾಗೂ ಪ್ರೇರಣಾರಹಿತನೂ ಆಗುತ್ತಾನೆ. ಹಾಗಾಗಿ ಅವನು ಸಮಾಜ ಜೀವಿಯಾಗಿ, ಸಂಘ ಜೀವಿಯಾಗಿ ಜೊತೆಗೆ ಪ್ರವಾಸಪ್ರಿಯನಾಗಿ ದೇಶಸುತ್ತಿ ನೋಡಿ, ತಾನು ಓದಿದ ಕೋಶಗಳಿಗೆ ಅವುಗಳನ್ನು ಅನ್ವಯಿಸಿ ತನ್ಮೂಲಕ ಸೃಷ್ಟಿ ಕಾರ್ಯದಲ್ಲಿ ತೊಡಗಿದರೆ ಅವನ ಅಧ್ಯಯನ ಹಾಗೂ ಅನುಭವದ ಮೂಸೆಯಿಂದ ಬಂದ ಸಾಹಿತ್ಯವೇ ಪ್ರವಾಸ ಸಾಹಿತ್ಯವಾಗುತ್ತದೆ. ಇದನ್ನೇ "ದೇಶ ಸುತ್ತಿನೋಡು ಕೋಶ ಓದಿ ನೋಡು" ಎಂದು ಹೇಳಿದರು.

ವ್ಯಕ್ತಿಯ ಚತುರ್ವಿಧ ಪುರುಷಾರ್ಥಗಳೆಂದರೆ ಧರ್ಮ ಮಾರ್ಗದಿಂದ ಅರ್ಥಸಂಪಾದನೆ ಮಾಡಿ, ವಿಹಿತ ಕರ್ಮದಲ್ಲಿ

ಕಾಮೋಪಭೋಗ ಮಾಡಿದರೆ ಮೋಕ್ಷ ಲಭಿಸುತ್ತದೆ. ಈ ಕೋಷ್ಠಕಗಳಲ್ಲಿ ಏರು ಪೇರಾದರೆ ನರಕ ತಪ್ಪಿದಲ್ಲ. ಇದನ್ನು ಶಾಸ್ತ್ರೋಕ್ತವಾಗಿ ಪಾಲಿಸಲೆಂದೇ ಹಲ್ಲಿ ಮುಟ್ಟಿದರೆ ಕಂಚಿಗೆ ಹೋಗಬೇಕು, ಸಮುದ್ರದ ಮರಳನ್ನು ಕಾಶಿಯ ಗಂಗೆಯಲ್ಲಿ ಬಿಡಬೇಕು ಗಂಗಾನದಿಯ ನೀರನ್ನು ರಾಮೇಶ್ವರ ಲಿಂಗಕ್ಕೆ ಅಭಿಷೇಕ ಮಾಡಬೇಕು. ಹೀಗೆ ಈ ಜಂಬೂದ್ವೀಪದ ಅಖಂಡ ಪ್ರವಾಸ ಅಷ್ಟೇ ಅಲ್ಲ ಇತ್ತೀಚಿನ ದಿನಗಳಲ್ಲಿ ಛಪ್ಪನ್ನ (೫೬) ದೇಶಗಳ ಸಂಚಾರ ಎಂಬ ಮಾತು ನಾವೆಲ್ಲರೂ ಕೇಳಿದ್ದೇವೆ.

ಇನ್ನೂ ಒಂದೆರೆಡು ಸಮುದಾಯಗಳಲ್ಲಿ ತಮ್ಮ ವರ್ಷದ ಸಂಪಾದನೆಯ ಒಂದು ಭಾಗವನ್ನು ಪ್ರವಾಸಮಾಡಿ ಅಲ್ಲಲ್ಲಿ ಕ್ಷೇತ್ರಗಳಿಗೆ ಹೋಗಿ ದಾನಧರ್ಮ ಮಾಡಬೇಕೆಂದೇ ಇದೆ. ಹೀಗಾಗಿ ಪ್ರವಾಸವು ಅಥವಾ ಹಿಂದಿನ ಕಾಲದ ಯಾತ್ರೆಯು ಧರ್ಮದ ಒಂದು ಅಂಗ. ಅದನ್ನು ಶತಶತಮಾನಗಳಿಂದ ಸಂತ ಮಹಾಂತರು,ಶರಣದಾಸರು,ಆಚರಿಸಿದ್ದಾರೆ.ಋಷಿಗಳಿಗೆ ಕಮಂಡಲದ ಅಗತ್ಯ ಏಕೆ ಬಂತು? ಎಂದು ಸಂಶೋಧನೆ ಮಾಡಿದರೆ ಅವರ ಸತತ ಪ್ರವಾಸವೇ ಅದಕ್ಕೆ ಉತ್ತರವಾಗಿದೆ. ಇಂದೂ ಕೂಡ ನೀರಿನಷ್ಟು ಆಧುನೀಕರಣ ಹೊಂದಿದ ಪಂಚ ಭೂತ ಇನ್ನೊಂದಿಲ್ಲ.

ಕರ್ನಾಟಕ ಹರಿದಾಸರು ಪ್ರವಾಸ ಕೈಪಿಡಿಯನ್ನು ಬರೆಯಲಿಲ್ಲ. ಆದರೆ ಅವರು ಮಾಡಿದ ಪ್ರವಾಸದ ಫಲಶ್ರುತಿ ಯನ್ನು ತಮ್ಮ ಕೀರ್ತನೆ, ಸುಳಾದಿ, ಉಗಾಭೋಗಗಳಲ್ಲಿ ಸಂಗ್ರ ಹಿಸಿದ್ದಾರೆ. ಹೀಗಾಗಿ ಪ್ರವಾಸವು ಜೀವನದ ಒಂದು ಅಂಗ ದಾಸಸಾಹಿತ್ಯದಲ್ಲಿ ಆಸಕ್ತಿಯುಳ್ಳ.ಪ್ರವಾಸವು ಹವ್ಯಾಸವಾಗಿ ರುವ ನನಗೆ ಮನೆಯಲ್ಲಿರುವ ಧಾರ್ಮಿಕ ವಾತಾವರಣ ಇವೆ ಲ್ಲವುಗಳ ಪ್ರಭಾವ ಈ ಲೇಖನ ಬರೆಯಬೇಕು ಎಂದು ಪ್ರೇರೇ ಪಿಸಿತು. ಹರಿದಾಸ ಸಾಹಿತ್ಯದ ಶ್ರೀಕಾರ ಹಾಡಿದ ಶ್ರೀಪಾದ ರಾಜರಿಂದ ಆಧುನಿಕ ಹರಿದಾಸರವರಿಗೆ ಪ್ರವಾಸ ಮತ್ತು ಧರ್ಮ ಕುರಿತಾದ ಕೆಲವು ಆಲೋಚನೆಗಳನ್ನು ತಮ್ಮ ಮುಂದಿ ಡಲು ಬಯಸುತ್ತೇನೆ.

ಪ್ರವಾಸ ಎಂಬ ಶಬ್ದವು, ಭಾರತೀಯರಿಗೆ ಯಾತ್ರೆ ಎಂದೇ ಪರಿಚಿತ.ಏಕೆಂದರೆ ನಮ್ಮ ಹಿರಿಯರು ಅಸೇತು ಹಿಮಾಚಲದ ಯಾತ್ರೆಯ ಪರಿಕಲ್ಪನೆಯನ್ನು ಹೊಂದಿದ್ದರು. ಹಿಂದೆ ಪ್ರವಾಸವೆಂದರೆ ಕೇವಲ ತೀರ್ಥಕ್ಷೇತ್ರಗಳ ದರ್ಶನ ಕ್ಕೆಂದೇ ಮೀಸಲಾಗಿತ್ತು, ತಮ್ಮ ಜೀವನದ ಸಂಧ್ಯಾಕಾಲದಲ್ಲಿ ಅಂದರೆ ಮುಪ್ಪಿನಲ್ಲಿ ಅವರು ಕಾಶಿ, ಬದರಿ, ಪುರಿ, ದ್ವಾರಕಾ, ರಾಮೇಶ್ವರ ಹೀಗೆ ಅನೇಕ ಪುಣ್ಯ ಕ್ಷೇತ್ರಗಳ ದರ್ಶನ ಮಾಡು ತ್ತಿದ್ದರು. ಆ ಕ್ಷೇತ್ರಗಳ ದರ್ಶನದಿಂದ ಮೋಕ್ಷಪ್ರಾಪ್ತಿಯಾಗುತ್ತ ದೆಂಬ ಅಚಲವಾದ ನಂಬಿಕೆ ಭಾರತೀಯರಲ್ಲಿದೆ ಆಗ ಪ್ರವಾ ಸವು ಅಷ್ಟು ಸುಲಭವಾಗಿರಲಿಲ್ಲ. ಸಾರಿಗೆ ಸಂಪರ್ಕದ ಕೊರತೆ ಇತ್ತು ಮಾಹಿತಿಯ ಕೊರತೆ ಇತ್ತು, ಇನ್ನೂ ಅನೇಕ ರೀತಿಯ ಸಮಸ್ಯೆಗಳಿದ್ದವು. ಆದಾಗ್ಯ ಸಹ ಯಾತ್ರೆ ಮಾಡುತ್ತಿದ್ದರು. ಆದರೆ ಇಂದಿನ ಪರಿಸ್ಥಿತಿಹಾಗಿಲ್ಲ. ಪ್ರವಾಸವು ಈಗ ವ್ಯಾಪಕವಾಗಿ ಬೆಳೆದಿದೆ. ನಿಖರವಾದ ಮಾಹಿತಿ, ಸಾರಿಗೆ ಸಂಪರ್ಕ, ರೈಲಿನ ವ್ಯವಸ್ಥೆ, ಸಮುದ್ರವಿದ್ದಲ್ಲಿ ಕಡಲುಸಾರಿಗೆ ವಿಮಾನಯಾನ, ಹೀಗೆ ಅನೇಕ ಬದಲಾವಣೆಗಳಾಗಿವೆ. ಆಧುನಿಕ ತಂತ್ರಜ್ಞಾನ ಮಾಹಿತಿಯ ವ್ಯಾಪಕ ಸುಧಾರಣೆ ಹಾಗೂ ಅಭಿವೃದ್ಧಿಯಿಂದಾಗಿ ಪ್ರವಾಸವು ಇಂದು ಸುಲಭವೂ, ಸುಖಕರವೂ, ಸುನಿಶ್ಚಿತವೂ ಆಗಿದೆ. ಇದರ ಮುಂದಿನ ಬೆಳವಣಿಗೆಯೆಂದರೆ ಪ್ರವಾಸವನ್ನು ಒಂದು ನಿರ್ದಿಷ್ಟ ವಿಷಯವನ್ನಾಗಿ ಈಗ ಅಧ್ಯಯನಕ್ಕೆ ನಿಗದಿ ಪಡಿಸಲಾಗಿದೆ. ಅದೇ ರೀತಿ ಪ್ರವಾಸವು ಇಂದು ಕೇವಲ ಮನೋರಂಜನೆ, ಹವ್ಯಾಸ, ಮಾಹಿತಿ ಶೇಖರಣೆ ಮಾತ್ರವಲ್ಲದೆ ಒಂದು ಉದ್ಯಮವಾಗಿ ಬೆಳೆದಿದೆ.ಅಪಾರ ಹಣವನ್ನು ಈ ಕ್ಷೇತ್ರದಲ್ಲಿ ತೊಡಗಿಸಲಾಗಿದೆ. ಹೀಗೆ ಈ ಎಲ್ಲಾ ಅಂಶಗಳಿಂದ ಇಂದು ಪ್ರವಾಸವು ಅತ್ಯಂತ ಪ್ರಮುಖ ವಿಷಯವಾಗಿದೆ.

ದಾಸಸಾಹಿತ್ಯವೂ ಕೂಡ ಪ್ರವಾಸಕ್ಕೆ ಹೊರತಾಗಿಲ್ಲ, ಪ್ರವಾಸವು ದಾಸಸಾಹಿತ್ಯದ ಒಂದು ಪ್ರಮುಖವಾದ ಅಂಶ ವಾಗಿದೆ. ದಾಸಸಾಹಿತ್ಯಕ್ಕೂ ಮತ್ತು ಪ್ರವಾಸಕ್ಕೂ ಒಂದು ಅವಿ ನಾಭಾವ ಸಂಬಂಧವಿದೆ. ದಾಸರು ಸಂಚಾರಿ ಜೀವಿಗಳು ಅವರು ಪ್ರತಿದಿನವೂ ಊರಿಂದೂರಿಗೆ ಪ್ರವಾಸಮಾಡಿ ಧರ್ಮ ಪ್ರಚಾರ ಪ್ರಸಾರ ಮಾಡುತ್ತಿದ್ದರು. ಹೀಗಾಗಿ ದಾಸರು ಪ್ರವಾಸ ದಿಂದ ಪ್ರಸಾರ ಮಾಡಿದರೆನ್ನಬಹುದು.

ಹರಿದಾಸರು ತಮ್ಮ ಜೀವನದಲ್ಲಿ ತೀರ್ಥಕ್ಷೇತ್ರಗಳ ಸಂದರ್ಶನಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಿದ್ದರೆಂದು ತಿಳಿದು ಬರುತ್ತದೆ. ಹರಿದಾಸರು ಸಹ ಎಲ್ಲ ತಮ್ಮ ಕೀರ್ತನೆ , ಸುಳಾದಿ, ಉಗಾಭೋಗಗಳಲ್ಲಿ ಕ್ಷೇತ್ರಮೂರ್ತಿಯನ್ನು ಕ್ಷೇತ್ರಮಹಿಮೆಯನ್ನು ಕೊಂಡಾಡಿದ್ದು ತಿಳಿದು ಬರುತ್ತದೆ. ನಮ್ಮ ದೇಶದ ಪ್ರಸಿದ್ಧ ತೀರ್ಥ ಕ್ಷೇತ್ರಗಳಾದ ತಿರುಪತಿ, ಉಡುಪಿ, ಪಂಢರಪುರ, ಕಾಶಿ, ಪುರಿ, ಬದರಿ ಮೊದಲಾದ ಕ್ಷೇತ್ರಗಳಲ್ಲಿ ದಾಸರು ಭೇಟಿ ನೀಡಿ ಕೃತಿ

ಗಳನ್ನು ರಚಿಸಿದ್ದಾರೆ. ಹರಿದಾಸರ ಜೀವನದಲ್ಲಿ ಪ್ರತಿ ವರ್ಷವೂ ತಿರುಪತಿ, ಪಂಢರಪುರ ಹಾಗೂ ಉಡುಪಿ ಕ್ಷೇತ್ರಗಳ ಯಾತ್ರೆಯನ್ನು ಕೈಗೊಳ್ಳುತ್ತಿದ್ದರೆಂದು ಪ್ರಚಲಿತವಾಗಿದೆ. ನವರಾತ್ರಿಯಲ್ಲಿ ತಿರುಪತಿ, ಆಷಾಢ ಮಾಸದ ಏಕಾದಶಿದಂದು ಪಂಢರಪುರ ಮತ್ತು ಮಧ್ವನವಮಿಯಂದು ಉಡುಪಿಯಲ್ಲಿ ಹರಿದಾಸರಿರುವುದು ಸಾಮಾನ್ಯ ವಿಷಯವಾಗಿತ್ತು.

ಪ್ರವಾಸದ ಕುರಿತು ಇನ್ನೂ ಒಂದು ಹೆಜ್ಜೆ ಮುಂದೆ ಹೋದವರೆಂದರೆ ವಾದಿರಾಜರು ಮತ್ತು ವಿಜಯದಾಸರು, ಶ್ರೀ ವಾದಿರಾಜರು "ತೀರ್ಥಪ್ರಬಂಧ" ಎಂಬ ಸಂಸ್ಕೃತ ಗ್ರಂಥ ವನ್ನು ರಚಿಸಿ,ಭರತ ಖಂಡದ ಅನೇಕ ತೀರ್ಥಕ್ಷೇತ್ರಗಳ ವಿಚಾರವನ್ನು ತಿಳಿಸಿದ್ದಾರೆ. ವಿಜಯದಾಸರು "ತೀರ್ಥಕ್ಷೇತ್ರ ಸುಳಾದಿಗಳು" ಎಂಬ ಪ್ರಬಂಧವನ್ನು ರಚಿಸಿದರು. ಅವರು ಈ ಗ್ರಂಥದಲ್ಲಿ ಪ್ರಮುಖ ಕ್ಷೇತ್ರಗಳ ಕುರಿತು ಕೃತಿಗಳನ್ನು ರಚಿಸಿದ್ದಾರೆ. ಅವರು ತಮ್ಮ ಈ ಗ್ರಂಥದಲ್ಲಿ ಪ್ರಮುಖ ಕ್ಷೇತ್ರಗಳ ಕುರಿತು ಕೃತಿಗಳನ್ನು ರಚಿಸಿದ್ದಾರೆ. ಅವರು ತಮ್ಮ ಈ ಗ್ರಂಥ ದಲ್ಲಿ ತಿರುಪತಿ, ಮಹಾನಂದಿ, ಕನಕಗಿರಿ, ಕನ್ಯಾಕುಮಾರಿ, ಹಂಪೆ,ಉಡುಪಿ,ಪಂಢರಪುರ,ಮಧುರೈ,ಶ್ರೀಮುಷ್ಣ, ತೋತಾದ್ರಿ, ಅನಂತಗಿರಿ, ಅಹೋಬಲ, ಕಂಚಿ, ಅರುಣಾಚಲ, ತುರಂಗ (ಪಂಚ ತಿರುಪತಿ) ದರ್ಭಶಯನಾ, ನವತಿರುಪತಿ (ತಾಮ್ರ ಪರ್ಣಿತೀರ) ಶುಚೀಂದ್ರ, ಘಟಕಾಚಲ, ಮುನ್ನಾರ,ಶ್ರೀವಲ್ಕಲ, ಕೋಟೇಶ್ವರ, ಹರಿಹರ, ಛಾಯಾಕ್ಷೇತ್ರ, ಶ್ವೇತಶೃಂಗಿ, ಮೊದಲಾದ ತೀರ್ಥ ಕ್ಷೇತ್ರಗಳನ್ನು ಸಂದರ್ಶಿಸಿದರು.

ಈ ಕೆಳಗಿನ ಮೂರು ಪ್ರಾತಿನಿಧಿಕ ಉದಾಹರಣೆಗಳು ಹರಿದಾಸರ ಪ್ರವಾಸದ ಪ್ರಿಯತೆ ಮತ್ತು ಸಾರ್ಥಕತೆಯನ್ನು ತಿಳಿಸುತ್ತದೆ.

### ತಿರುಪತಿ ಕುರಿತು

ತರಣಿ ಶತಕೋಟಿ ರುಚಿಗಧಿಕವೆಂದೆನಿಸುವ
ತಿರುಪತಿವಾಸದ ವರ ಕಿರೀಟನಕಂಡೆ
ಶಿರದಲ್ಲಿ ಮುಡಿದಿದ್ದ ಪರಿಪರಿಯ ಕುಸುಮಗಳು
ಅರಳಿ ಪರಿಮಳಿಸುತ್ತ ಹರಿಯುತಿದೆ ದೆಸೆದೆಸೆಗೆ

### ಕನಕಗಿರಿ ಕುರಿತು

ಕನಕರಾಯನ ದರುಶನ ಮಾಡಿದವನಿಗೆ
ಮನದೊಳಗಿದ್ದ ಮಹಾಭಿಷ್ಟೆ ಸಲ್ಲುವುದು
ಅನುಮಾನವಿದಕ್ಕಿಲ್ಲ ಪೂರ್ವದ ಕಥೆ ಕೇಳಿ
ಕನಕ ಮುನೇಶ್ವರ ತಪವ ಮಾಡಿದನಂದು

### ಉಡುಪಿಯ ಕುರಿತು

ಸಕಲ ಸಂರಕ್ಷಕರು ಮಾತೆಯ ತರುವಾಯ
ಸಕಲ ಬೋಧಕರೆಲ್ಲ ತಂದೆಯ ತರುವಾಯ
ಸಕಲ ಸುಖಗಳೆಲ್ಲ ಭಕ್ತಿಯ ತರುವಾಯ
ಸಕಲ ಭೋಗಂಗಳು ಸೌಖ್ಯದ ತರುವಾಯ
ಸಕಲ ವ್ರತಂಗಳು ಹರಿದಿನದ ತರುವಾಯ
ಸಕಲ ಕ್ಷೇತ್ರಂಗಳು ಉಡುಪಿಯ ತರುವಾಯ
ಸಕಲ ವಿಗ್ರಹಗಳು ಕೃಷ್ಣನ ತರುವಾಯ

ಹೀಗೆ ಪ್ರವಾಸವು ಧರ್ಮದ ಒಂದು ಅಂಗ, ಯಾತ್ರೆಗೆ ಹೋದಾಗ ಆಗುವ ಎಲ್ಲಾ ಅನುಭವಗಳನ್ನು ಬಂಧು - ಬಾಂಧವರಿಗೆ, ನೆಂಟರಿಷ್ಟರಿಗೆ ನೆರೆಹೊರೆಯವರಿಗೆ ಹೇಳಿ ಕೊಳ್ಳಲು ತಿಳಿಸಲು ಒಂದು ಪ್ರವಾಸೋತ್ತರ ಕಾರ್ಯಕ್ರಮ ನಿಶ್ಚಯಿಸಿ ಬದರಿ ಸಮಾರಾಧನೆ, ತಿರುಪತಿ ಸಮಾರಾಧನೆ ಎಂದು ಕರೆಯುತ್ತಿದ್ದರು. ಪೂರ್ತಿ ಕುಟುಂಬದ ಪ್ರವಾಸಕ್ಕೆ ಹೋಗುವಾಗ ಮೂಲ್ಯವಾದ ಆಭರಣಗಳನ್ನು, ನಗ ನಾಣ್ಯ ಗಳನ್ನು ಊರಿನ ಗಣ್ಯರ ಮನೆಯಲ್ಲಿ ಇಡುತ್ತಿದ್ದರು. ಅಷ್ಟೇ ಅಲ್ಲ ಪ್ರವಾಸದಿಂದ ಬಂದ ಮೇಲೆ ಎಲ್ಲರಿಗೂ ಧಾರ್ಮಿಕ ನೆನಪಿನ ಕಾಣಿಕೆಗಳನ್ನು ಕೊಡುತ್ತಿದ್ದರು. ಮುಂದೆ ಹೋಗುವವರಿಗೆ ಆ ಮನೆ ಮಾರ್ಗದರ್ಶನ ಕೇಂದ್ರವಾಗುತ್ತಿತ್ತು. ಪ್ರವಾಸಾಧಾರಿತ ಈ ಕಾರ್ಯಕ್ರಮವನ್ನು ಧರ್ಮದ ಒಂದು ಅಂಗವಾಗಿ ಪರಿಗಣಿ ಸುತ್ತಿದ್ದರು. ಯಾತ್ರೆ ತೆಗೆದುಕೊಂಡು ಹೋದ ಪೆಟ್ಟಿಗೆಯಲ್ಲಿರುವ ದೇವರಪೂಜೆ, ಬಿರ್ಕಿತಂಬಿಗೆ. ಇವೆಲ್ಲವೂ ಧರ್ಮದ ಉಪ ಕರಣಗಳು. ಹೀಗೆ ಪ್ರವಾಸ ಆಯಾ ಕಾಲದ ವಿಜ್ಞಾನ ಆಧಾರಿತ ಸಮಾಜದಿಂದ ಮಾನ್ಯತೆ ಪಡೆದ ಗೌರವಯುತವಾದ ಧರ್ಮಾಚರಣೆಯಾಗಿತ್ತು.

ಯಾತ್ರೆಯ ಸಂದರ್ಭದಲ್ಲಿ ಪುಣ್ಯದ ಕೆಲಸಗಳನ್ನೇ ಮಾಡಬೇಕು. ತಿಳಿದೋ ತಿಳಿಯದೋ ಏನಾದರೂ ಪಾಪ ಮಾಡಿದರೆ ಅದು ವಜ್ರಲೇಪವೇ ಸರಿ.

"ಪರೋಪಕಾರಂ ಪುಣ್ಯಾಯ, ಪಾಪಾಯ ಪರಪೀಡನಂ"

ತಿರುಮಲ ತಿರುಪತಿ ದೇವಸ್ಥಾನಗಳು

# ದೇವುನಿಕಡಪ
# ಶ್ರೀ ಲಕ್ಷ್ಮೀ ವೆಂಕಟೇಶ್ವರ ಸ್ವಾಮಿಯವರ ಬ್ರಹ್ಮೋತ್ಸವಗಳು



**2021 ಫೆಬ್ರವರಿ**
**13 ರಿಂದ 21 ರ ವರೆಗೆ**

**12-02-2021 ಶುಕ್ರವಾರ**
ಹಗಲು: ದೀಕ್ಷಾ, ತಿರುಮಂಜನ
ರಾತ್ರಿ: ಸೇನಾಧಿಪತಿ ಉತ್ಸವ , ಅಂಕುರಾರ್ಪಣೆ

**13-02-2021 ಶನಿವಾರ**
ಹಗಲು: ತಿರುಚ್ಚಿ, ಧ್ವಜಾರೋಹಣ,
ರಾತ್ರಿ: ಚಂದ್ರಪ್ರಭವಾಹನ.

**14-02-2021 ಭಾನುವಾರ**
ಹಗಲು: ಸೂರ್ಯಪ್ರಭವಾಹನ
ರಾತ್ರಿ: ದೊಡ್ಡಶೇಷವಾಹನ

**15-02-2021 ಸೋಮವಾರ**
ಹಗಲು: ಚಿಕ್ಕಶೇಷವಾಹನ
ರಾತ್ರಿ: ಸಿಂಹವಾಹನ

**16-02-2021 ಮಂಗಳವಾರ**
ಹಗಲು: ಕಲ್ಪವೃಕ್ಷವಾಹನ,
ರಾತ್ರಿ: ಹನುಮಂತವಾಹನ

**17-02-2021 ಬುಧವಾರ**
ಹಗಲು: ಮುತ್ತಿನಚಪ್ಪರವಾಹನ
ರಾತ್ರಿ: ಗರುಡವಾಹನ

**18-02-2021 ಗುರುವಾರ**
ಹಗಲು: ಕಲ್ಯಾಣೋತ್ಸವ
ರಾತ್ರಿ: ಗಜವಾಹನ

**19-02-2021 ಶುಕ್ರವಾರ**
ಹಗಲು: ರಥೋತ್ಸವ
ರಾತ್ರಿ: ಧೂಳಿ ಉತ್ಸವ

**20-02-2021 ಶನಿವಾರ**
ಹಗಲು: ಸರ್ವಭೂಪಾಲವಾಹನ
ರಾತ್ರಿ: ಅಶ್ವವಾಹನ

**21-02-2021 ಭಾನುವಾರ**
ಹಗಲು: ವಸಂತೋತ್ಸವ , ಚಕ್ರಸ್ನಾನ
ರಾತ್ರಿ: ಧ್ವಜಾವರೋಹಣ, ಹಂಸವಾಹನ

ತಿರುಮಲೆ ತಿರುಪತಿ ದೇವಸ್ಥಾನಗಳು



# ಶ್ರೀನಿವಾಸಮಂಗಾಪುರಂ
# ಶ್ರೀ ಕಲ್ಯಾಣ ವೆಂಕಟೇಶ್ವರ ಸ್ವಾಮಿಯವರ ಬ್ರಹ್ಮೋತ್ಸವಗಳು

**2021 ಮಾರ್ಚ್**
**02 ರಿಂದ 10 ರ ವರೆಗೆ**

**01-03-2021 ಸೋಮವಾರ**
ಹಗಲು : ......
ಸೇನಾಧಿಪತಿ ಉತ್ಸವ, ಅಂಕುರಾರ್ಪಣೆ

**02-03-2021 ಮಂಗಳವಾರ**
ಹಗಲು: ತಿರುಚ್ಚಿ ಉತ್ಸವ , ಧ್ವಜಾರೋಹಣ,
ರಾತ್ರಿ: ದೊಡ್ಡಶೇಷವಾಹನ

**03-03-2021 ಬುಧವಾರ**
ಹಗಲು: ಚಿಕ್ಕಶೇಷವಾಹನ,
ರಾತ್ರಿ: ಹಂಸವಾಹನ

**04-03-2021 ಗುರುವಾರ**
ಹಗಲು: ಸಿಂಹವಾಹನ,
ರಾತ್ರಿ: ಮುತ್ತಿನಚಪ್ಪರವಾಹನ

**05-03-2021 ಶುಕ್ರವಾರ**
ಹಗಲು: ಕಲ್ಪವೃಕ್ಷವಾಹನ
ರಾತ್ರಿ: ಸರ್ವಭೂಪಾಲವಾಹನ

**06-03-2021 ಶನಿವಾರ**
ಹಗಲು: ಪಲ್ಲಕ್ಕಿಯಲ್ಲಿ ಮೋಹಿನೀ ಅವತಾರೋತ್ಸವ
ರಾತ್ರಿ: ಗರುಡವಾಹನ

**07-03-2021 ಭಾನುವಾರ**
ಹಗಲು: ಹನುಮದ್ವಾಹನ,ಸಾ॥ ವಸಂತೋತ್ಸವಂ
ರಾತ್ರಿ: ಗಜವಾಹನ

**08-03-2021 ಸೋಮವಾರ**
ಹಗಲು: ಸೂರ್ಯಪ್ರಭವಾಹನ
ರಾತ್ರಿ: ಚಂದ್ರಪ್ರಭವಾಹನ

**09-03-2021 ಮಂಗಳವಾರ**
ಹಗಲು: ರಥೋತ್ಸವ
ರಾತ್ರಿ: ಅಶ್ವವಾಹನ

**10-03-2021 ಬುಧವಾರ**
ಹಗಲು: ಪಲ್ಲಕ್ಕಿ ಉತ್ಸವ, ತಿರುಚ್ಚಿ ಉತ್ಸವಂ,
ತೀರ್ಥಅವಭೃಥೋತ್ಸವ, ಚಕ್ರಸ್ನಾನ,
ರಾತ್ರಿ: ತಿರುಚ್ಚಿ ಉತ್ಸವ, ಧ್ವಜಾವರೋಹಣ.

ತಿರುಮಲ ತಿರುಪತಿ ದೇವಸ್ಥಾನಗಳು

# ತಿರುಪತಿ

# ಶ್ರೀ ಕಪಿಲೇಶ್ವರ ಸ್ವಾಮಿಯವರ ಬ್ರಹ್ಮೋತ್ಸವಗಳು



**2021 ಮಾರ್ಚ್**
**04 ರಿಂದ 13 ರ ವರೆಗೆ**

**03-03-2021 ಬುಧವಾರ**
ರಾತ್ರಿ: ಮೂಷಿಕ ವಾಹನದ ಮೇಲೆ ವಿನಾಯಕಸ್ವಾಮಿ
ಅಂಕುರಾರ್ಪಣೆ

**04-03-2021 ಗುರುವಾರ**
ಹಗಲು: ಪಲ್ಲಕಿ ಉತ್ಸವ ಧ್ವಜಾರೋಹಣ,
ರಾತ್ರಿ: ಹಂಸವಾಹನ

**05-03-2021 ಶುಕ್ರವಾರ**
ಹಗಲು: ಸೂರ್ಯಪ್ರಭವಾಹನ
ರಾತ್ರಿ: ಚಂದ್ರಪ್ರಭವಾಹನ.

**06-03-2021 ಶನಿವಾರ**
ಹಗಲು: ಭೂತವಾಹನ
ರಾತ್ರಿ: ಸಿಂಹವಾಹನ

**07-03-2021 ಭಾನುವಾರ**
ಹಗಲು: ಮಕರವಾಹನ
ರಾತ್ರಿ: ಶೇಷವಾಹನ

**08-03-2021 ಸೋಮವಾರ**
ಹಗಲು: ಅಧಿಕಾರನಂದಿ ವಾಹನ
ರಾತ್ರಿ: ತಿರುಚ್ಚಿ ಉತ್ಸವ

**09-03-2021 ಮಂಗಳವಾರ**
ಹಗಲು: ವ್ಯಾಘ್ರವಾಹನ
ರಾತ್ರಿ: ಗಜವಾಹನ

**10-03-2021 ಬುಧವಾರ**
ಹಗಲು: ಕಲ್ಪವೃಕ್ಷವಾಹನ
ರಾತ್ರಿ: ತಿರುಚ್ಚಿ ಉತ್ಸವ

**11-03-2021 ಗುರುವಾರ**
ಹಗಲು: ರಥೋತ್ಸವ
ರಾತ್ರಿ: ನಂದಿವಾಹನ (ಮಹಾಶಿವರಾತ್ರಿ)

**12-03-2021 ಶುಕ್ರವಾರ**
ಹಗಲು: ಪುರುಷಾಮೃಗ ವಾಹನ
ರಾತ್ರಿ: (ಕಲ್ಯಾಣೋತ್ಸವ) ಅಶ್ವವಾಹನ

**13-03-2021 ಶನಿವಾರ**
ಹಗಲು : ಸೂರ್ಯಪ್ರಭವಾಹನದಲ್ಲಿ ನಟರಾಜಸ್ವಾಮಿ, ತ್ರಿಶೂಲಸ್ನಾನ
ರಾತ್ರಿ: ಧ್ವಜಾವರೋಹಣ, ರಾವಣಾಸುರ ವಾಹನ



# ತಿರುಪತಿ ಶ್ರೀ ಕೋದಂಡರಾಮ ಸ್ವಾಮಿಯವರ ಬ್ರಹ್ಮೋತ್ಸವಗಳು

2021 ಮಾರ್ಚ್
13 ರಿಂದ 21 ರ ವರೆಗೆ

**12-03-2021 ಶುಕ್ರವಾರ**
ರಾತ್ರಿ : ಸೇನಾಧಿಪತಿ ಉತ್ಸವ,
ಅಂಕುರಾರ್ಪಣೆ

**13-03-2021 ಶನಿವಾರ**
ಹಗಲು: ತಿರುಚ್ಚಿ ಉತ್ಸವ , ಧ್ವಜಾರೋಹಣ,
ರಾತ್ರಿ: ದೊಡ್ಡಶೇಷವಾಹನ

**14-03-2021 ಭಾನುವಾರ**
ಹಗಲು: ಚಿಕ್ಕಶೇಷವಾಹನ,
ರಾತ್ರಿ: ಹಂಸವಾಹನ

**15-03-2021 ಸೋಮವಾರ**
ಹಗಲು: ಸಿಂಹವಾಹನ
ರಾತ್ರಿ: ಮುತ್ತಿನಚಪ್ಪರವಾಹನ

**16-03-2021 ಮಂಗಳವಾರ**
ಹಗಲು: ಕಲ್ಪವೃಕ್ಷವಾಹನ
ರಾತ್ರಿ: ಸರ್ವಭೂಪಾಲವಾಹನ

**17-03-2021 ಬುಧವಾರ**
ಹಗಲು: ಪಲ್ಲಕ್ಕಿಯಲ್ಲಿ ಮೋಹಿನೀ ಅವತಾರೋತ್ಸವ
ರಾತ್ರಿ: ಗರುಡವಾಹನ

**18-03-2021 ಗುರುವಾರ**
ಹಗಲು: ಹನುಮದ್ವಾಹನ,
ಸಾ॥ ವಸಂತೋತ್ಸವ, ರಾತ್ರಿ: ಗಜವಾಹನ

**19-03-2021 ಶುಕ್ರವಾರ**
ಹಗಲು : ಸೂರ್ಯಪ್ರಭವಾಹನ
ರಾತ್ರಿ : ಚಂದ್ರಪ್ರಭವಾಹನ

**20-03-2021 ಶನಿವಾರ**
ಹಗಲು: ರಥೋತ್ಸವ
ರಾತ್ರಿ: ಅಶ್ವವಾಹನ

**21-03-2021 ಭಾನುವಾರ**
ಹಗಲು: ಚಕ್ರಸ್ನಾನ
ರಾತ್ರಿ: ಧ್ವಜಾವರೋಹಣ



# ಗರುಡ ಪಂಚಮಿ ಹೀಗೊಂದು ಚಿಂತನೆ

-ಡಾ॥ ಗುರುರಾಜ ಪೋಶೆಟ್ಟಿಹಳ್ಳಿ
97393 69621

ಗರುಡನ ಮಹಿಮೆ ಅಚಿಂತ್ಯ. ಗರುಡವಾಹನನಾದ ಶ್ರೀಹರಿಯ ಮಹಿಮೆ ಅನಂತ, ಇಂಥ ಗರುಡದೇವರು ಗುರು-ಹಿರಿಯರ,ತಂದೆ - ತಾಯಿಯರ ಕರುಣೆಗೆ ಪಾತ್ರರಾದರು. ತನ್ಮೂಲಕ ಸ್ವರ್ಗಲೋಕಕ್ಕೆ ತೆರಳಿ ಅಮೃತವನ್ನೂ ಕೂಡ ಪಡೆದರು. ಇವರ ಮಾರ್ಗದರ್ಶನದಂತೆ ಗುರು ಹಿರಿಯರ, ತಂದೆ-ತಾಯಿಯರ ಕರುಣೆಗೆ ಪಾತ್ರರಾಗುವುದೇ ಜೀವನದ ಮುಖ್ಯ ಉದ್ದೇಶ ಎಂಬ ನೀತಿಯನ್ನು ತಿಳಿಯಬೇಕು.

ಭೂಮಿಗೆ ಭಾರರಾದ ಹತ್ತಾರು ಮಕ್ಕಳನ್ನು ಪಡೆಯುವುದಕ್ಕಿಂತ ಗರುಡನಂಥ ಒಬ್ಬ ಸಾತ್ವಿಕ ಮಗನನ್ನು ಪಡೆಯುವುದೇ ಸಾರ್ಥಕ ಎಂಬ ನೀತಿಯನ್ನು ಗರುಡನ ಚರಿತ್ರೆಯಿಂದ ಮಹಾಭಾರತವು ತಿಳಿಸಿದೆ.

ಗರುಡನು ವಿನುತೆಯ ಮಗ. ವಿನುತೆಯ ಕದ್ರುವಿನ ದಾಸಿಯಾದ ಮೇಲೆ ತಾಯಿಯು ಇಲ್ಲದ ಸಂದರ್ಭದಲ್ಲಿ ಮಹಾತೇಜಸ್ವಿಯಾದ ಗರುಡನು ಮೊಟ್ಟೆಯನ್ನು ಒಡೆದುಕೊಂಡು ಹೊರಗೆ ಬಂದನು. ಒಂದು ಸಾವಿರ ವರ್ಷಗಳ ಕಾಲ ಮೊಟ್ಟೆಯ ಒಳಗಿದ್ದುಕೊಂಡು ದಿವ್ಯವಾದ ಶರೀರವನ್ನು ಪಡೆದ ಇವನ ಪರಾಕ್ರಮ, ಇವನ ತೇಜಸ್ಸು ಮೂರು ಲೋಕಗಳನ್ನೇ ಗೆಲ್ಲುವಂತಿತ್ತು. ಹುಟ್ಟಿದ ಕೂಡಲೇ ಅತ್ಯಂತ ದೊಡ್ಡದಾದ ದೇಹವನ್ನು ಧರಿಸಿ ಪಕ್ಷಿಯಾಗಿ ಆಕಾಶಕ್ಕೆ ಹಾರುತ್ತಾನೆ. ಅಗ್ನಿಯ ರಾಶಿಯೇ ಆಕಾಶದಲ್ಲಿ ಹಾರುವಂತೆ ಎಲ್ಲಾ ಪ್ರಜೆಗಳಿಗೆ ಕಾಣಿಸುತ್ತದೆ. ಕುಪಿತನಾದ ಅಗ್ನಿಯು ಸಮಸ್ತ ಲೋಕವನ್ನೇ ಸುಡಲು ಹೀಗೆ ಮಾಡುತ್ತಿದ್ದಾನೆಂದು ಎಲ್ಲರೂ ಭ್ರಾಂತರಾಗುತ್ತಾರೆ. ಕೂಡಲೇ ಅಗ್ನಿಯನ್ನು ಕುರಿತು ಶರಣಾಗತರಾಗಿ ನೀನು ಹೀಗೆ ಅಭಿವೃದ್ಧಿಯನ್ನು ಹೊಂದಬಾರದು.ನಮ್ಮನ್ನೆಲ್ಲಾ ದಹಿಸಬಾರದು ಎಂದು ಎಲ್ಲರೂ ಪ್ರಾರ್ಥನೆ ಮಾಡುತ್ತಾರೆ.

ಅಗ್ನಿಯು ನಗುತ್ತಾ ಉತ್ತರಿಸುತ್ತಾನೆ. ಆಕಾಶ ಮಾರ್ಗದಲ್ಲಿ ಅಂತಹ ಕಾಂತಿಯಿಂದ ಹಾರುತ್ತಿರುವವನು ನಾನಲ್ಲ. ನನಗಿಂತ ಉತ್ತಮವಾದ ಗರುಡನು ಇವನು. ಕಶ್ಯಪರ ಮಗನಾಗಿ ಇವನು ಜನಿಸಿದ್ದಾನೆ.ದೇವತೆಗಳಿಗೆ ಅತ್ಯಂತ ಹಿತವನ್ನೇ ಉಂಟುಮಾಡುವ ಇವನು ದೈತ್ಯರನ್ನು ರಾಕ್ಷಸರನ್ನು ಸದೆ ಬಡಿಯುತ್ತಾನೆ. ಎಲ್ಲಾ ಸರ್ಪಗಳನ್ನು ನಾಶ ಮಾಡುತ್ತಾನೆ. ಇವನ ಪರಾಕ್ರಮಕ್ಕೆ ಸರಿಸಾಟಿಯಾದ ಮತ್ತೊಬ್ಬ ವ್ಯಕ್ತಿ ಲೋಕದಲ್ಲೇ ಇರುವುದಿಲ್ಲ. ಅವನನ್ನೇ ಕುರಿತು ನಾವೆಲ್ಲರೂ ಪ್ರಾರ್ಥನೆ ಮಾಡೋಣ ಎಂದು ಅಗ್ನಿಯು ಹೇಳುತ್ತಾನೆ.

ದೇವತೆಗಳು, ಸಮಸ್ತ ಋಷಿಗಳು , ಪ್ರಜೆಗಳು ಎಲ್ಲರೂ ಗರುಡನ ಸಮೀಪಕ್ಕೆ ಹೋಗಿ ವಿಧವಿಧವಾಗಿ ಗರುಡನನ್ನು ಸ್ತುತಿಸುತ್ತಾರೆ. ದೇವತೆಗಳ ಪ್ರಾರ್ಥನೆಯನ್ನು ಕೇಳಿ ಸಂತೋಷವನ್ನು ಹೊಂದಿದ ಗರುಡನು ತನ್ನ ದೇಹವನ್ನು ತಾನೇ ನೋಡಿಕೊಳ್ಳುತ್ತಾನೆ. ಎಲ್ಲರಿಗೂ ಇದರಿಂದ ಭಯವಾಗುತ್ತದೆ ಎಂದು ತಿಳಿದು ಸಂಕೋಚ ಮಾಡಿಕೊಳ್ಳುತ್ತಾನೆ. ತನ್ನ ಪ್ರಖರವಾದ ತೇಜಸ್ಸನ್ನು ಉಪಸಂಹಾರ ಮಾಡುತ್ತಾನೆ.

ಮಹಾಪರಾಕ್ರಮಿಯಾದ ಗರುಡನು ಅಂತರಿಕ್ಷಕ್ಕೆ ಹಾರಿ ತಮ್ಮನಾದ ಅರುಣನನ್ನು ಸಂದರ್ಶಿಸಿದನು. ಅವನನ್ನು ತನ್ನ ಬೆನ್ನಿನ ಮೇಲೆ ಕುಳ್ಳಿರಿಸಿಕೊಂಡು ತನ್ನ ತಂದೆಯಾದ ಕಶ್ಯಪರನ್ನು ಭೇಟಿಮಾಡಿ ನಮಸ್ಕರಿಸಿದನು.ಅಲ್ಲಿಂದ ಸಮುದ್ರದ ಮತ್ತೊಂದು ತೀರದಲ್ಲಿ ಕದ್ರುವಿನ ದಾಸಿಯಾಗಿ ನೆಲೆಸಿರುವ ತನ್ನ ತಾಯಿಯಾದ ವಿನುತೆಯನ್ನು ಸಂಪರ್ಕಿಸಿ ನಮಸ್ಕರಿ



ಸಿದನು. ಪುತ್ರನಾದ ಗರುಡನ ಆಗಮನವನ್ನು ನೋಡಿ, ತಾಯಿಯಾದ ವಿನುತೆಯು ಆನಂದಭಾಷ್ಪವನ್ನು ಸುರಿಸಿದಳು.

ಒಮ್ಮೆ ಗರುಡನು ತಾಯಿಯಾದ ವಿನುತೆಯ ಜೊತೆಯಲ್ಲಿ ಇರಬೇಕಾದರೆ ಕದ್ರುವು ವಿನುತೆಯನ್ನು ಕರೆದು ಹೀಗೆ ಹೇಳುತ್ತಾಳೆ.

ಎಲೈ ಭದ್ರೆಯೇ! ಸಮುದ್ರದ ಮಧ್ಯಪ್ರದೇಶದಲ್ಲಿ ಒಂದು ನಾಗಾಲಯವಿದೆ. ಅದು ಅತ್ಯಂತ ರಮಣೀಯವಾಗಿದೆ. ನನ್ನನ್ನು ಮಕ್ಕಳ ಸಹಿತವಾಗಿ ಅಲ್ಲಿಗೆ ಕರೆದುಕೊಂಡು ಹೋಗು.

ಅವಳ ಮಾತಿನಂತೆ ವಿನುತೆಯು ಕದ್ರುವನ್ನು ಎತ್ತಿಕೊಂಡು ಹೊರಟಳು. ತಾಯಿಯ ಮಾತಿನಂತೆ ಗರುಡನು ಕದ್ರುವಿನ ಮಕ್ಕಳಾದ ಎಲ್ಲಾ ಸರ್ಪಗಳನ್ನು ತನ್ನ ಮೇಲೆ ಕುಳ್ಳಿರಿಸಿಕೊಂಡು ಹೊರಟನು. ಹಾರುವಾಗ ಅತ್ಯಂತ ಎತ್ತರದಲ್ಲಿ ಸೂರ್ಯನಿಗೆ ಅಭಿಮುಖವಾಗಿ ಗರುಡನು ಹೋಗುತ್ತಿದ್ದನು. ಸೂರ್ಯನ ಪ್ರತಾಪವನ್ನು ತಾಳಲಾರದೇ ಎಲ್ಲಾ ಸರ್ಪಗಳು ಮೂರ್ಛಿತವಾಗುತ್ತವೆ. ಕದ್ರುವಿಗೆ ತನ್ನ ಮಕ್ಕಳ ಪರಿಸ್ಥಿತಿಯನ್ನು ನೋಡಿ ಬಹಳ ಕನಿಕರವುಂಟಾಗುತ್ತದೆ.

ಇಂದ್ರನನ್ನು ಕುರಿತು ಕದ್ರುದೇವಿಯು ಸ್ತೋತ್ರ ಮಾಡುತ್ತಾಳೆ. ನನ್ನ ಮಕ್ಕಳೆಲ್ಲರೂ ಸೂರ್ಯನ ತಾಪಕ್ಕೆ ಒಳಗಾಗಿ ಭಸ್ಮವಾಗುತ್ತಿದ್ದಾರೆ. ನೀನು ತಂಪಾದ ನೀರನ್ನು ಸುರಿಸಿ ಅವರನ್ನು ಕಷ್ಟದಿಂದ ಪಾರುಮಾಡು.

ಕದ್ರುವಿನ ಪ್ರಾರ್ಥನೆಯಂತೆ ದೇವೇಂದ್ರನು ಮಳೆಯನ್ನು ಸುರಿಸುತ್ತಾನೆ. ಮೂಹೂರ್ತಕಾಲದ ತನಕ ಮಿಂಚಿನಿಂದ ಕೂಡಿದ ಧಾರಾಕಾರವಾದ ಮಳೆ ಸುರಿದಾಗ ಎಲ್ಲಾ ಸರ್ಪಗಳು ಸಂತೋಷವನ್ನು ಹೊಂದುತ್ತವೆ.

ಗರುಡನ ಮೇಲೆ ಕುಳಿತ ಎಲ್ಲಾ ಸರ್ಪಗಳು ಸಾಗರದ ಮಧ್ಯದಲ್ಲಿರುವ ಆ ನಾಗಲೋಕವನ್ನು ತಲುಪುತ್ತದೆ. ಅತ್ಯಂತ ಸುಂದರವಾಗಿ ಫಲಪುಷ್ಪಗಳಿಂದ ಆ ಪ್ರದೇಶವು ಕಂಗೊಳಿಸುತ್ತಿದೆ.ಬಹಳಷ್ಟು ಸಮಯ ಅಲ್ಲಿಯೇ ಎಲ್ಲಾ ಸರ್ಪಗಳು ವಿಹರಿಸಿ, ಪುನಃ ಗರುಡನನ್ನು ಕುರಿತು ಹೀಗೆ ಆಜ್ಞೆ ಮಾಡುತ್ತವೆ.

ಗರುಡನೇ ! ನಾವು ಇಲ್ಲಿ ವಿಹಾರ ಮಾಡಿದ್ದು ಮುಗಿಯಿತು. ಮತ್ತೊಂದು ದ್ವೀಪಕ್ಕೆ ನಮ್ಮನ್ನು ನೀನು ಎತ್ತಿಕೊಂಡು ಹೋಗು. ಕ್ಷಲ್ಲಕವಾದ ಸರ್ಪಗಳು ಶ್ರೇಷ್ಠನಾದ ಗರುಡನಿಗೆ ಆಜ್ಞೆಯನ್ನು ಮಾಡಿದಾಗ ಗರುಡನು ಚಿಂತಾಕ್ರಾಂತನಾಗುತ್ತಾನೆ.

ಅಮ್ಮಾ! ಕದ್ರುವಿನ ಮಕ್ಕಳಾದ ಸರ್ಪಗಳು ನನ್ನನ್ನು ಕುರಿತು ಏಕೆ ಆಜ್ಞೆ ಮಾಡುತ್ತಿವೆ? ಅವುಗಳು ಹೇಳಿದಂತೆ ನಾನೇಕೆ ಕೇಳಬೇಕು. ಮಗುವೇ ನಾನು ಒಮ್ಮೆ ಪಣವನ್ನು ಒಡ್ಡಿ ಕದ್ರು ಮಾಡಿದ ವಂಚನೆಯಿಂದ ಅವಳ ದಾಸಿಯಾಗಿದ್ದೇನೆ. ನಾನು ಅವಳ ದಾಸಿಯಾಗಿರುವುದರಿಂದ ನೀನೂ ಕೂಡ ಇಂದು ದಾಸನಾಗಿರುವೆ ತಾಯಿಯ ಮಾತುಗಳನ್ನು ಕೇಳಿದ ಗರುಡನು ದುಃಖಿತನಾಗಿ ಸರ್ಪಗಳ ಬಳಿ ತೆರಳಿ ಮಾತನಾಡುತ್ತಾನೆ.

ನನ್ನ ತಾಯಿಯು ದಾಸ್ಯತ್ವದಿಂದ ವಿಮುಕ್ತಳಾಗಬೇಕೆಂದರೆ ನಿಮಗೆ ಯಾವ ಕೆಲಸವನ್ನು ನಾನು ಮಾಡಿಕೊಡಬೇಕು ಸತ್ಯವನ್ನು ಹೇಳಿರಿ, ಗರುಡನ ಮಾತನ್ನು ಕೇಳಿ ಅತ್ಯಂತ ಹರ್ಷದಿಂದ ಎಲ್ಲಾ ಸರ್ಪಗಳು ಏಕಕಂಠದಿಂದ ಹೇಳುತ್ತವೆ. “ಅಮೃತವನ್ನು ತೆಗೆದುಕೊಂಡು ಬಾ. ಆಗ ನಿನ್ನ ತಾಯಿಗೆ ದಾಸ್ಯದಿಂದ ವಿಮೋಚನೆಯಾಗುತ್ತದೆ.”

ಸರ್ಪಗಳ ಮಾತುಗಳನ್ನು ಕೇಳಿ ಕ್ಷಣ ಮಾತ್ರದಲ್ಲಿ ಗರುಡನು ಅಮೃತವನ್ನು ತರಲು ಹೊರಟೇ ಬಿಟ್ಟನು. ಮೊದಲು ತಾಯಿಗೆ ನಮಸ್ಕರಿಸಿ,ಅಮ್ಮಾ! ಅಮೃತವನ್ನು ತರಲು ಹೋಗುತ್ತಿದ್ದೇನೆ. ನನಗೆ ಬಹಳ ಹಸಿವಾಗುತ್ತಿದೆ. ಏನನ್ನಾದರೂ ತಿನ್ನಲು ಕೊಡು.

ಮಗುವೇ! ನಿನಗೆ ಹೊಟ್ಟೆ ತುಂಬಿಸಲು ಯಾರಿಗೂ ಸಾಧ್ಯವಿಲ್ಲ. ಅದಕ್ಕಾಗಿ ಸಮುದ್ರದ ಮಧ್ಯದಲ್ಲಿ ಒಂದು ನಿಷಾದರ ಪ್ರದೇಶವಿದೆ. ಸಾವಿರ ಸಾವಿರ ಸಂಖ್ಯೆಯಲ್ಲಿ ಅಲ್ಲಿ ನಿಷಾದರು ವಾಸಮಾಡಿಕೊಂಡು ಇದ್ದಾರೆ. ಅವರೆನ್ನೆಲ್ಲಾ ಸಂಪೂರ್ಣವಾಗಿ ತಿಂದು ನೀನು ಬಲಶಾಲಿಯಾಗು. ಆದರೆ ಎಲ್ಲರನ್ನು ತಿನ್ನುವಾಗ ಬ್ರಾಹ್ಮಣರನ್ನು ಮಾತ್ರ ಸರ್ವಥಾ ತಿನ್ನಬೇಡ. ಅವನು ಅಗ್ನಿಗೆ ಸಮಾನ

ನಾಗಿರುತ್ತಾನೆ. ಒಂದು ವೇಳೆ ಬ್ರಾಹ್ಮಣನನ್ನು ನೀನು ತಿಂದರೆ ಅವನು ವಿಷವಾಗುತ್ತಾನೆ. ಎಲ್ಲಾ ವರ್ಣಗಳಲ್ಲಿಯೂ ಶ್ರೇಷ್ಠ ನಾದವನು ಬ್ರಾಹ್ಮಣನೇ ಆಗಿರುವ ಕಾರಣ, ಎಲ್ಲರಿಗೂ ಗುರು ಸ್ಥಾನದಲ್ಲಿರುತ್ತಾನೆ. ಆದ್ದರಿಂದ ಬ್ರಾಹ್ಮಣರನ್ನು ಮಾತ್ರ ನೀನು ಕೊಲ್ಲಲೇಬಾರದು.

ತಾಯಿಯೇ ! ಬ್ರಾಹ್ಮಣನ ಲಕ್ಷಣಗಳೇನು? ಅವನು ಹೇಗಿರುತ್ತಾನೆ? ಅವನನ್ನು ನಾನು ಹೇಗೆ ಗುರುತಿಸಲಿ?

ಮಗನೇ! ಯಾರನ್ನು ನೀನು ತಿನ್ನುವಾಗ ನಿನ್ನ ಕಂಠದೇಶವು ಅಗ್ನಿಯಂತೆ ಸುಡುತ್ತದೋ, ಅವನನ್ನೇ ಬ್ರಾಹ್ಮಣ ಶ್ರೇಷ್ಠನೆಂದು ತಿಳಿ. ಮಗನ ಅಪಾರ ಪರಾಕ್ರಮವನ್ನು ತಿಳಿ ದಿದ್ದರೂ ಕೂಡ ತಾಯಿಯಾದ ವಿನುತೆಯು ಆಶೀರ್ವಾದ ಮಾಡಿ ಮಂಗಳದ ಮಾತುಗಳನ್ನು ಹೇಳಿ ಕಳುಹಿಸಿಕೊಡು ತ್ತಾಳೆ.

ಪಕ್ಷೌ ತೇ ಪಾತು ಭಗವಾನ್ ಚಂದ್ರಃ ಪೃಷ್ಠಂತು ಪುತ್ರಕ
ಶಿರಸ್ತು ಪಾತು ತೇ ವಹ್ನಿರ್ಮಾರುತಃ ಪ್ರಣಮೇವ ಚ ॥

ಭಗವಂತನಾದ ನಾರಾಯಣನು ನಿನ್ನ ಪಕ್ಷಗಳನ್ನು ರಕ್ಷಿಸಲಿ. ಪ್ರೀತಿಪಾತ್ರನಾದ ಪುತ್ರನೇ, ಚಂದ್ರನು ನಿನ್ನ ಪೃಷ್ಠ ವನ್ನು ರಕ್ಷಿಸಲಿ. ವಹ್ನಿಯು ನಿನ್ನ ಶಿರಸ್ಸನ್ನು ರಕ್ಷಿಸಲಿ. ಮಾರು ತನು ನಿನ್ನ ಪ್ರಾಣವನ್ನು ರಕ್ಷಿಸಲಿ.

ಅಹಂ ಚ ತೇ ಸದಾ ಪುತ್ರ ಶಾಂತಿಸ್ವಸ್ತಿಪರಾಯಣಾ
ಇಹಾಸೀನಾ ಭವಿಷ್ಯಾಮಿ ಸ್ವಸ್ತಿಕಾರೇ ರತಾ ಸದಾ
ಅರಿಷ್ಟಂ ವ್ರಜ ಪಂಥಾನಂ ವತ್ಸ ಕಾರ್ಯಾರ್ಥಸಿದ್ಧಯೇ॥

ಎಲೈ ಪುತ್ರನೇ ! ನಾನು ಯಾವಾಗಲೂ ನಿನ್ನ ಶಾಂತಿ ಮತ್ತು ಕ್ಷೇಮವನ್ನು ಆಶಂಸಿಸುತ್ತಾ ಇಲ್ಲಿಯೇ ಸ್ವಸ್ತಿಕಾಸನದಲ್ಲಿ ಕುಳಿತುಕೊಳ್ಳುತ್ತೇನೆ. ವತ್ಸನೇ , ನಿರ್ವಿಘ್ನವಾಗಿ ಹೋಗಿ ಬಾ.ನಿನ್ನ ಕಾರ್ಯ ಸಿದ್ಧಿಸಲಿ.

'ಗ' ಎಂದರೆ ಗತಿ. ಗತಿ ಪದಕ್ಕೆ ಗಮನ, ಸಂಚಾರ, ಉಪಾಯ,ಯುಕ್ತಿ ಎಂಬೆಲ್ಲ ಅರ್ಥಗಳುಂಟು.ಗರುಡ ಗಗನ ದಲ್ಲಿ ಸುಮಾರು 200 ಮೀಟರಿಗಿಂತಲೂ ಹೆಚ್ಚು ಎತ್ತರದಲ್ಲಿ ಹಾರುತ್ತ ಮಿಂಚಿನ ವೇಗದಲ್ಲಿ ತಾನು ಗುರಿಯಾಗಿಸಿಕೊಂಡ ಭೂಮಿಯ ಮೇಲಿರುವ ವಸ್ತುವನ್ನು ತೀಕ್ಷ್ಣ ದೃಷ್ಟಿಯಿಂದ ಗ್ರಹಿಸಬಲ್ಲ.ಗ್ರಹಿಸಿ ಹಿಡಿಯ ಬಲ್ಲ ಸಾಮರ್ಥ್ಯ ಸಾಧನೆಗೆ ಗರುಡನಿಗೆ ಗರುಡನೇ ಸಾಟಿ. ಆತ ಛಲದಂಕಮಲ್ಲ ಹಿಡಿದಿರುವ ಕಾರ್ಯವನ್ನು ಸಾಧಿಸದೇ ಬಿಡಲಾರದ ಹಟವಾದಿ ಇದಕ್ಕೆ ಆತನ ಸುತ್ತ ಹೆಣೆದಿರುವ ಪೌರಾಣಿಕ ಕಥೆಯೇ ಸಾಕ್ಷಿ.

ಕದ್ರು ಹಾಗೂ ವಿನುತೆ ಅಕ್ಕತಂಗಿಯರು.ಕಶ್ಯಪ ಋಷಿಯ ಪತ್ನಿಯರು. ಕದ್ರು ನಾಗಗಳ ಮಾತೆ.ಗರುಡ ಹಾಗೂ ಅರುಣ ವಿನುತೆಯ ಮಕ್ಕಳು. ಕದ್ರುವಿಗೆ ಸಹೋದರಿಯ ಮಾತ್ಸರ್ಯ. ಅಕ್ಕತಂಗಿಯರ ಮಧ್ಯೆ ಏರ್ಪಟ್ಟ ಪಣವೊಂದರಲ್ಲಿ ಅಕ್ಕನ ಮೋಸದಿಂದ ಸೋತ ವಿನುತೆ ಆಕೆಗೆ ದಾಸಿಯಾಗುತ್ತಾಳೆ. ಗರುಡ ಅದನ್ನು ಸಹಿಸದೇ ತಾಯಿಯ ದಾಸ್ಯಕ್ಕೆ ಕಳೆಯುವುದ ಕ್ಕಾಗಿ ಆಕೆಯ ಸ್ವಾತಂತ್ರ್ಯ ರಕ್ಷಿಸುವುದಕ್ಕಾಗಿ ಮಲತಾಯಿಯ ಆಸೆಯಂತೆ ದಾಯಾದಿ ನಾಗಗಳಿಗೆ ಎಲ್ಲಾ ಅಡೆತಡೆಗಳನ್ನು ಎದುರಿಸಿ ಛಲದಿಂದ ಕಾರ್ಯಸಿದ್ಧಿ ಅತ್ಯಂತ ದುರ್ಲಭವಾದ ಅಮೃತವನ್ನು ದೇವಲೋಕದಿಂದ ತಂದ ಮಹಾಪ್ರತಾಪಿ. ಆಗ ಆತನ ಗುರಿ ಒಂದೇ ಆಗಿತ್ತು ತಾಯಿಯ ದಾಸ್ಯತ್ವ ಕೊನೆ ಗಾಣಿಸಬೇಕೆಂಬುದು. ದೇವೇಂದ್ರ ಅಡ್ಡ ಬಂದರೂ ಆತನ ವಜ್ರಾಯುಧ ಕೂಡ ಗರುಡನನ್ನು ಬಾಧಿಸಲಿಲ್ಲ. ವಜ್ರಾಯುಧ ದಧೀಚಿ ಮಹರ್ಷಿಗಳ ಬೆನ್ನೆಲುಬಿ ನಿಂದಾದುದೆಂದು ಗೌರವ ಸೂಚಿಸಲು ತನ್ನ ಒಂದು ರೆಕ್ಕೆ ಬೀಳಿಸಿದ ವಿನೀತನೀತ ಈ ವೈನತೇಯ. ಆತನ ಶಕ್ತಿ ಧೈರ್ಯಗಳನ್ನು ಕಂಡು ಬೆರಗಾದ ಇಂದ್ರ ತನ್ನ ಸ್ನೇಹಿತನನ್ನಾಗಿ ಮಾಡಿಕೊಂಡನು. ಕೈಗೆ ಬಂದ ತುತ್ತು ಬಾಯಿಗೆ ಬಾರದಂತಾಗಲು ಉಪಾಯವೊಂದನ್ನು ಹೇಳಿ ಕೊಟ್ಟನು. ಇಂದ್ರನ ಮಾತಿನಂತೆ ನಡೆದು ದಾಯಾದಿಗಳೊಡನೆ ಕಲಹವಿಲ್ಲದೇ ಸುರಲೋಕವನ್ನೇ ಜಯಿಸಿ ಅಮೃತ ತಂದು ತಾಯಿಯ ದಾಸ್ಯ ಬಿಡಿಸಿದ ಮಾತೃಭಕ್ತ.

'ನಃ ಮಾತು ಪರದೈವತಮ್' ಎಂಬ ನಮ್ಮ ಸಂಸ್ಕೃತಿಯ ಮೂಲಾಧಾರವಾದ ಮಾತೃಭಕ್ತಿಯ ಪ್ರತೀಕ ಗರುಡ. ಅಮೃತ ಕುಂಭವೇ ಆತನ ಕೈಯಲ್ಲಿದ್ದರೂ ಅದನ್ನು ಸೇವಿಸಿದ ನಿಷ್ಕಾಮ ವಂತ,ಪ್ರಾಮಾಣಿಕ ವ್ಯಕ್ತಿ. ಅದಕ್ಕೆ ಆಸೆಪಡಲಿಲ್ಲ ಆತ ನಿಷ್ಠೆ ಯನ್ನು ಮೆಚ್ಚಿ ಮಹಾವಿಷ್ಣು ತನ್ನ ವಾಹನವನ್ನಾಗಿ ಮಾಡಿ ಕೊಂಡ.

ಭಗವದ್ಗೀತೆಯ ಹತ್ತನೆಯ ಅಧ್ಯಾಯದ 30 ನೇ ಶ್ಲೋಕದಲ್ಲಿ "ಪ್ರಹ್ಲಾದಶ್ಚಾಸ್ಮಿ ದೈತ್ಯಾನಾಂ ಕಾಲಃ ಕಲಯತಾ ಮಹಮ್ । ಮೃಗಾಣಾಂ ಚ ಮೃಗೇಂದ್ರೋಹಂ ವೈನತೇಯಶ್ಚ ಪಕ್ಷಿಣಾಮ್" ಎಂದು ಸಾರಿ ಹೇಳಿರುವುದು ಗರುಡನ ಹಿರಿಮೆಗೆ ಸಾಕ್ಷಿ. ಗರುಡನ ಸಾಮರ್ಥ್ಯವನ್ನು ಕಂಡು ವಿಷ್ಣುವು ಈತನಿಗೆ ಸುಪರ್ಣನೆಂಬ ಹೆಸರು ಕೊಟ್ಟು ತನ್ನ ವಾಹನವನ್ನಾಗಿ ಮಾಡಿ

ಕೊಂಡನು. ಅವನನ್ನು ಧ್ವಜದಲ್ಲಿಟ್ಟುಕೊಂಡು ಗರುಡ ಧ್ವಜನಾದನು. ವೇದಗಳಲ್ಲಿ ಸ್ಯೇನನೆಂದು ಉಲ್ಲೇಖಿಸಲಾಗಿದೆ. ಗಗನೇಶ್ವರ, ಕಾಮಾಯುಷ, ಕಶ್ಯಪಿ, ಖಗೇಶ್ವರ, ನಾಗಾಂತಕ, ಸಿತಾನನ, ಸುಧಾಹರ, ಸುಪರ್ಣ, ವೈನತೇಯ, ವಿಷ್ಣುರಥ, ತಾರ್ಕ್ಷ್ಯ ಗರುತ್ಮಾನ್, ಅಜಿತ, ಮುಂತಾದ ಹೆಸರುಗಳಿಂದ ವೇದ, ಉಪನಿಷತ್ತು, ಪುರಾಣ, ರಾಮಾಯಣ, ಮಹಾಭಾರತ, ಭಗವದ್ಗೀತೆ, ಯೋಗಸೂತ್ರಗಳಲ್ಲಿ ಬಣ್ಣಿಸಲ್ಪಟ್ಟಿದ್ದಾನೆ.

ಕೃಷ್ಣಾವತಾರದಲ್ಲಿ ಕೃಷ್ಣ ಸತ್ಯಭಾಮೆಯೊಡನೆ ಗರುಡ ವಾಹನನಾಗಿ ಬಂದು ನರಕಾಸುರನನ್ನು ಕೊಂದದ್ದು ಹಾಗೂ ಶ್ರೀ ಹರಿ ಗಜೇಂದ್ರನನ್ನು ರಕ್ಷಿಸಲು ಗರುಡವಾಹನನಾಗಿ ಬಂದ ನೆಂಬುದು ಜಗಜ್ಜನಿತ. ಮಹಾಭಾರತದಾದ್ಯಂತ ಉಗ್ರ ಶಕ್ತಿ, ವಾಯುವೇಗ ಮಿಂಚಿನ ತೇಜಸ್ಸು ಮುಂತಾದ ಗುಣಗಳ ಸಂಕೇತವಾಗಿ ಗರುಡ ಗುರುತಿಸಲ್ಪಟ್ಟಿದ್ದಾನೆ.

ಕುರುಕ್ಷೇತ್ರ ಯುದ್ಧದಲ್ಲಿ ಸೇನಾಧಿಪತಿಗಳಾಗಿದ್ದ ಭೀಷ್ಮ, ದ್ರೋಣರು ತಮ್ಮ ಸೇನಾದಳವನ್ನು ಗರುಡವ್ಯೂಹದಲ್ಲಿ ರಚಿಸಿದ್ದಾರೆಂಬ ವಿಷಯ ತಿಳಿದದ್ದೇ, ತಿರುಮಲ ಬೆಟ್ಟದ ಇನ್ನೊಂದು ಹೆಸರು ಗರುಡಾಚಲ.ಹೀಗೆ ಗರುಡನ ಜನ ಪ್ರಿಯತೆ ಸಾಗುತ್ತದೆ.

ವಿಷ್ಣುವನ್ನು ಗರುಡ ವಾಹನನೆಂದು ಕೇಳಿರಬಹುದು. ಅವತಾರವೆತ್ತಿದ ಗರುಡನ ಮಹಿಮೆ ಎಲ್ಲಿ ದೊರೆಯ ಬಹು ದೆಂದು ಚಡಪಡಿಸಿರಬಹುದು. ಗರುಡನ ಅದ್ಭುತ ಜನನ ಹಾಗೂ ಸಾಧನದ ವಿವರಗಳ ಆಕರ ಮಹಾಭಾರತದ ಆದಿ ಪರ್ವ, ಭಗವಂತನ ವಿಭೂತಿರೂಪ, ವಿಶೇಷ ಆವೇಶ, ಜೀವ ರಲ್ಲಿ ಉತ್ತಮತ್ವ ಇವು ಗರುಡನ ಹೆಗ್ಗಳಿಕೆ.

ಗರುಡನ ಸ್ಮರಣೆಯನ್ನು ಪ್ರತಿನಿತ್ಯ ಮಾಡಲೇಬೇಕು. ಅದ್ದರಿಂದ ಆಹಾರದಲ್ಲಿರುವ ವಿಷಭಾದೆಗಳು ಪರಿಹಾರವಾಗು ತ್ತವೆ. ಗರುಡ ಧ್ಯಾನದಿಂದ ವಿಷವೃತ್ತಿ ಉಂಟಾಗುತ್ತವೆಂಬು ದನ್ನು ಶಾಸ್ತ್ರಗಳಲ್ಲಿ ಹೇಳಿದ್ದಾರೆ. ಅನೇಕರ ಜಾತಕದಲ್ಲಿ ಸರ್ಪ ದೋಷ ಇರುತ್ತದೆ. ಅದರ ಪರಿಹಾರಕ್ಕೂ ಗರುಡನ ಆರಾಧನೆ ಯನ್ನೇ ಮಾಡಬೇಕು.ಗರುಡನ ಸ್ಮರಣೆಯಿಂದ ಸರ್ಪ ದೋಷವು ಪರಿಹಾರವಾಗುವುದಷ್ಟೇ ಅಲ್ಲದೇ ಸರ್ಪಗಳ ಬಾಧೆಯೂ ಇರುವುದಿಲ್ಲ.

ಸರಸ್ವತಿ - ಭಾರತೀಯರ ನಂತರದ ಸ್ಥಾನ ಹೊಂದಿ ದವನು. ಗರುಡ. ಶೇಷ, ರುದ್ರರು ಸಮವಾಗಿರುವರು. 'ಪ್ಲವಗ ಪನ್ನಗ ಪಾಹಿ ಭೂಷಣ ಯುವತಿಯರ ಸಮ. ತಮ್ಮೊಳಗೆ ಜಾಂಬವತಿಗಿಂತಲೂ ಕಡಿಮೆ ಇವರಿಂದ ಕಾಮರಿಗೆ ಹಾಗೂ ಖಗಪ ಫಣಿಪತಿ ಮೃಡರು ಸಮವಾಣಿಗೆ ಶತಗುಣಾವರರು ಮೂವರು ಮಿಗಿಲೆನಿಸುವನು ಶೇಷಪದದಿಂದಲಿ ತ್ರಯಂಬಕೆಗೆ ಹದಿನಾಲ್ಕು ಲೋಕವನ್ನು ಹೊತ್ತವನು ಶೇಷ,ಅವನನ್ನು ಹೊತ್ತ ವನು ವಾಯುಕೂರ್ಮ, ಅವನನ್ನು ಹೊತ್ತವನು ಮಹಾ ಕೂರ್ಮ.ಈ ಮಹಾಕೂರ್ಮನನ್ನು ಹೊತ್ತು ತಿರುಗಾಡುವವನು ಗರುಡ.

ಚೇತನಕ್ಕೆ ಅಭಿಮಾನಿ ಗರುಡನೇ, ತೊವ್ವೆಗೆ ಅಭಿಮಾನಿ ಗರುಡನೇ. ಅಷ್ಟೇ ಅಲ್ಲದೇ ಇವನು ಸುಪರ್ಣ, ವೈನತೇಯ ನಾಗಾರಿ, ನಾಗಭೂಷಣ, ವಿಷಾಂತಕ, ಜಿತಾರಿ, ಅಜಿತ, ವಿಶ್ವ ತೋಮುಖ, ಗರುತ್ಮಾನ್, ಖಗಪತಿ, ತಾರ್ಕ್ಷ್ಯ, ಕಶ್ಯಪನಂದನಃ ದ್ವಾದಶ ನಾಮಗಳ ಉಚ್ಚಾರಣೆ ವಿಷವನ್ನು ಪರಿಹರಿಸುತ್ತದೆ. ವಿಜಯವನ್ನು ತಂದು ಕೊಡುತ್ತದೆ. ಹಾವುಗಳ ಭಯವಿರುವು ದಿಲ್ಲ. ಆಪತ್ಕಾಲದಲ್ಲಿ ವ್ಯವಹಾರದಲ್ಲಿ ಕಾರ್ಯಸಿದ್ಧಿ ಬಯಸುವ ಸಮಯದಲ್ಲಿ ಬಂಧನದ ಭೀತಿಗೆ ಒಳಗಾಗುವ ಭಯದಲ್ಲಿ ಯಾತ್ರೆಯಲ್ಲಿ ಇವನ ನಾಮಗಳ ಸ್ಮರಣೆ ಶೀಘ್ರವಾಗಿ ಫಲ ಒದಗಿ ಸುತ್ತದೆ.

## ಲೇಖಕರಿಗೆ ಸೂಚನೆ

***ಧಾರ್ಮಿಕ, ಸಾಂಸ್ಕೃತಿಕ, ವಸ್ತು ವಿಶೇಷಗಳಿಂದ ಭರಿತವಾದ ನಿಮ್ಮ ಸಪ್ತಗಿರಿಗೆ ನೀವು ಲೇಖನ ಬರೆಯಿರಿ ಹಬ್ಬ - ಹರಿದಿನ-ದೇವಾಲಯ ರಥೋತ್ಸವ-ಜಾತ್ರೆ - ಆಚರಣೆ -ಸಂತ ಯತಿಗಳ ಆರಾಧನೆ-ಜಯಂತಿಯ ಬಗ್ಗೆ 300 ಪದಗಳಿಗೆ ಮೀರದಂತೆ ಬರಹಗಳನ್ನು ಟೈಪ್ ಮಾಡಿ ಅಥವಾ ಬರೆದು -***

kannadasubeditor@gmail.com

***ಇಲ್ಲಿಗೆ ಕಳುಹಿಸಿ. ಪ್ರಕಟಿತ ಲೇಖನಗಳಿಗೆ ಸ್ವಾಮಿ ಪ್ರಸಾದ ರೂಪವಾದ ಗೌರವ ಧನ ನೀಡಲಾಗುವುದು.***

*- ಪ್ರಧಾನ ಸಂಪಾದಕರು*



# ದಾಸ ಸಾಹಿತ್ಯದಲ್ಲಿ ಭಕ್ತಿ ಝೇಂಕಾರ

– ಡಾ॥ ಮಧುಸೂಧನಾಚಾರ್ಯ ಜೋಷಿ

'ದಾಸನಾಗು ಆ ಮೂಲಕ ವಿಶೇಷನಾಗು' ಎಂದು ಹೇಳುತ್ತಾ, ದಾಸನಾಗುವ ಮೂಲಕ ಭವಪಾಶವನ್ನು ನೀಗಿಸಿಕೊಳ್ಳಲು ಹೇಳುವ ದಾಸ ಸಾಹಿತ್ಯ, ದೇವ ಭಾಷೆಯಾದ ಸಂಸ್ಕೃತ ವಾಙ್ಮಯದ ಸೃಷ್ಟಿಗಳಾದ ೪ ವೇದ , ೬ಶಾಸ್ತ್ರ, ೧೮ ಪುರಾಣಗಳಲ್ಲಿನ ಜಟಿಲವಾದ ವಿಷಯಗಳನ್ನು ಸುಲಿದ ಬಾಳೆಯ ಹಣ್ಣಿನಂತಹ, ಕರುನಾಡ ನುಡಿಯಾದ ಕನ್ನಡದಲ್ಲಿ ನಿರೂಪಿಸುವ ಮೂಲಕ ಸಾಮಾನ್ಯರಿಗೆ ಮಹೋಪಕಾರವನ್ನೇ ಮಾಡಿದೆ.ಆ ಮೂಲಕ 'ಪಂಚಮವೇದ' ಎಂದೇ ಹೆಸರಾಗಿದೆ.

'ದಾಸ' ಶಬ್ದವೇ 'ಈಶ' ನ ಅಸ್ತಿತ್ವವನ್ನು ಪ್ರತಿಪಾದಿಸುತ್ತಾ ದ್ವೈತ ಅಥವಾ ಭೇದ ನಿಸರ್ಗ ಸಹಜ ಎನ್ನುತ್ತದೆ. ತಾರತಮ್ಯ ಭೇದ, ಈಶ ಸ್ವತಂತ್ರ ಜೀವ ಅತಂತ್ರ, ಪಂಚಭೇದ, ಹರಿಸರ್ವೋತ್ತಮ - ವಾಯು ಜೀವೋತ್ತಮದಂಥ ಅಂಶಗಳನ್ನು ಪ್ರತಿಪಾದಿಸುತ್ತದೆ. ದಾಸ ಸಾಹಿತ್ಯದಲ್ಲಿ, ಏನುಂಟು? ಏನಿಲ್ಲ? ಸೃಷ್ಟಿಯ ಉಗಮ ವಿಕಾಸ, ಭ್ರೂಣದ ಉಗಮ ವಿಕಾಸ, ಗ್ರಹಗಳ ಚಲನೆ, ಲೋಕಗಳ ವರ್ಣನೆ, ಜೀವ ವಿಕಾಸ, ನೀತಿ ಬೋಧೆ, ಸಾಮಾಜಿಕ ಪ್ರಜ್ಞೆ ಆಧ್ಯಾತ್ಮ ನಿರೂಪಣೆ, ಮೋಕ್ಷದ ಸುಳುಹು, ಸಾರ್ಥಕತೆಯ ದಾರಿ ಹೀಗೆ ಎಲ್ಲವೂ ಇಲ್ಲುಂಟು. ಕನ್ನಡ ಸಾಹಿತ್ಯವು ವಿಶ್ವ ಸಾಹಿತ್ಯಕ್ಕೆ ಕೊಟ್ಟ ಶ್ರೇಷ್ಠ ಕಾಣಿಕೆಯಾಗಿದೆ ಈ ದಾಸಸಾಹಿತ್ಯ. ಅಚಲಾನಂದರಂಥ ಅಪರೋಕ್ಷ ಸಜ್ಞಾನಿಗಳಿಂದ ರಚನೆಗೊಳ್ಳಲಾರಂಭಿಸಿದ ಈ ಸಾಹಿತ್ಯ, ೯ನೇ ಶತಮಾನದಿಂದ ೨೧ ನೇ ಶತಮಾನದವರೆಗೂ ಸಾಗಿ ಬಂದಿದೆ. ಜನಪರವಾಗಿ,ಆ ಕಾರಣಕ್ಕೆ ಜನಪ್ರಿಯವಾಗಿ ಜನಭಾಷೆಯನ್ನೆ ಮಾಧ್ಯಮವಾಗಿಸಿಕೊಂಡು ಮುನ್ನಡೆದುಕೊಂಡು ಬಂದಿದೆ.

ಈ ದಾಸ ಸಾಹಿತ್ಯ ತಾಪತ್ರಯಗಳಾದ ಆದಿ ಭೌತಿಕ, ಆದಿ ದೈವಿಕ ಹಾಗೂ ಆಧ್ಯಾತ್ಮಿಕ ಅಂಶಗಳ ಬಗ್ಗೆ ಅನೇಕ ವಿಚಾರಗಳನ್ನು ನಿರೂಪಿಸುತ್ತ, ಪರಿಹಾರದ ಸುಳುಹುಗಳನ್ನು ನೀಡುತ್ತದೆ. ಶ್ರೀ ಆಧ್ಯಾತ್ಮಿಕ ವಿಚಾರಗಳ ಝೇಂಕಾರ ದಾಸ ಸಾಹಿತ್ಯದ ಹಲವು ವೈಶಿಷ್ಟ್ಯಗಳಲ್ಲಿ ಒಂದಾಗಿದೆ. ಮೌಢ್ಯತೆಯ ನಿವಾರಣೆಗಾಗಿ ವೈಚಾರಿಕವಾಗಿ ಹಂಬಲಿಸುತ್ತ, ಸಾಮಾಜಿಕ ವಿಡಂಬನೆಯನ್ನು ಒಳಗೊಳ್ಳುತ್ತ ಆಧ್ಯಾತ್ಮಿಕ ಅಂಶಗಳನ್ನು ಅನಾವರಣಗೊಳಿಸುತ್ತ ಹೊರಡುವ ದಾಸ ಸಾಹಿತ್ಯ ಆ ಕಾರಣಕ್ಕೆ ಸರ್ವಕಾಲಿಕವಾಗಿ ಸ್ವಾಗತಾರ್ಹವಾಗುತ್ತದೆ.

"ಏಸು ಕಾಯಂಗಳ ಕಳೆದು ಎಂಬತ್ನಾಲ್ಕು ಲಕ್ಷ ಜೀವರಾಶಿಯನ್ನು ದಾಟಿ ಬಂದ ಈ ಶರೀರ ತಾನಲ್ಲ ತನ್ನದಲ್ಲ ಆಸೆ ಸ್ಥಿರವಲ್ಲ ಮುಂದೆ ಬಾಹೋದಲ್ಲ" ಎಂಬ ಸಾಲುಗಳು ಎಚ್ಚರಿಕೆಯನ್ನು ನೀಡುತ್ತವೆ. ಸೃಷ್ಟಿಗೊಂಡ ೮೪ ಲಕ್ಷ ಜೀವ ಪ್ರಭೇದಗಳಲ್ಲಿ ಆಲೋಚಿಸುವ- ಅಭಿವ್ಯಕ್ತಿಸುವ - ಅರ್ಥೈಸುವ ಶಕ್ತಿ ಹೊಂದಿ ವಿಕಾಸಗೊಳ್ಳುತ್ತ ಬಂದ ಏಕೈಕ ಜೀವಿ ಮನುಷ್ಯ, ಮನ್+ಜ ಮನುಜ ಆಗಿದೆ ಮನ್ ಅಂದರೆ ಮನಸ್ಸು ಆಲೋಚನೆಯ ನೆಲೆ. ಈ ಆಲೋಚನೆಯೇ ಆದಿ ಮಾನವನನ್ನು ಆಧುನಿಕನಾಗಿಸಿದೆ. ಹಲವು ಜನ್ಮಗಳ ಪುಣ್ಯ ಫಲದಿಂದ ಬಂದೊದಗಿದ ಮನುಷ್ಯ ಜನ್ಮವನ್ನು ಅದರ ಮಹತ್ವವನ್ನು ಅರ್ಥೈಸಿಕೊಂಡು ಆತ್ಮದ ಅತ್ಯಂತ ಪರಿಷ್ಕೃತ ಹಾಗೂ ಸುದೈವಿಹಂತವಾದ ಮನುಷ್ಯ ಜನ್ಮವನ್ನು ಸಮಾಜ ಮುಖಿಯಾಗಿ ಸಾರ್ಥಕಪಡಿಸಿಕೊಳ್ಳಬೇಕು. ಆ ಮೂಲಕ ಅಮರರಾಗಬೇಕು. ಏಕೆಂದರೆ ಮುಂದೆ ಬಾಹೋದಲ್ಲ. ಹರಿಯ ಕೀರ್ತಿಯ ವರ್ಣನೆಗಳಾಗಿ ಕೀರ್ತನೆಗಳು, ಮೋಕ್ಷದ ಸುಳುಹಿನ ಆದಿಗಳಾಗಿ ಸುಳಾದಿಗಳು, ಆ ಲೋಕದ ಸುಖದ ಅಭಿವ್ಯಕ್ತಿಗಳಾಗಿ ಉಗಾ ಭೋಗಗಳು ದಾಸಸಾಹಿತ್ಯದ ರೂಪಗಳಾಗಿವೆ. ಆಚಲಾನಂದರು, ನರಹರಿ ತೀರ್ಥರ ಕಾಲಕ್ಕೆ ಉಗಾಭೋಗಗಳು ಹೆಚ್ಚಾಗಿ ರಚನೆಗೊಂಡರೆ ಶ್ರೀಪಾದರಾಜರ ಕಾಲದಿಂದ ಕೀರ್ತನೆಗಳು ವಿಜಯ ದಾಸರ ಯುಗದಿಂದ ಸುಳಾದಿಗಳು ಉಜ್ವಲವಾಗಿ ರಚನೆಗೊಂಡವು. ಆಧುನಿಕ ಯುಗದಲ್ಲಿ ಹರಿದಾಸರು ಜನಪರ ಚಿಂತನೆಗಳನ್ನು ಜನ ಭಾಷೆಯಲ್ಲೇ ನಿರೂಪಿಸಲು ಜನಪದ ರಂಗ ಭೂಮಿಯ ಪ್ರದರ್ಶನ ಕಲೆಯಾದ ಬಯಲಾಟಗಳನ್ನು ರಚಿಸಿದ್ದು ವಿಶೇಷ.

ಇಂಥ ವೈಶಿಷ್ಟ್ಯ ಗಳ ಆಗರವಾದ ದಾಸ ಸಾಹಿತ್ಯ ೪ ಲಕ್ಷ ೭೫ ಸಾವಿರ ಕೀರ್ತನೆಗಳನ್ನು ರಚಿಸಿದ ಕರ್ನಾಟಕ ಸಂಗೀತ ಪಿತಾಮಹರಾದ ಪುರಂದರ ದಾಸರಂಥವರನ್ನು ಕೊಡುಗೆಯಾಗಿ ನೀಡಿದೆ. ಶ್ರೀಪಾದರಾಜರಂಥ ಸವ್ಯಸಾಚಿಗಳು (ಸಂಸ್ಕೃತ ಕನ್ನಡಗಳೆರಡರಲ್ಲೂ ಪಾರಂಗತರು), ವ್ಯಾಸರಾಜರಂಥ ಶಿಷ್ಯ ವತ್ಸಲ ಗುರುಗಳನ್ನು,ಕನಕದಾಸರಂಥ ಭಕ್ತಕವಿಗಳನ್ನು, ಜಗನ್ನಾಥ ದಾಸರಂಥ ಮಹಾಕವಿಗಳನ್ನು ಗೋನವಾರದ ರಾಮದಾಸರಂಥ ಹಿಂದುಯೇತರ ಹರಿದಾಸರನ್ನು ನೀಡಿದೆ.ಇಂದಿನ ಎಲ್ಲಾ ಸಮಸ್ಯೆಗಳಿಗೆ ಪರಿಹಾರಗಳ ಕೋಶವಾಗಿರುವ ದಾಸಸಾಹಿತ್ಯದ ಅಧ್ಯಯನ ಅನುಷ್ಠಾನಗಳು ಇಂದಿನ ಅಗತ್ಯಗಳಲ್ಲಿ ಒಂದಾಗಿದೆ.ಆ ಕಾಲಕ್ಕೆ ರಾಜರಾಗಿ ಮೆರೆದವರು. ಕೋಟ್ಯಾಧಿಪತಿಗಳಾಗಿ, ನವಕೋಟಿ ನಾರಾಯಣರೆಂದೆ ಖ್ಯಾತರಾದವರು ಎಲ್ಲವನ್ನು ತೊರೆದು ತಾಳ ತಂಬೂರಿ, ಗೋಪಾಲ ಬುಟ್ಟಿಗಳನ್ನು

ಹಿಡಿದು ತೊರೆದು ಜೀವಿಸ ಬಹುದೆ ಹರಿ ನಿನ್ನ ಚರಣಗಳ'' ಎಂದು ಹೊರಟವರು ಹರಿ ದಾಸರಾಗಿದ್ದಾರೆ.

'ಮಾನವ ಜನ್ಮ ದೊಡ್ಡದು ಇದ ಹಾನಿ ಮಾಡಲು ಬೇಡಿ ಹುಚ್ಚಪ್ಪಗಳಿರಾ' ಎಂಬ ಸಾಲು ಇದನ್ನೇ ಹೇಳುತ್ತದೆ. ಆತ್ಮೋನ್ನತಿಗಾಗಿ ಪ್ರಯತ್ನಿಸದೆ, ಸ್ವರೂಪೋದ್ಧಾರಕರನ್ನು ಹುಡುಕಿಕೊಂಡು ಹೋಗದೆ ವ್ಯರ್ಥ ಬದುಕನ್ನು ಸಾಗಿಸಿದವರ ಬಗ್ಗೆ ದಾಸವಾಣಿ, 'ಆದದ್ದಾಯಿತು ಇನ್ನಾದರೂ ಒಳ್ಳೇ ಹಾದಿ ಹಿಡಿಯೋ ಪ್ರಾಣಿ' ಎಂದು ಸಲಹೆ ನೀಡುತ್ತದೆ.

"ಅಲ್ಲದೆ ನಮ್ಮ ಮನೆ ಇಲ್ಲಿಗೆ ಬಂದೆ ಸುಮ್ಮನೆ'' ಎನ್ನುವ ಈ ಸಾಹಿತ್ಯ ಬಂದೆ ಸುಮ್ಮನೆ, ಆದರೆ ಹೋಗಬೇಡ ಸುಮ್ಮನೆ ಎನ್ನುತ್ತದೆ. ಆಳುತ್ತ ಬಂದ ನಾವು ನಗುತ್ತ ತೆರಳುವಂತೆ ಜೀವನ ಸಾಗಿಸಬೇಕು. ನಾವು ಬಟ್ಟೆಗಳನ್ನು ಬದಲಿಸುವಂತೆ ಆತ್ಮ ದೇಹಗಳನ್ನು ಬದಲಿಸುತ್ತದೆ. ಆದೇ ಜನ್ಮ ಸಾವು - ಪುನರ್ಜನ್ಮಗಳ ಸರಣಿ ಎನ್ನುವರು ಆಧ್ಯಾತ್ಮವಾದಿಗಳು. ಹುಟ್ಟು ಆಕಸ್ಮಿಕ ಘಟನೆಯಾದರೆ ಸಾವು ಅನಿವಾರ್ಯ ಹಂತ. ನಡುವಿನ ಬದುಕು ಮಾತ್ರ ಶಾಶ್ವತವಾಗಿ ಉಳಿಯುತ್ತದೆ ಸಕಾರಾತ್ಮಕ ಶಾಶ್ವತೆಯನ್ನು ಗಳಿಸುವುದೇ ಬದುಕಿನ ಗುರಿಯಾಗಬೇಕು. ಎರಡು ವಿಧ ಸುಖ ವೀವ. ಹರಿಚರಿತಾಮೃತವ ಸವಿದು ದಿನಗಳನ್ನು ಕಳೆವ ಜನರೆ ಸುಜನರು'ಎನ್ನುವಲ್ಲಿ ಹರಿಚರಿತೆಯ ಅಧ್ಯಯನ ಇಹ-ಪರ ಎರಡರಲ್ಲೂ ಸುಖವನ್ನೊದಗಿಸುವ ಸೌಭಾಗ್ಯವನ್ನು ಕಾಣುತ್ತೇವೆ.

'ಬಂಧನವ ಪರಿಹರಿಸೊ ಭವ ವಿದೂರ' ಕೃತಿ ಜನ್ಮಗಳೆಂಬ ಬಂಧನವನ್ನು ಪರಿಹರಿಸಲು ಜನ್ಮಗಳಗೊಡವೆಯೇ ಇಲ್ಲದ ಪರಮಾತ್ಮನನ್ನು ಪ್ರಾರ್ಥಿಸುತ್ತದೆ. ಸಂಕಟಗಳ ಸಾಗರವಾದ ಸಂಸಾರವನ್ನು ಈಸಬೇಕು ಇದ್ದು ಜೈಸಬೇಕು' ಎನ್ನುವ ದಾಸವಾಣಿ ಹರಿಯ ದಯೆ ಇಲ್ಲದಿರೆ ಆತ್ಮಕ್ಕೆ ಭವಗಳಿಂದ ಮುಕ್ತಿ ಇಲ್ಲ ಎನ್ನುತ್ತದೆ.

ಭಕ್ತಿ ಮತ್ತು ವಿರಕ್ತಿಗಳೇ ಭವಬಂಧ ಮೋಚಕಗಳಾಗಿ ಆತ್ಮಕ್ಕೆ ಸುಮಾರ್ಗವನ್ನು ಸೂಚಿಸುತ್ತವೆ. ಭಯ-ದುಃಖ, ಸಂಕಟಗಳನ್ನು ಕೊಡುವಾತನೆ ಪರಿಹರಿಸುವವನು ಕೂಡಾ. ಆತನಲ್ಲಿ ನಿಷ್ಠೆ ಮುಖ್ಯ ಆತ್ಮದ ಈ ಪಯಣದಲ್ಲಿ ಆ ಚೈತನ್ಯ ಶಕ್ತಿ ಉನ್ನತಿಯೆಡೆಗೆ ಸಾಗಬೇಕೇ ಹೊರತು ಅವನತಿ ಎಡೆಗಲ್ಲ. ಹಾಗಾಗ ಬೇಕಾದರೆ ಸಂಗವಾಗಲಿ ಸಾಧು ಸಂಗವಾಗಲಿ, ಅಂಥ ಸಂಗದಿಂದ ಲಿಂಗ ದೇಹ ಭಂಗವಾಗಲಿ.

ಹರಿದಾಸರ ದಾಸ್ಯವೆ ದೋಷ ರಾಶಿಗಳನ್ನು ಅಳಿಸಿ ಹಾಕುತ್ತದೆ. ಆತ್ಮ-ಪರಮಾತ್ಮಗಳ ಸಂಬಂಧ ತಾಯಿ ಮಗುವಿನಂತಹದ್ದು ತಾಯಿಯನ್ನು ಅಲಕ್ಷಿಸಿದ ಮಗುವಿಗೆ ಗತಿ ಇಲ್ಲ. ಭವಿಷ್ಯವಿಲ್ಲ. ಮುಕ್ತಿಯಂತೂ ಇಲ್ಲವೇ ಇಲ್ಲ, ಎನ್ನುತ್ತದೆ ದಾಸಸಾಹಿತ್ಯ ಉದಯರಾಗದಿಂದ ಲಾಲಿ ಹಾಡುಗಳವರೆಗೆ ದಾಸ ಸಾಹಿತ್ಯದಲ್ಲಿ ವೈವಿಧ್ಯತೆ ಸಮಗ್ರತೆ ನವವಿಧ ಭಕ್ತಿಗಳು ಮೋಕ್ಷದ ಅಪೇಕ್ಷೆ, ಅದಕ್ಕಾಗಿ ಅನುಸರಿಸಬೇಕಾದ ದಾರಿಗಳು ಎಲ್ಲವನ್ನೂ ಒಳಗೊಳ್ಳುತ್ತದೆ ದಾಸಸಾಹಿತ್ಯ ಆತ್ಮ ಪರಮಾತ್ಮ ಒಂದೇ ಎಂಬ ಅದ್ವೈತ ,ಆತ್ಮ ಪರಮಾತ್ಮನಲ್ಲಿ ಅದ್ವೈತ ವಿಶಿಷ್ಟವಾಗಿದೆ ಎಂಬ ವಿಶಿಷ್ಟಾದ್ವೈತ ಮುಂತಾದ ೨೧ ಮತಗಳನ್ನು ಖಂಡಿಸಿ ಮೋದತೀರ್ಥರು ಸ್ಥಾಪಿಸಿದ ದ್ವೈತ ಸಿದ್ಧಾಂತವನ್ನು ಪ್ರತಿಪಾದಿಸುವ ದಾಸಸಾಹಿತ್ಯ ಆತ್ಮದ ಅಸ್ವಾತಂತ್ರ್ಯವನ್ನು ಒತ್ತಿ ಹೇಳುತ್ತದೆ. ಸಕಲ ಗ್ರಹಬಲ ನೀನೇ ಸರಸಿಜಾಕ್ಷ ಎನ್ನುತ್ತ ನಂದೇನೆದೋ ಹರಿ ನಿಂದೆ ಇದೆಲ್ಲವು ಎಂದು ಒಪ್ಪಿಕೊಳ್ಳುತ್ತದೆ ಆತ್ಮ ಪಾತ್ರಧಾರಿಯಾದರೆ ಪರಮಾತ್ಮ ಸೂತ್ರಧಾರಿಯಾಗಿದ್ದಾನೆ.

ಶ್ರೀಹರಿ ಬ್ರಹ್ಮ - ವಿಷ್ಣು ಮಹೇಶ್ವರರ ಮೂಲಕ ಸೃಷ್ಟಿ-ಸ್ಥಿತಿಲಯಗಳನ್ನು ಮಾಡಿಸುತ್ತ ತನ್ನ ಲೀಲೆಯನ್ನು ತೋರುತ್ತಾನೆ. ಹರಿ ಒಲಿದರೆ ಪೀತಾಂಬರ, ಹರಿ ಮುನಿದರೆ ಕೌಪೀನವೂ ಸಿಗದು ಎನ್ನುವ ದಾಸರು ಈ ಆತ್ಮ ನಿನ್ನಾಧೀನ, ನಿನ್ನ ಒಲುಮೆಯಿಂದ ನಿಖಿಳಜನರು ಬಂದು ಮನ್ನಿಸುವರೋ ಮಹರಾಯಾ ಎನ್ನುತ್ತಾರೆ. ಏರು ಇಳುವುಗಳೇ ಬದುಕಿನ ಮೊತ್ತ. ಆದರೆ ಬದುಕು ಏರು ಮುಖವಾಗಿ ಸಾಗಬೇಕೆಂದರೆ ಆತ್ಮಕ್ಕೆ ಪರಮಾತ್ಮ ಅನುಗ್ರಹಬೇಕು. ಕಾಲಾಂತರ್ಗತ ಕಾಲ ನಿಯಾಮಕ ಕಾಲಾತೀತ ತ್ರಿಕಾಲಜ್ಞನಾಗಿದ್ದಾನೆ ಆ ಪರಮಾತ್ಮ ಅಂದರೆ ಕಾಲದೊಳಗೆ ಇದ್ದು, ಕಾಲವನ್ನು ನಿಯಂತ್ರಿಸುತ್ತ ಕಾಲವನ್ನು ಮೀರಿ, ತ್ರಿಕಾಲಗಳನ್ನು ಬಲ್ಲವನಾಗಿದ್ದಾರೆ. ಇಂಥ ಎಲ್ಲ ವಿಶಿಷ್ಟತೆಗಳನ್ನು ಒಳಗೊಂಡ ಪರಮಾತ್ಮನ ಅಧೀನವಾಗಿ ಆತ್ಮದ ಯಾತ್ರೆ ಸಾಗಬೇಕು. ;

ಮತ್ಸ್ಯ,ಕೂರ್ಮ, ವರಾಹ - ನಾರಸಿಂಹ, ವಾಮನಾದಿ ದಶಾವತಾರಗಳೇ ಜೀವರಾಶಿಗಳ ವಿಕಾಸದ ಹಂತಗಳಾಗಿವೆ. ಜಲಚರ - ಭೂ ಚರಗಳ ನಂತರ ಅರ್ಧ ಪ್ರಾಣಿ - ಅರ್ಧ ಮನುಷ್ಯ ನಂತಹ ಗಿಡ್ಡ ಹಾರುವ, ಕ್ಷತ್ರಿಯ, ಹೀಗೆ ಮನುಕುಲದ ಉನ್ನತಿಯ ಹಂತಗಳು ವಿವಿಧ ನೆಲೆಗಳಲ್ಲಿ ಕಂಡು ಬರುತ್ತವೆ.

ಪರಾನ್ನ - ಪರಧನ - ಪರಸತಿ ಮೋಹಗಳಲ್ಲಿಯೇ ಮುಳುಗಿ ಆತ್ಮ ಒದ್ದಾಡುವಾಗ ಪರಿಹಾರಕ ಶಕ್ತಿಯಾಗಿ ಬರುವಂಥ ಪರಮಾತ್ಮನನ್ನು ಕಾಣಲು ಆತ್ಮಕ್ಕೆ ಈ ದೃಷ್ಟಿ ನೋಟ, ಕಣ್ಣುಗಳು ಸಾಲವು ಅದಕೆಂದೆ ದಾಸರು ಹೊಸ ಗಣ್ಣು ಎನಗೆ ಹಚ್ಚಲಿ ಬೇಕು ಜಗದಂಬಾ ವಸುದೇವ ಸುತನ ಕಾಂಬುದಕೆ' ಎಂದು ಜಗದ ತಾಯಿಯಾದ ಸಿರಿದೇವಿಯನ್ನು ಪ್ರಾರ್ಥಿಸುತ್ತಾರೆ.

'ಬಾರೋ ಶ್ರೀ ನರಹರಿಯೆ ಭವ ಬಂಧಮೋಚಕ' ಕೃತಿಯಲ್ಲಿ ಆತ್ಮನಿವೇದನೆ ಇದೆ . ಗಾಡಾಂಧಕಾರದೊಳು ಸ್ವೇಚ್ಛೆಯಲಿ ನಾ ಕಿಡಿಗೇಡಿ ಜೀವನನಾಗಲು ಏಸು ಜನ್ಮಗಳ್ಹೋದವೋ ಈ ವಿಧದಿ ಮುಂದಿನ್ನೇಸು ಜನ್ಮಗಳುಳಿದವೋ ಎನ್ನುತ್ತಾರೆ. ಇಲ್ಲಿ ಅಂಧಕಾರ ಎಂದರೆ ಕತ್ತಲು ಇದು ಅಜ್ಞಾನ ಮೌಢ್ಯ ಬಡತನ. ತಾಮಸ ಪ್ರವೃತ್ತಿಗಳ ಸಂಕೇತವಾಗಿದೆ. ತಮಸೋಮಾ ಜ್ಯೋತಿರ್ಗಮಯ ಎಂದರೆ ಇಂಥ ಎಲ್ಲಾ ಕತ್ತಲೆಗಳಿಂದ ಕಳಚಿಕೊಂಡು ಬೆಳಕಿನೆಡೆಗೆ ಬದುಕು ಸಾಗಬೇಕು. ಆತ್ಮದ ನಿರಂತರ ಪಯಣವಾದ ಪುನರ್ಜನ್ಮಗಳ ಸರಣಿಯಲ್ಲಿ ಆತ್ಮನಿತ್ಯ ಪರಿಷ್ಕಾರಗೊಳ್ಳಬೇಕು. ಸಂಚಿತ ಪಾಪಗಳಿಂದ ಮುಕ್ತನಾಗಿ ಪುಣ್ಯಶಾಲಿಯಾಗುತ್ತ ಹೋದಂತೆ ಮೋಕ್ಷ ಪ್ರಾಪ್ತಿ ಸಾಧ್ಯವಾಗುತ್ತದೆ."ಜಗಜನ್ನಾದಿಕರ್ತ ಗೋವಿಂದ ಉದರದಿ ಲೋಕ ಲಘುವಾಗಿ "ಧರಿಸಿದ ಮುಕುಂದ'' ಎಂಬ ಸಾಲು ಜಗತ್ತು ಜನ್ಮ ಮುಂತಾದವುಗಳ ಕರ್ತನಾದ ಹರಿ 14 ಲೋಕಗಳನ್ನು ಅತ್ಯಂತ ಹಗುರವಾಗಿ ಉದರದಲ್ಲಿ ಧರಿಸಿದ್ದನ್ನು ಮಾರ್ಮಿಕವಾಗಿ ವರ್ಣಿಸುತ್ತದೆ.

# ಭಕ್ತಿ ಮಾರ್ಗದ ಪ್ರತಿಪಾದಕರು ಶ್ರೀ ಗೋಪಾಲದಾಸರು

- ಡಾ॥ ಲಕ್ಷ್ಮೀಕಾಂತ ವಿ. ಮೊಹರೀರ
9060931359

ವೈದಿಕ ಪರಂಪರೆಯ ಹಿನ್ನೆಲೆಯಲ್ಲಿ ಬೆಳೆದು ಬಂದ ದಾಸ ಸಾಹಿತ್ಯವು ತನ್ನ ದೇದಿಪ್ಯ ಪ್ರಭೆಯಿಂದಾಗಿ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಅಪಾರವಾದ ಕೊಡುಗೆಯನ್ನು ನೀಡಿದೆ ಹಾಗೂ ನೀಡುತ್ತಲಿದೆ.ಕರ್ನಾಟಕದ ಹರಿದಾಸರ ಭಕ್ತಿ ಪಂಥಕ್ಕೆ ಆನಂದತೀರ್ಥರ ದ್ವೈತ ಸಿದ್ಧಾಂತವೇ ಬೆನ್ನೆಲುಬು.

ಹೀಗಾಗಿ ಮಧ್ವ ಸಿದ್ಧಾಂತದ ತತ್ವಗಳ ಬೆಳಕಿನಲ್ಲಿ ತಮ್ಮ ಮೌಲಿಕ ಜೀವನದ ಸಾರ್ಥಕತೆಯೊಂದಿಗೆ ಆತ್ಮಸಾಕ್ಷಾತ್ಕಾರ ಮಾಡಿಕೊಂಡಿರುವರು ಹರಿದಾಸರು.ಹರಿದಾಸ ಸಾಹಿತ್ಯ ವೃಕ್ಷವು ಮೂಲತಃ ಶ್ರೀಮಧ್ವಾಚಾರ್ಯರಿಂದ ಬಿತ್ತಲ್ಪಟ್ಟು ನರಹರಿ ತೀರ್ಥರಲ್ಲಿ ರೂಪತಾಳಿ ಶ್ರೀಪಾದರಾಜರಲ್ಲಿ ಪಲ್ಲವಿಸಿ ಶ್ರೀ ಪುರಂದರದಾಸರು,ಶ್ರೀ ಕನಕದಾಸರು, ಶ್ರೀವಾದಿರಾಜರು ಹಾಗೂ ಶ್ರೀ ವೈಕುಂಠದಾಸರಿಂದ ಕುಸುಮಿಸಿ, ಮಹಿಪತಿ ದಾಸರು, ವಿಜಯದಾಸರು, ಗೋಪಾಲದಾಸರು, ಜಗನ್ನಾಥ ದಾಸರು, ಮೋಹನದಾಸರು, ಮೊದಲು ಕಲ್ಲು ಶೇಷದಾಸರು, ಹೆಳವನಕಟ್ಟೆ ಗಿರಿಯಮ್ಮ ಮುಂತಾದ ಹರಿದಾಸರಿಂದ ಫಲ ಭರಿತವಾಗಿ ಬೆಳೆದು ಬಂದಿದೆ.

ಕೀರ್ತನೆ ದೇವರ ನಾಮ, ಉಗಾಭೋಗ, ಸುಳಾದಿ, ದಂಡಕ, ವೃತ್ತನಾಮ ಹೀಗೆ ಅನೇಕ ರೀತಿಗಳಲ್ಲಿ ಹರಿದಾಸರ ರಚನೆಗಳು ಭಕ್ತಾದಿಗಳಿಗೆ ಮಾರ್ಗದರ್ಶನ ಮಾಡಿದವು. ಹಾಗಾಗಿ ದಾಸಸಾಹಿತ್ಯವು ಮನಸ್ಸನ್ನು ಹಾಗೆಯೇ ಹೃದಯ ವನ್ನು ಅರಳಿಸುವ ಸಾಹಿತ್ಯವಾಯಿತು.

ದಾಸ ಚತುಷ್ಟಯರಲ್ಲಿ ಒಬ್ಬರಾಗಿರುವ ಅದರಂತೆಯೆ "ಭಕ್ತಿಯಲ್ಲಿ ಭಾಗಣ್ಣ" ನೆಂಬ ಖ್ಯಾತಿಗೆ ಪಾತ್ರರಾದ ಗೋಪಾಲ ದಾಸರು ಅಪರೋಕ್ಷಜ್ಞಾನಿಗಳು.ಅವಿನಾಶಿ ಆರ್ಷ ಪರಂ ಪರೆಯ ಮೂರ್ತರೂಪವಾಗಿ ಹರಿದಾಸ ಸಾಹಿತ್ಯ ನಂದಾ ದೀಪದ ಸಮುಜ್ವಲನೆಗೆ ದೀಕ್ಷಾಬದ್ಧರಾಗಿ, ಶ್ರೀವಿಜಯದಾಸರ ಅಪಾರವಾದ ಕರುಣೆಯನ್ನು ಪಡೆದು ಅಂತಹ ದಾಸವರೇಣ್ಯ ರಿಂದ ಅಂಕಿತ ಪಡೆದು ಭಕ್ತಿ ತತ್ವವನ್ನು ಜಗತ್ತಿಗೆ ನೀಡಿ ಪರಮ ಉಪಕಾರವನ್ನೀಡಿದ ಶ್ರೀಗೋಪಾಲದಾಸರ ಜೀವನ - ಸಾಧನೆ ಗಳತ್ತ ಮುಖಮಾಡೋಣ.



ಗೋಪಾಲದಾಸರು, ಕನಕನಿಕ್ಷೇಪದ ಸ್ವರ್ಣಭೂಮಿ ಎನಿಸಿದ ರಾಯಚೂರು ಪ್ರದೇಶದಲ್ಲಿರುವ ದೇವದುರ್ಗ ತಾಲೂಕಿಗೆ ಸೇರಿದ ಮೊಸರುಕಲ್ಲೆಂಬ ಪುಣ್ಯ ಭೂಮಿಯಲ್ಲಿ ಜನಿಸಿದರು. ಹರಿತಸಗೋತ್ರದಲ್ಲಿ ಜನಿಸಿದ ಇವರ ತಾತನ ಹೆಸರು ಮುದ್ಗಲ್ಲಪ್ಪ, ತಂದೆಯ ಹೆಸರು ಮುರಾರಿರಾಯ, ತಾಯಿಯ ಹೆಸರು ವೆಂಕಮ್ಮ ಈ ಪುಣ್ಯ ದಂಪತಿಗಳ ಉದರ ದಲ್ಲಿ ಸುಮಾರು ಶಾಲಿವಾಹನ ಶಕ 1640 ಅಂದರೆ, ಕ್ರಿಸ್ತಾಬ್ಧಿ 1717 ವರ್ಷದಲ್ಲಿ ಜನಿಸಿದರು ಎಂಬುವುದಾಗಿ ಅವರ ಚರಿತ್ರೆಯಲ್ಲಿ ಕಾಣಸಿಗುವ ವಿಚಾರ.

ಮುರಾರಿರಾಯ ಹಾಗೂ ವೆಂಕಮ್ಮ ದಂಪತಿಗಳಿಗೆ ನಾಲ್ಕು ಗಂಡು ಮಕ್ಕಳಾಗಿ ಸಂಸಾರ ದೊಡ್ಡದಾಯಿತು. ಕಡೆಯ ಮಗ ರಂಗಪ್ಪನು ತೊಟ್ಟಿಲ ಕೂಸಾಗಿದ್ದಾಗ ಮುರಾರಿರಾಯನು ದೈವಾಧೀನನಾದನು. ಅವನ ಅಣ್ಣ ತಮ್ಮಂದಿರು ಮುರಾರಿ ರಾಯನ ಹೆಂಡತಿ ಮಕ್ಕಳ ಯೋಗಕ್ಷೇಮವನ್ನು ನೋಡಿಕೊಳ್ಳ ಲಿಲ್ಲ. ಸಾಲುದುದಕ್ಕೆ ಮನೆಯಿಂದ ದ್ವೇಷ ಮಾಡಿ ವೆಂಕಮ್ಮ ಹಾಗೂ ಅವಳ ಮಕ್ಕಳನ್ನು ಓಡಿಸಿದರು.

ದಿಕ್ಕುಗಾಣದಾದ ಆ ಮಹಿಳೆಯು ತನ್ನ ಮಕ್ಕಳನ್ನು ಕರೆದು ಕೊಂಡು ಗದ್ವಾಲ ಸಂಸ್ಥಾನಕ್ಕೆ ಸೇರಿದ ಸಂಕಾಪೂರಕ್ಕೆ ಬಂದು ಸೇರಿದಳು. ಆ ಊರ ಹೊರಗಿರುವ ಪ್ರಾಣದೇವರ ಗುಡಿಯಲ್ಲಿ ಆಶ್ರಯಪಡೆದಳು. ಸದಾ ಮೌನಧ್ಯಾನಗಳಲ್ಲಿದ್ದ ಭಾಗಣ್ಣ ಉಪನಯನದ ನಂತರ ಗಾಯತ್ರಿ ಮಂತ್ರದ ಜಪತಪಾನುಷ್ಠಾನದಲ್ಲಿ ನಿರತನಾಗಿ, ಸತತವಾಗಿ ಎರಡು ವರ್ಷಗಳ ಕಾಲ ನಿರಂತರವಾಗಿ ಸಾಧನೆ ಮಾಡಿದನು. ಗಾಯತ್ರಿ ಪುನಶ್ಚರಣದಿಂದ ಸಂಪ್ರೀತಳಾದ ವೇದಮಾತೆ ಗಾಯತ್ರಿ ದೇವಿಯು ಭಾಗಣ್ಣನ ನಾಲಿಗೆ ಮೇಲೆ, ಬೀಜಾಕ್ಷರಗಳನ್ನು ಮಾಡಿಸಿದಳು. ಗಾಯತ್ರಿ ಸಿದ್ಧಿಯಿಂದಾಗಿ, ಅವರ ಭಾಗ್ಯದ ಬಾಗಿಲು ತೆರೆಯಿತು. "ಭವಿಷ್ಯ ಹೇಳತೊಡಗಿದ್ದರ" ದೆಸೆಯಿಂದಾಗಿ ಅವರೆಡೆ ಜನಸಾಮಾನ್ಯರು ತಂಡೋಪತಂಡವಾಗಿ ಬರತೊಡಗಿದರು. ಮಂತ್ರಕೌಶಲ್ಯವು ಸಿದ್ಧಿಯಾಗಿ ಮಾರ್ಪಟ್ಟಿದ್ದರಿಂದ ಹಲವಾರು ಜನರು ಇವರಿಂದ ಅನುಗ್ರಹಿತರಾದರು. ಇವರ ಜನಪ್ರಿಯತೆ ಗದ್ವಾಲ ಸಂಸ್ಥಾನದ ದೊರೆಯಾದ ರಾಜಾರಾಮನವರೆಗೆ ಹೋಯಿತು. ಆತನು ಭವಿಷ್ಯ ಕೇಳಲು ಆಗಮಿಸಿ, ಇವರ ವಾಕ್ ಶಕ್ತಿಗೆ ಮರುಳಾಗಿ ಭೂಮಿ ಕಾಣಿಕೆ, ಕುದುರೆಗಳನ್ನು ಭಕ್ತಿ ಪೂರ್ವಕವಾಗಿ ಸಮರ್ಪಿಸಿದನು.

ತ್ರಿಕಾಲಜ್ಞಾನಿಯಾದ ಭಾಗಣ್ಣನು ಆದಿವಾನಿಯ ದಿವಾನರಾಗಿದ್ದ ತಿಮ್ಮಣ್ಣನವರ ಬಳಿ ಕೆಲ ಕಾಲ ಅತಿಥಿಯಾಗಿದ್ದನು. ಸರಸಕವಿತ್ವ,ಕಲಾಕೌಶಲ್ಯತೆಯನ್ನು ಮೈಗೂಡಿಸಿಕೊಂಡಿದ್ದರಿಂದ 'ವೆಂಕಟಕೃಷ್ಣ' ಅಂಕಿತದಿಂದ ಕೆಲವು ಪದ್ಯಗಳನ್ನು ರಚಿಸಿ ಹಾಡುತ್ತಿದ್ದನು. ಆ ಅಮೃತ ಸಂದರ್ಭದಲ್ಲಿಯೇ ಅಪರೋಕ್ಷ ಜ್ಞಾನಿಗಳಾದ ಶ್ರೀವಿಜಯದಾಸರ ದರುಶನ ಭಾಗ್ಯ ಒಲಿಯಿತು. ತತ್ಫಲವಾಗಿ 'ಗೋಪಾಲವಿಠ್ಠಲ'ಎಂಬ ಅಂಕಿತವನ್ನು ವಿಜಯದಾಸರಿಂದ ಪಡೆದು ಅನುಗ್ರಹಿತರಾದರು. ಅಂಕಿತವನ್ನು ಪಡೆದ ಮೇಲೆ ನೂರಾರು ಕೀರ್ತನೆಗಳನ್ನು, ಸುಳಾದಿಗಳನ್ನು ರಚಿಸಿ, ದಾಸಸಾಹಿತ್ಯ ಕ್ಷೇತ್ರಕ್ಕೆ ಅನುಪಮ ಕೊಡುಗೆಗಳನ್ನು ನೀಡಿದರು.ಗೋಪಾಲದಾಸರು ದಾಸ ಸಾಹಿತ್ಯಕ್ಕೆ ನೀಡಿದ ಕೊಡುಗೆಯತ್ತ ಗಮನಹರಿಸೋಣ, ಹರಿದಾಸ ಸೇವೆಯನ್ನು ಸ್ವೀಕರಿಸಿದ ಗೋಪಾಲದಾಸರು, ತೀರ್ಥ ಕ್ಷೇತ್ರಗಳಿಗೆ ಸಂದರ್ಶಿಸಿ. ಪುಣ್ಯವನ್ನು ಸಂಪಾದಿಸಿ, ಆ ತೀರ್ಥ ಕ್ಷೇತ್ರಗಳ ವಿವರವನ್ನೆಲ್ಲ ತಮ್ಮ ಕೃತಿಗಳಲ್ಲಿ ಪಡಿ ಮೂಡಿಸಿದ್ದಾರೆ.

ಶ್ರೀಗೋಪಾಲದಾಸರು ಕಂಚಿ, ಶ್ರೀಮುಷ್ಣ, ಕಾಳಹಸ್ತಿ, ಅಹೋಬಲ ನರಸಿಂಹ, ಕೊಲ್ಹಾಪೂರ, ತಿರುಪತಿ, ಉಡುಪಿ, ಹಂಪಿ, ಮಂತ್ರಾಲಯ ಮುಂತಾದ ತೀರ್ಥಕ್ಷೇತ್ರಗಳಿಗೆ ಸಂದರ್ಶನ ನೀಡಿದರು.ಈ ಭೂಮಿಕೆಯಲ್ಲಿ ಅವರು ತೀರ್ಥಕ್ಷೇತ್ರಗಳ ಕುರಿತಾಗಿ ರಚಿಸಿದ ಕೆಲವು ಕೃತಿಗಳನ್ನು ಈ ಮುಂದೆ ಚಿತ್ರಿಸಲಾಗಿದೆ.

ಉಡುಪಿ ಕೃಷ್ಣನನ್ನು ಕಂಡು -

"ಎತ್ತಣ ಶಬ್ದವಿದು ಎನ್ನ ಕರ್ಣಕಿದು ಯವ್ವ
ಎತ್ತಣ ಸ್ಪರ್ಶವಿದು ಎನ್ನ ಅಂಗಕಿದು ಯವ್ವ
.........................................
ಸತ್ಯ ಸಾಕಾರ ಸರ್ವಜ್ಞಗೋಪಾಲ ವಿಠ್ಠಲ"

ಮತ್ತೆ ಈ ಉಡುಪಿ ಕೃಷ್ಣ ಸುತ್ತುಸುಳಾದಿ ಸಲಹೆನ್ನ, ಈ ಸುಳಾದಿಯಲ್ಲಿ ದಾಸರ ಕವಿ ಮನವು ಶ್ರೀಕೃಷ್ಣನ ವರ್ಣನೆಗಾಗಿ ಚಿತ್ರಿಸಿರುವಂತೆ ತೋಲಿಬರುತ್ತದೆ.

ಹಂಪೆಯಲ್ಲಿರುವ ಯಂತ್ರೋದ್ಧಾರಕನನ್ನು ಕುರಿತು
ಇದು ಏನೋ ಚರಿತ ಯಂತ್ರೋದ್ದಾರ ॥ಪ॥
ಇದು ಏನೋ ಚರಿತ ಶ್ರೀಪದುಮನಾಭದೂತ
ಸದಾ ಕಾಲದಲ್ಲಿ ಸರ್ವರ ಹೃದಯಾಂತರ್ಗತ

ಎಂಬುದಾಗಿ ಮನದುಂಬಿ ವರ್ಣಿಸಿದ ಕೃತಿಯಾಗಿದೆ.

ದಾಸರು ತಿರುಪತಿಗೆ ಹೋದ ಸಂದರ್ಭದಲ್ಲಿ ರಥಾರೂಢನಾದ ಶ್ರೀನಿವಾಸನನ್ನು ನೋಡಿ :

'ನಡೆದು ಬಾರಯ್ಯ ನೀನು ವೆಂಕಟರಾಯ
ನಡೆದು ಬಾರಯ್ಯ ಭವಕಡಲಿಗೆ ಕುಂಭಸಂಭವ
....................................
ಶರಣಾಗತ ರಕ್ಷಾಮಣಿ ಎನ್ನುವ
ಬಿರುದು ಬೇಕಾದರೆ ಸರಸರ ಬಾರಯ್ಯ
ಗರುಡಗಮನ ಗೋಪಾಲವಿಠ್ಠಲರೇಯ
ಕರುವಿನ ಮೊರೆಗಾವು ನೆರೆದಂತೆ ಪೊರೆಯಲು ॥;

ಶರಣಾಗತರಕ್ಷಕ ಎಂಬ ಬಿರುದು ನಿನಗೆ ಬೇಕಾದರೆ, ಕರೆದ ತಕ್ಷಣ ಸರ್ರನೆ ಬಾ ಎಂಬುದಾಗಿ ಆಗ್ರಹ ಮಾಡುವ ದಾಸರ ಮನೋಇಂಗಿತ ಈ ಕೀರ್ತನೆಯಲ್ಲಿ ಪಲ್ಲವಿಸಿದೆ.

ಗೋಪಾಲದಾಸರು ಬಹುದಿನಗಳಿಂದ ಪಂಢರಾಪೂರಕ್ಕೆ ಕಾರಣಾಂತರಗಳಿಂದ ಯಾತ್ರೆ ಮಾಡಿರಲಿಲ್ಲ. ದಾಸರು ಒಮ್ಮೆ ಉತ್ತನೂರಿನ ಹೊರವಲಯದಲ್ಲಿ ಓಡಾಡುತ್ತಿರುವ ಸಂದರ್ಭದಲ್ಲಿ 'ಕುದುರೆಯ ಮೇಲೆ ಬಂದ ಸವಾರನೊಬ್ಬ 'ಆಲೇನಾಹಿ'ಎಂದು ಕೇಳಿ ವೇಗವಾಗಿ ಹೊರಟು ಹೋಗುತ್ತಾನೆ.

ಕ್ಷಣಕಾಲ ದಿಗ್ಭ್ರಾಂತರಾದ ದಾಸರು "ಮರಾಠಿ ಭಾಷೆಯಲ್ಲಿ ಕೇಳಿದ ಸವಾರ ಬೇರೆಯಾರು ಆಗಿರದೆ ಪಂಢರಾಪುರದ ಪಾಂಡುರಂಗನೇ ಆಗಿರುವನು ಎಂಬ ಸತ್ಯ ಅರಿತು ಆಲೇನಾಹಿ

ಅಂದರೆ ಬಂದೇ ಇಲ್ಲವೆಂಬ ಧ್ವನಿತಾರ್ಥವನ್ನು ಮನಗಂಡು ಪಂಡರಾಪುರದ ಪಾಂಡುರಂಗನೇ ಸ್ವತಃ ಆಗಮಿಸಿ, ನನ್ನನ್ನು ಎಚ್ಚರಿಸಿದ ಎಂಬ ಮಾತನ್ನು ಮುಂದಿನ ಸುಳಾದಿಯಲ್ಲಿ :

'ನೀಲಗುದುರೆಯನೇರಿ ಶಾಲು ಸೊಂಟಕೆ ಸುತ್ತಿ
ಕಾಲು ಕುಪ್ಪಸತೊಟ್ಟು ಮೇಲೆ ಮೋಹನ್ನ ಹಾಕಿ

...............................................................

ಪಾಲಾಯನದಿ ಅಶ್ವವೇರಿ ಓಲ್ಯಾಡಿಸುತ್ತ
'ಆಲೆನಾಹಿ' ಎಂದು ಕೇಳಿದವನಾರವ್ವ

...............................................

ಮಾಲೆ ಪರಿಮಳ ಗಂಧ ಕುರಹದಿಂದ ಶೀಲ
ಮೂರುತಿ ಪಂಢರಿರಾಯ ಗೋಪಾಲವಿಠ್ಠಲ
ಓಲ್ಯಾಡಿ ಕುದುರೆ ಓಲ್ಯಾಡಿಸುತ್ತ ಪೋದನಲ್ಲೇ

ಎಂಬುವುದಾಗಿ ಸ್ತುತಿಸುತ್ತ ನಿನ್ನ ಕ್ಷೇತ್ರಕ್ಕೆ ಬರಲಿಲ್ಲವಾದರೂ ಭಕ್ತ ವತ್ಸಲನಾದ ನೀನೆ ನಾನಿರುವ ಸ್ಥಳಕ್ಕೆ ಬಂದು ದರ್ಶನ ಕೊಟ್ಟಿರುವೆ ಎಂಬ ಭಾವವನ್ನು ಬಿಂಬಿಸಿದ್ದಾರೆ. ಮುಂದಿನ ದಿನಗಳಲ್ಲಿ ಪಂಡರಿನಾಥನ ದರ್ಶನ ಮಾಡಿದರಂತೆ.

ಹೀಗೆ ಅನೇಕ ತೀರ್ಥಕ್ಷೇತ್ರಗಳ ದರ್ಶನ ಮಾಡಿ, ಪುಣ್ಯವನ್ನು ಗಳಿಸಿದ ದಾಸರು ಪರಮಾತ್ಮನನ್ನು ತಮ್ಮ ಕೃತಿಗಳಲ್ಲಿ ಅನನ್ಯವಾಗಿ ಸ್ತುತಿಸಿದ್ದಾರೆ.

ತಾವು ಹರಿಯ ದಾಸರಾಗಿ,ತಮ್ಮ ಮೂರು ಜನ ತಮ್ಮಂದಿರನ್ನು ಕ್ರಮವಾಗಿ,ಸೀನಪ್ಪದಾಸರಿಗೆ, ವರದ ಗೋಪಾಲವಿಠ್ಠಲವೆಂದು, ದಾಸಪ್ಪದಾಸರಿಗೆ ಗುರುಗೋಪಾಲ ವಿಠಲರೆಂದು, ಮತ್ತು ರಂಗಪ್ಪದಾಸರಿಗೆ, ತಂದೆ ಗೋಪಾಲ ವಿಠ್ಠಲರೆಂದು ಅಂಕಿತವನ್ನು ಪ್ರದಾನ ಮಾಡಿ, ಕೀರ್ತನೆಗಳನ್ನು ರಚಿಸಿ, ಭಗವಂತನ ಗುಣ - ಗಾನ ಮಾಡಲು ಪ್ರೇರೇಪಿಸಿದಂತಹ ಪೂತಾತ್ಮರು.

'ಹರಿಕಥಾಮೃತಸಾರ' ವೆಂಬ ಅಮೂಲ್ಯ ರತ್ನವನ್ನು ಜಗದ ಜನರಿಗೆ, ನೀಡಿ, ಮಹದುಪಕಾರ ನೀಡಿದ ಶ್ರೀಜಗನ್ನಾಥ ದಾಸರಿಗೆ,ತಮ್ಮ ಗುರುಗಳಾದ ಶ್ರೀವಿಜಯದಾಸರ ಆದೇಶದಂತೆ ತಮ್ಮ ಆಯುಷ್ಯದಲ್ಲಿನ ನಲವತ್ತು ವರ್ಷಗಳನ್ನು ದಾನ ಮಾಡಿದ ಮಹಾನ್ ಯೋಗಿಗಳೇ ಶ್ರೀಗೋಪಾಲದಾಸರು.

ದಾಸಚತುಷ್ಟಯರಲ್ಲಿ ಒಬ್ಬರಾಗಿ ಭಕ್ತಿಯಲ್ಲಿ ಭಾಗಣ್ಣವೆಂಬ ಖ್ಯಾತಿಗೆ ಪಾತ್ರರಾಗಿ, ಗಣೇಶಾಂಶರೆಂಬ ನಂಬಿಕೆಗೆ ಅರ್ಹರಾಗಿ, ಗುರುಭಕ್ತಿಗೆ ಬಾಗುವಂತೆ, ತಮ್ಮ ಆಯುಷ್ಯದ ನಲವತ್ತು ವರ್ಷಗಳನ್ನು ಶ್ರೀ ಜಗನ್ನಾಥದಾಸರಿಗೆ, ದಾನಮಾಡಿ, ತ್ಯಾಗಮೂರ್ತಿಗಳಾಗಿ ಕಲಿಯುಗ ಕರ್ಣರೆನಿಸಿ ಮಹಾತ್ಮರಾದ ಇವರು ವಿಜಯದಾಸರ ಕಂಕಣಾಕಾರ ಸುಳಾದಿಯನ್ನು ಚಕ್ರಾಬ್ಜ ಮಂಡಲದಲ್ಲಿ, ಬೀಜಾಕ್ಷರಗಳನ್ನು ಯಥಾ ಸ್ಥಾನಗಳಲ್ಲಿ ಮಾಡಿಸಿ ಉಪಾಸನೆಗೆ ಮಾಡಿಕೊಟ್ಟ ಅಪರೂಪದ ಹರಿದಾಸ ಕಲಾವಿದರು ಶ್ರೀಗೋಪಾಲದಾಸರು, ಹಾಗಾಗಿ 'ಸಾಹಿತ್ಯ ಸಾಮ್ರಾಟರಾಗಿದ್ದೂ. ಸಾಧನ ಸಿದ್ಧಿಪುರುಷರಾಗಿ ಅಸದೃಶವಾದ ತ್ಯಾಗಮೂರ್ತಿಗಳಾಗಿ, ಜಗನ್ನಾಥದಾಸರಂತಹ ಶಿಷ್ಯರನ್ನೂ,ವಿಜಯದಾಸರಂತಹ ಗುರುಗಳನ್ನು ಪಡೆದುಕೊಂಡ ಮಹಾಭಾಗ್ಯನಿಧಿಗಳು ಶ್ರೀಗೋಪಾಲದಾಸರೆಂಬುವುದಾಗಿ, ವಿದ್ಯಾವಾಚಸ್ಪತಿ ಡಾ. ಅರಳುಮಲ್ಲಿಗೆ ಪಾರ್ಥಸಾರಥಿಯವರು ಉಲ್ಲೇಖಿಸಿದ್ದಾರೆ.

ವಿಜಯದಾಸರ ಉದ್ದೇಶವನ್ನು ಮುಂದಿನ ಜನಾಂಗಕ್ಕೆ ತಲುಪಿಸಲು ಸೇತುವೆಯಂತೆ ನಿಂತು, ಮಧ್ವತತ್ವಗಳನ್ನು ಸರಳ ಭಾಷೆಯಲ್ಲಿ ಜನಮಾನಸಕ್ಕೆ ನೀಡಿ ದಾಸಸಾಹಿತ್ಯ ಕ್ಷೇತ್ರವನ್ನು ಶ್ರೀಮಂತಗೊಳಿಸಿದ ಶ್ರೇಯಸ್ಸು ಶ್ರೀ ಗೋಪಾಲದಾಸರಿಗೆ ಸಲ್ಲುತ್ತದೆ. ಹಾಗೆಯೇ ಭಗವಂತನ ಸ್ಮರಣೆಯಿಂದ ಜ್ಞಾನವಂತರ ಸಂಗದಿಂದ, ನಾನಾವಿಧ ಭಕ್ತಿಯಿಂದ ಮತ್ತೆ ರಾಜಮಾರ್ಗವನ್ನು ಪ್ರತಿಯೊಬ್ಬರು ಸಾಧಿಸಬಹುದು ಎಂದು ತಮ್ಮ ಕೀರ್ತನೆಗಳಲ್ಲಿ ಸಮರ್ಥವಾಗಿ ಪ್ರತಿಪಾದಿಸಿದರು. ಇಂತಹ ಭಕ್ತಿ ಮಾರ್ಗ ಪ್ರವರ್ತಕರನ್ನು ಇಂದು ನಾವು ಮೆಲುಕು ಹಾಕಿ, ಅವರ ಆದರ್ಶಗಳನ್ನು ಪಾಲಿಸುತ್ತ ಸನ್ಮಾರ್ಗಿಗಳಾಗಿ ಮುಂದೆ ಸಾಗೋಣ.

## ಸ್ವಾಮಿಯ ಆಲಯದಲ್ಲಿ ಸೆಲ್‌ಫೋನ್ ನಿಷೇಧ

ತಿರುಮಲೆ ಸ್ವಾಮಿಯವರ ಆಲಯದಲ್ಲಿ ಸೆಲ್ ಫೋನ್,ಕೆಮರಾ, ಇತರ ಎಲೆಕ್ಟ್ರಾನಿಕ್ ವಸ್ತುಗಳನ್ನು ನಿಷೇಧಿಸಲಾಗಿದೆ. ನಿಷೇಧಿಸಿದ ವಸ್ತುಗಳೊಂದಿಗೆ ಭಕ್ತರು ಕಂಡು ಬಂದರೆ ಅಂತಹ ವ್ಯಕ್ತಿಯರನ್ನು ಆಲಯದೊಳಗೆ ಅನುಮತಿಸಲಾಗುವುದಿಲ್ಲ. ಆದ್ದರಿಂದ ಭಕ್ತರು ತಿ.ತಿ.ದೇ.ಯೊಂದಿಗೆ ಸಹಕರಿಸಬೇಕಾಗಿ ಕೋರಲಾಗಿದೆ.

– ಕಾರ್ಯನಿರ್ವಹಣಾಧಿಕಾರಿ



# ದಾಳಿಂಬೆಯಲ್ಲಿ ಬೆರೆತಿರುವ ಔಷಧೀಯ ಗುಣಗಳು


-ಮೂಲ ಡಾ॥ ಸಿ. ಮಧುಸೂದನ ಶರ್ಮ

ಅನುವಾದ : ಶ್ರೀಮತಿ


ಆಹಾರ ಪದಾರ್ಥವಾಗಿ ವಿವಿಧ ಪೋಷಕಾಂಶಗಳ ಆವಾಸ ಸ್ಥಾನವಾದ ದಾಳಿಂಬೆ ಹಣ್ಣನ್ನು ನಾವು ಸೇವಿಸುತ್ತಿರುತ್ತೇವೆ. ಆದರೆ ಭಗವಂತನು ದಾಳಿಂಬೆ ಹಣ್ಣಿನಲ್ಲೊಂದೇ ಅಲ್ಲದೇ ಅದರ ಬೀಜಗಳು,ಎಲೆಗಳು,ಹೂವು,ಬೇರು ಹೀಗೆ ವಿವಿಧ ಭಾಗಗಳಲ್ಲಿ ಅತ್ಯಂತ ಶಕ್ತಿಯುತವಾದ ಔಷಧ ಪದಾರ್ಥಗಳನ್ನು ಒಟ್ಟುಗೂಡಿಸಿ ನಮ್ಮಗಳ ಆರೋಗ್ಯ ಸಂರಕ್ಷಣೆಗಾಗಿ ಪ್ರಸಾದಿಸಿದ ವಿಷಯವು ಬಹು ಜನಕ್ಕೆ ತಿಳಿದೇ ಇಲ್ಲ.

ಸಂಸ್ಕೃತದಲ್ಲಿ 'ದಾಡಿಮ' ಎಂದೂ ಆಂಗ್ಲದಲ್ಲಿ ಪೋಮೋಗ್ರಾನೆಟ್ ಎಂದೂ ವ್ಯವಹರಿಸಲ್ಪಡುವ ಪುನಿಕೇಸಿ ಎಂಬ ವೃಕ್ಷ ಸಂಕುಲಕ್ಕೆ ಸೇರಿದ ಈ ದಾಳಿಂಬೆಯ ಶಾಸ್ತ್ರೀಯ ನಾಮಧೇಯ "ಪ್ಯೂನಿಕಾ ಗ್ರಾನೇಟಂ".

ದಾಳಿಂಬೆಯ ಔಷಧೀಯ ಗುಣಗಳನ್ನು ಪ್ರಸ್ತುತ ತಿಳಿಯೋಣ.

**ಹುಳಿತೇಗು - ಹೊಟ್ಟೆ ನೋವಿನಂತಹ ಸಮಸ್ಯೆಗಳಿಗೆ:**

ಒಣಗಿಸಿದ ದಾಳಿಂಬೆ ಬೀಜದ ಪುಡಿ 100ಗ್ರಾಂ. ಪುದೀನ ಎಲೆಗಳನ್ನು ಒಣಗಿಸಿ ಮಾಡಿದ ಪುಡಿ 25ಗ್ರಾಂ, ಸೈಂಧವ ಲವಣ ಪುಡಿ 25 ಗ್ರಾಂ ಕಲಿಸಿಟ್ಟುಕೊಂಡು ದಿನಕ್ಕೆರಡು ಬಾರಿ ಬಾರಿಯೊಂದಕ್ಕೆ 100 ಮಿ.ಲೀ. ನೀರಿನಲ್ಲಿ 2 ಗ್ರಾಂ ಪುಡಿಯನ್ನು ಕಲಿಸಿ ಸೇವಿಸುತ್ತಿರಬೇಕು. ಇದರಿಂದ ಹೊಟ್ಟೆಯುಬ್ಬರ, ಅಜೀರ್ಣ, ವಾಂತಿಗಳು ಸಹಾ ವಾಸಿಯಾಗುತ್ತವೆ.

**ಕಿಡ್ನಿ ಕಲ್ಲುಗಳಿಗೆ :**

25 ಗ್ರಾಂ ಹುರುಳಿಯನ್ನು 250 ಮಿ.ಲೀ.ನೀರಿನಲ್ಲಿ ನೆನೆಸಿ ನಂತರ ಸಣ್ಣನುರಿಯಲ್ಲಿ 125 ಮಿ.ಲಿ.ನೀರು ಉಳಿಯುವಂತೆ ಕುದಿಸಿ, ಕೆಳಗಿಳಿಸಿ, ಬಿಸಿಯಾರಿದ ನಂತರ ಸೋಸಿ ಎರಡು ಬಾರಿ ಬಾರಿಯೊಂದಕ್ಕೆ ಸ್ವಲ್ಪ ಕಷಾಯದಲ್ಲಿ 2-3 ಟೀ ಸ್ಪೂನ್ ದಾಳಿಂಬೆ ಬೀಜದ ಪೇಸ್ಟನ್ನು ಕಲಿಸಿ ಸೇವಿಸುವುದರಿಂದ ಮೂತ್ರಕೋಶದಲ್ಲಿನ ಕಲ್ಲುಗಳು ಅತಿ ಶೀರ್ಷದಲ್ಲಿ ಕರಗಿ ಹೋಗುತ್ತದೆ.

**ವಿವಿಧ ಬಗೆಯ ನವೆಗಳಿಗೆ:**

ದಾಳಿಂಬೆ ಪೇಸ್ಟ್ ಚೂರ್ಣ 75 ಗ್ರಾಂ ಕಲ್ಲು ಸಕ್ಕರೆ 75 ಗ್ರಾಂ, ಜಾಜಿಕಾಯಿಪುಡಿ 2.5 ಗ್ರಾಂ, ಏಲಕ್ಕಿ ಪುಡಿ 2.5 ಗ್ರಾಂ, ಕಲಿಸಿಟ್ಟುಕೊಂಡು ಪ್ರತಿದಿನವೂ 2 ಇಲ್ಲವೇ 3 ಬಾರಿ ಬಾರಿ ಯೊಂದಕ್ಕೆ 2-3 ಗ್ರಾಂ ಪುಡಿಯನ್ನು 100 ಮಿ.ಲೀ. ಹುಳಿ ಮಜ್ಜಿಗೆಯಲ್ಲಿ ಕಲಿಸಿ,ಸೇವಿಸುತ್ತಿದ್ದರೆ ರಕ್ತ, ಉರಿ, ತುರಿಕೆ, ನವೆ, ಗಾಯದಂಥಹ ದೋಷಗಳಿಗೆ ಪರಿಹಾರ ಉಂಟಾಗುವುದು.

**ಕಷಾಯ - ಉಪಯೋಗ :**

200 ಮಿ.ಲೀ. ನೀರಿನಲ್ಲಿ 5 ಗ್ರಾಂ ದಾಳಿಂಬೆ ಸಿಪ್ಪೆಯ ಚೂರ್ಣ ಕಲಿಸಿ 100 ಮಿ.ಲಿ. ನೀರು ಉಳಿಯುವಂತೆ ಮರಳಿಸಿ, ಕೆಳಗಿಳಿಸಿ,ಬಿಸಿಯಾರಿದ ಬಳಿಕ ಶೋಧಿಸಬೇಕು. ಇದೇ ದಾಳಿಂಬೆ ಕಷಾಯ.

**ಬಾಯಿ,ಮೂಗು,ಮಲದ್ವಾರದಿಂದ ರಕ್ತಸ್ರಾವವಾಗುತ್ತಿದ್ದರೆ :**

ಮೇಲೆ ಹೇಳಿದ ಕಷಾಯವನ್ನು ಎರಡು ಬಾರಿ ತಯಾರಿಸಿಕೊಂಡು ಕುಡಿಯಬೇಕು.

**ಬಿಳಿಸೆರಗು :**

ದಿನವೂ ಒಂದು ಬಾರಿ ಈ ಕಷಾಯದಲ್ಲಿ 2 ಗ್ರಾಂ ಸ್ವಚ್ಛವಾದ ಅರಿಶಿನಪುಡಿ ಕಲಿಸಿ ಜನನೇಂದ್ರಿಯಗಳನ್ನು ಶುಭ್ರಗೊಳಿಸಬೇಕು.

**ಗುದದ್ವಾರ ಜಾರುವುದು ಮಲದ್ವಾರದಲ್ಲಿ ಉರಿ :**

ಒಂದು ಟೀಸ್ಪೂನ್ ಮೆಂತ್ಯೆಯನ್ನು 50 ಮಿ.ಲಿ. ನೀರಿನಲ್ಲಿ ಒಂದು ಗಂಟೆ ನೆನೆಯಿಸಿ ನೀರನ್ನು ಸೋಸಿ, ಮೇಲೆ ಹೇಳಿದ ಕಷಾಯದಲ್ಲಿ ಕಲಿಸಿ ದಿನವೂ ಒಂದು ಬಾರಿ ಸೇವಿಸಬೇಕು.

**ದಂತಧಾವನ ಚೂರ್ಣ:**

100 ಗ್ರಾಂ ದಾಳಿಂಬೆ ಸಿಪ್ಪೆಯ ಚೂರ್ಣದಲ್ಲಿ 20, ಗ್ರಾಂ ನಷ್ಟು ಕರಿಮೆಣಸಿನ ಪುಡಿ, 10ಗ್ರಾಂ ನಷ್ಟು ಉಪ್ಪು, ಕಲಿಸಿಟ್ಟುಕೊಂಡು ದಂತಧಾವನ ಚೂರ್ಣದಂತೆ ಉಪಯೋಗಿಸುತ್ತಿದ್ದರೆ ವಸಡಿನ ಬಾವು, ಸೆಳೆತ, ನವೆ, ನೋವು, ವಸುಡಿನಿಂದ ರಕ್ತ ಸುರಿಯುವುದು ಕಡಿಮೆಯಾಗಿ ದಂತಗಳು ದೃಢವಾಗಿರುತ್ತವೆ.

**ಕಾಲಿನ ಹುಣ್ಣು , ಗಾಯಗಳು :**

ದಾಳಿಂಬೆ ಎಲೆಗಳನ್ನು ಜಜ್ಜಿ ಪೇಸ್ಟಿನಂತೆ ಹಚ್ಚುತ್ತಿರಬೇಕು. ಈ ವಿಧವಾಗಿ ಮಾಡುವುದರಿಂದ ಅಧಿಕವಾಗಿ ಬೆವರು

ವುದು,ದದ್ದುಗಳು,ಉರಿತ, ಕೆರೆತ ಮುಂತಾದ ಚರ್ಮರೋಗಗಳು ತಗ್ಗುತ್ತವೆ.

**ಕೆಮ್ಮ ಶಮನಗೊಳ್ಳಲು :**

50 ಗ್ರಾಂ ದಾಳಿಂಬೆ ಸಿಪ್ಪೆ ಪುಡಿಯಲ್ಲಿ 25 ಗ್ರಾಂ ಉಪ್ಪು ಕಲಸಿಟ್ಟುಕೊಂಡು ಮುಂಜಾನೆ - ಸಂಜೆ ಬಾರಿ ಯೊಂದಕ್ಕೆ 1-2 ಗ್ರಾಂ ಪುಡಿಯನ್ನು ತಕ್ಕಷ್ಟು ಜೇನಿನೊಂದಿಗೆ ಕಲಸಿ ಸೇವಿಸುತ್ತಿರಬೇಕು.

**ಹೊಟ್ಟೆ - ಕಿಬ್ಬೊಟ್ಟೆಯ ಜಂತುಗಳಿಗೆ :**

ಮುಂಜಾನೆ 200 ಮಿ.ಲೀ. ಹಾಲಿನಲ್ಲಿ 5-10 ಗ್ರಾಂ ದಾಳಿಂಬೆ ಎಲೆಗಳನ್ನು ಕುಟ್ಟಿ ಹಾಕಿ ಹಾಲನ್ನು ಸ್ವಲ್ಪ ಹೊತ್ತು ಮರಳಿಸಿ ಕೆಳಗಿಳಿಸಿ,ಬಿಸಿಯಾರಿದ ನಂತರ ಶೋಧಿಸಿ ಮೊದಲು 100 ಮಿ.ಲೀ. ಕುಡಿದು ಒಂದು ತಾಸಿನ ನಂತರ ಉಳಿದ 100 ಗ್ರಾಂ ಹಾಲನ್ನು ಕುಡಿಯಬೇಕು. ನಂತರ 2 ಗಂಟೆಗಳ ಬಳಿಕ 20-30 ಮಿ.ಲೀ.ರಷ್ಟು ಹರಳೆಣ್ಣೆಯನ್ನು ಸೇವಿಸಬೇಕು.ಹೀಗೆ ಮಾಡುವುದರಿಂದ ಹೊಟ್ಟೆ ಕರುಳಿನ ಜಂತುಗಳನ್ನು ನಾಶಗೊಳಿಸಬಹುದು.

**ಜ್ಞಾಪಕಶಕ್ತಿ ವೃದ್ಧಿಸಲು:**

ದಿನವೂ 100 ಮಿ.ಲೀ. ದಾಳಿಂಬೆ ತೊಳೆಯ ರಸವನ್ನು ಒಂದೆರಡು ಟೀ ಸ್ಪೂನ್ ಜೇನು ಕಲಸಿ ಸೇವಿಸಬೇಕು.

**ಮುಖ ಕಾಂತಿಯುತವಾಗಲು:**

ದಿನವೂ ಒಂದು ಸಾರಿ 3 ಟೀಸ್ಪೂನ್ ದಾಳಿಂಬೆ ಪೇಸ್ಟ್ ನಲ್ಲಿ ಅರ್ಧ ಟೀ ಸ್ಪೂನ್ ನಿಂಬೆರಸ, ಕಲಸಿ ಮುಖದ ಮೇಲೆ ಲೇಪಿಸುವುದರಿಂದ ಕಲಿಮಚ್ಚೆಗಳು,ಜಿಡ್ಡುಗಳು ತೊಲಗಿ ಮುಖವೂ ಅಂದವಾಗಿಯೂ ತೇಜೋವಂತವಾಗಿಯೂ, ಸೌಂದರ್ಯಯುತವಾಗಿಯೂ ಉಂಟಾಗುತ್ತದೆ.

ದಾಡಿಮಾಷ್ಟಕ ಚೂರ್ಣ,ದಾಡಿಮಾವ ಲೇಹ್ಯ ದಾಡಿ ಮಾದಿ ಘೃತಂ,ಭಾಸ್ಕರ ಲವಣ ಮೊದಲಾದುವು ಪ್ರಖ್ಯಾತ ಆಯು ರ್ವೇದ ಔಷಧಗಳ ತಯಾರಿಕೆಗಳಲ್ಲಿ ದಾಳಿಂಬೆಯನ್ನು ಒಂದು ಪದಾರ್ಥವನ್ನಾಗಿ ಬಳಸಲಾಗುತ್ತದೆ.




## ಪುಸ್ತಕಾವಲೋಕನ

**ಲೇಖಕರು ಮತ್ತು ಪ್ರಕಾಶಕರು**

**ಶ್ರೀ .ಕೆ. ಹನುಮಂತರಾವ್**

**99851 86534**

**ಪುಟ : 48**

**ಬೆಲೆ : ಉಚಿತ**

**ಮುದ್ರಣ 2020**

"ಶ್ರೀ ಮದಣುಮಧ್ವವಿಜಯ" ಕವಿಕುಲತಿಲಕ ಶ್ರೀ ನಾರಾಯಣ ಪಂಡಿತಾಚಾರ್ಯರು ಶ್ರೀ ರಾಘವೇಂದ್ರ ಗುರುಸಾರ್ವಭೌಮರಿಂದ ರಚಿತ ಗೂಢಭಾವ ಪ್ರಕಾಶಿಕಾ ವ್ಯಾಖ್ಯಾನದ ಆಧಾರದಿಂದ ರಚಿಸಿದ ಪ್ರಮೇಯ ನವಮಾಲಿಕೆ. ಇದನ್ನು ಶ್ರೀ. ಕೆ. ಹನುಮಂತರಾವ್ ಅವರು ಅನುವಾದಿಸಿ ಸುಲಭ ಕನ್ನಡದಲ್ಲಿ ಎಲ್ಲರಿಗೂ ಪರಿಚಯಿಸಿದ್ದಾರೆ. ಇದು ೩೨ ಲಕ್ಷಣಗಳುಳ್ಳ ಶ್ರೀಮದಾಚಾರ್ಯರ ಚರಿತ್ರೆಯು ೩೨ ಶ್ಲೋಕಗಳಲ್ಲಿ ವರ್ಣಿತ ಆಗಿರುವಂಥದ್ದು.

ಮೊದಲ ಶ್ಲೋಕದ ಅರ್ಥವನ್ನು ಅನುವಾದಿಸಿದ್ದು ಹೀಗೆ - "ಸಂಸಾರವೆಂಬ ಕಾಡಿನಲ್ಲಿ ದುಃಖಾನಲ ತಪ್ತರಾದ ಸಜ್ಜನರಿಗೆ ಸಂತಾಪವನ್ನು ಪರಿಹರಿಸಲು ಪರಮಾತ್ಮನ ಪ್ರಸಾದವಾಗಬೇಕು. ಅದಕ್ಕೆ ಅವನಲ್ಲಿ ಭಕ್ತಿ ಮಾಡಬೇಕು ಅವನಲ್ಲಿ ಭಕ್ತಿ ಹುಟ್ಟಬೇಕಾದರೆ ಗುರುವಿನಲ್ಲಿ ಭಕ್ತಿ ಮಾಡಬೇಕು. ಅದ್ದರಿಂದ ಶ್ರೀ ನಾರಾಯಣ ಪಂಡಿತಾಚಾರ್ಯರು ಗುರುಗಳಾದ ವಾಯುದೇವರಲ್ಲಿ ಭಕ್ತಿ ಹುಟ್ಟಲು ಅದರ ಅವತಾರ ಲೀಲೆಗಳನ್ನು ತಿಳಿಸುತ್ತ ಮೊದಲಿಗೆ ಹನುಮದವತಾರ ಲೀಲೆಗಳನ್ನು ವರ್ಣಿ ಸುತ್ತಾರೆ.

ಪ್ರತಿಯೊಂದು ಮೂಲಶ್ಲೋಕದೊಡನೆ ಪದಛೇದ, ಅನ್ವಯ, ಅರ್ಥ, ವಿಶೇಷಗಳು ವಿವರಿ ಸಲ್ಪಟ್ಟು ಶ್ಲೋಕವನ್ನು ಸುಲಭದಲ್ಲಿ ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಶ್ರೀಮದ್ ಅಚಾರ್ಯರ ಜನನದ ಹಿನ್ನೆಲೆಯಲ್ಲಿ ಹಲವಾರು ಪೌರಾಣಿಕ ಕಥೆಗಳನ್ನು ಸೂಕ್ಷವಾಗಿ ತಿಳಿಸಿದ್ದಾರೆ. ರಾಮಾ ಯಣದ ಭೀಮ ಜನನದ ಕಥೆ ಮೊದಲು ಬರುತ್ತದೆ. ಮೊದಲು ಹನುಮ ತದನಂತರ ಭೀಮ ಕೊನೆಗೆ ವಾಸುದೇವರ (ಶ್ರೀಮದಾಚಾರ್ಯ) ವಾಯುದೇವರ ಲೀಲಾವತಾರವೆಂದು ತೋರಿಸುತ್ತದೆ.

ಶ್ರೀ ಕೆ. ಹನುಮಂತರಾವ್ ಅವರ ಅನುವಾದ ತುಂಬ ಸೊಗಸಾಗಿದೆ. ಎಲ್ಲೂ ತಮ್ಮ ವಿದ್ವ ತ್ತನ್ನು ಪರಿಚಯಿಸಲು ಹೋಗದೆ ಮೂಲಾಯಶಕ್ಕೆ ಧಕ್ಕೆ ಬರದಂತೆ ವರ್ಣಿಸಿದ್ದಾರೆ. ೪೦ ಪುಟಗಳ ಈ ಪುಟ್ಟ ಆದರೆ ಮೇರು ಕೃತಿಯಿಂದ ಶ್ರೀಮದ್ ಆಚಾರ್ಯರನ್ನು ಆಪ್ತವಾಗಿ ಪರಿಚಯಿಸಿ ಕೊಳ್ಳಬಹುದು. ಲೇಖಕರು ವಿದ್ಯಾಸಂಪನ್ನರಾದರೂ ವಿನಯವಂತರು. ತಮ್ಮ ಕೃತಜ್ಞತಾ ನುಡಿಗಳಲ್ಲಿ ನನ್ನಂಥ ಮಂದಮತಿಯನ್ನು ಕೂಡಿಸಿಕೊಂಡು ಸಂಸ್ಕೃತ ವ್ಯಾಕರಣಗಳ ಮತ್ತು ಶ್ರೀ ಮದಾ ಚಾರ್ಯರ ಶಾಸ್ತ್ರಗಳ ಪರಿಚಯ ಮಾಡಿಸಿದ ಶ್ರೀ ವಿಜಯರಾಯ ಗುರುಗಳಿಗೆ ಕೃತಜ್ಞತಾಪೂರ್ವಕ ವಂದನೆಗಳೆನ್ನುವ ಮಾತು ಇದನ್ನು ಪುಷ್ಟೀಕರಿಸುತ್ತದೆ. ಶ್ರೀಯುತರು ಸಂಸ್ಕೃತ ಹಾಗೂ ಕನ್ನಡ ಭಾಷೆಗಳೆರಡರಲ್ಲೂ ಅಸಾಧಾರಣ ಹಿಡಿತ ಸಾಧಿಸಿದ್ದಾರೆಂಬುದು ನಿರ್ವಿವಾದ .

ಶ್ರೀ ಕೆ. ಹನುಮಂತ ರಾವ್ ಅವರಿಗೆ ಹಾರ್ದಿಕ ಅಭಿನಂದನೆಗಳು ಕೃತಿಯ ಮೂಲಕರ್ತೃ ಅನುವಾದಕ ಎಲ್ಲರ ಮನದಾಶಯಕ್ಕೆ ನನ್ನ ಸ್ವರವನ್ನೂ ಸೇರಿಸುವೆ " ಮಹಿಮಾವಂತರಾದ ಶ್ರೀ ಮದಾಚಾರ್ಯರು ನನ್ನ ಮನದಲ್ಲಿ ಶೋಭಿಸಲಿ ಪೂರ್ಣಪ್ರಜ್ಞರೆಂದು ಪ್ರಖ್ಯಾತರಾದ ಶ್ರೀ ಮಧ್ವಾಚಾರ್ಯರು ದಿನನಿತ್ಯವೂ ತಮ್ಮ ಗ್ರಂಥಗಳ ವ್ಯಾಖ್ಯಾನವನ್ನು ನಮಗೆ ವೃದ್ಧಿ ಮಾಡುತ್ತ ಬರಲಿ"

**ಮಧ್ವನವಮಿ ವಿಶೇಷ**



# ಕನ್ನಡನಾಡಿನ ಹೆಮ್ಮೆಯ ಆಚಾರ್ಯಮಧ್ವರ ಏಕ ಶಿಲಾಪ್ರತಿಮೆ ಪಾಜಕದಲ್ಲಿ ಅನಾವರಣ

- ಶ್ರೀಮತಿ. ಸುಮಾ ಚಂದ್ರಶೇಖರ್

9880060354

ತತ್ವವಾದವನ್ನು ಜಗತ್ತಿನ ಮುಂದೆ ವ್ಯವಸ್ಥಿತವಾಗಿ ಪ್ರಸ್ತುತ ಪಡಿಸಿದ ಆಚಾರ್ಯಮಧ್ವರದ್ದು ಭವ್ಯವ್ಯಕ್ತಿತ್ವ. ಅವರ ವ್ಯಕ್ತಿತ್ವದ ಕನ್ನಡಿಯಾಗಿ ಉಡುಪಿ ಜಿಲ್ಲೆಯ ಪಾಜಕದ ಬಳಿಯಲ್ಲಿ ೩೨ ಅಡಿಗಳ ಪ್ರತಿಮೆಯ ಪ್ರತಿಷ್ಠಾಪನೆ ಯಾಗಿದೆ. ಯೋಚನೆ ಮಾಡಿ, ವೇದನಿಂದಕರೇ ಹೆಚ್ಚುತ್ತಿರುವ ಈ ದಿನಗಳಲ್ಲಿ ಇದೊಂದು ಉತ್ತಮ ನಡೆಯಲ್ಲವೇ? ವೈದಿಕರಿಂದಲೂ ಸಂಗ್ರಹಿಸಿದ ಟ್ಯಾಕ್ಸಿನಲ್ಲಿ ವೇದನಿಂದಕರ ಮೋಜು ನಡೆಯುತ್ತಿರುವ ದಿನಗಳಿವು. ಹಕ್ಕಿನಿಂದ ಪಡೆಯಬೇಕಾದ ಸಂಗತಿಗಳಿಗೂ ಸೊಕ್ಕಿದವರ ಮುಂದೆ ಬಿಕ್ಕುವ ಪರಿಸ್ಥಿತಿಗಳಲ್ಲಿ ನಾವು ಬಂದು ಬಿಟ್ಟಿದ್ದೇವೆ. ಇಂತಹ ಕಾಲಮಾನದಲ್ಲಿ ಪಲಿಮಾರು ಶ್ರೀಗಳು ಒಂದು ಧೈರ್ಯದ ಕೆಲಸವನ್ನೇ ಮಾಡಿದ್ದಾರೆ. ಇದು ನಮಗೂ ಹೆಮ್ಮೆಯಲ್ಲವೇನು?

ಉಡುಪಿ ಸನಿಹದ ಪ್ರಕೃತಿ ರಮಣೀಯ ಕುಂಜಾರುಗಿರಿಯ ದುರ್ಗಾದೇವಾಲಯ, ಪರಶುರಾಮ ಬೆಟ್ಟ ನಡುವೆ ಕನ್ನಡನಾಡಿನ ಹೆಮ್ಮೆಯ ಆಚಾರ್ಯ ಆಚಾರ್ಯ. ಮಧ್ವರು ಅವತಾರ ಭೂಮಿಯಲ್ಲಿ ಅವರ ಬದರಿಕಾಶ್ರಮ ಪ್ರವೇಶದ ಸಪ್ತಶತಮಾನೋತ್ಸವ ಪರ್ವಕಾಲದಲ್ಲಿ 32 ಸಲ್ಲಕ್ಷಣಗಳಿಂದ ಕೂಡಿದ ದಿವ್ಯ ತ್ರೈಲೋಕಗುರುವಿನ ವಿಗ್ರಹವನ್ನು ಪ್ರತಿಷ್ಠಾಪಿಸಿರುವುದು ಕೇವಲ ಮಾಧ್ವರೇಕೆ? ಇಡೀ ವೇದಾಂತಿಗಳ ಪ್ರಪಂಚವೇ ಹೆಮ್ಮೆ ಪಡುವಂತಹ ಕಾರ್ಯವಿದು, ಮಧ್ವರ ಮಹೋನ್ನತ ಪ್ರತಿಮೆಯ ಪ್ರತಿಷ್ಠಾಪನೆ.

ಜಗತ್ತಿನ ಅನೇಕ ದೇಶಗಳು ತಮ್ಮಲ್ಲಿ ಆಗಿ ಹೋದ ದಾರ್ಶನಿಕರ ಪ್ರತಿಮೆಗಳನ್ನು ತಮ್ಮ ದೇಶದ ಹೆಮ್ಮೆಯ ಪ್ರತೀಕವಾಗಿ ನಿಲ್ಲಿಸಿಕೊಂಡಿದ್ದಾರೆ. ಪಾಶ್ಚಾತ್ಯ ದೇಶಗಳಲ್ಲಿ ಕೂಪರ್ನಿಕಸ್, ಹೆರೋಡೋಟಸ್, ಅರಿಸ್ಟಾಟಲ್ ಮೊದಲಾದ ದಾರ್ಶನಿಕರ ಮಾತು ಇರಲಿ, ನಮ್ಮ ದೇಶವನ್ನು ಕೊಳ್ಳೆ ಹೊಡೆದುಕೊಂಡು ಹೋದ ಬಾರ್ಥುಲೋಮ್ಯು ಡಯಾಸ, ಅಲೆಕ್ಸಾಂಡರ ನಂತಹ ದುರಾಕ್ರಮಣಕಾರೀ ರಾಜರುಗಳ ಪ್ರತಿಮೆ, ತಮ್ಮದೇ ದೇಶವು ಹೊತ್ತಿ ಉರಿಯುತ್ತಿದ್ದಾಗ ಪಿಟೀಲು ಬಾರಿಸುತ್ತಾ ಎಂಜಾಯ್ ಮಾಡುತ್ತಿದ್ದ ನೀರೋನಂತಹವರನ್ನು ಸಹ ತಮ್ಮ ಹೆಮ್ಮೆಯ ಗುರುತಿಗಾಗಿ ಬೃಹದಾಕಾರದ ಮೂರ್ತಿಗಳನ್ನು ಮಾಡಿ ನಿಲ್ಲಿಸಿಕೊಂಡಿದ್ದಾರೆ. ಕೆಲವು ಕಡೆಗಳಲ್ಲಿ ಮಾತ್ರ ಶಿವಾಜಿ ಮಹಾರಾಜರು, ಮಹಾರಾಣಾ ಪ್ರತಾಪ, ವಿವೇಕಾನಂದರಂತಹ ಸಾಂಸ್ಕೃತಿಕ ನಾಯಕರುಗಳ ಮೂರ್ತಿಗಳನ್ನು ಮಾಡಿ ನಿಲ್ಲಿಸಿರುವುದನ್ನು ನಾವು ನೋಡಿದ್ದೇವೆ.

ನಮಗೂ, ಅದ್ವೈತಾಚಾರ್ಯ ಮತ್ತು ವಿಶಿಷ್ಟಾದ್ವೈತಾಚಾರ್ಯರುಗಳಿಗೂ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳು ಏನೇ ಇರಬಹುದು. ಆದರೆ ನಾವು ಭಾರತೀಯ ದರ್ಶನ ಹಾಗೂ ಶಾಸ್ತ್ರವನ್ನು ಗೌರವಿಸುವ ಪರಂಪರೆಯವರು ಅನ್ನುವುದು ಉಜ್ವಲಸತ್ಯ . ಈ ದೃಷ್ಟಿಯಿಂದ ನೋಡಿದಾಗ ಶಂಕರರು, ರಾಮಾನುಜರು ಅಥವಾ ಮಧ್ವರು ಈ ಯಾರದೇ ಪ್ರತಿಮೆಯನ್ನು ಸಾರ್ವಜನಿಕವಾಗಿ ಗೌರವಾರ್ಹಸ್ಥಾನದಲ್ಲಿ ಪ್ರತಿಷ್ಠೆ ಮಾಡಿದಾಗ ಅದು ನಮಗೆ ಸಂತಸವನ್ನು ಕೊಡುತ್ತದೆ. ಅದನ್ನು ಗೌರವಿಸುವುದನ್ನು ನಮ್ಮ ಕರ್ತವ್ಯವೆಂದು ನಾವು ತಿಳಿಯುತ್ತೇವೆ. ನಾವು ವೈದಿಕರು ಅಲ್ಲಲ್ಲಿ ನಮ್ಮ ನಮ್ಮ ಮತಾನುಸಾರವಾಗಿ ನಮ್ಮ ಆಚಾರ್ಯರುಗಳ ಪ್ರತಿಮೆಗಳನ್ನು ನಮ್ಮದೇ ಆದ ಮಠಗಳಲ್ಲಿಯೋ ಮಂದಿರಗಳಲ್ಲಿಯೋ ಪುಟ್ಟದಾಗಿ ಸ್ಥಾಪಿಸಿಕೊಂಡಿರುತ್ತೇವೆಯೇ ಹೊರತು ಸಾರ್ವಜನಿಕರ ದೃಷ್ಟಿಗೆ ಕಾಣುವಂತೆ ಉತ್ತಮ ಸ್ಥಳದಲ್ಲಿ ಎತ್ತರವಾಗಿ ಭವ್ಯವಾಗಿ ಪ್ರತಿಷ್ಠಾಪಿಸಿಕೊಂಡಿರುವುದು ಇಲ್ಲಿಯವರೆಗೆ ಕಂಡು ಬಂದಿಲ್ಲ. ಬೀದಿಗೊಂದರಂತೆ ಪ್ರತಿಷ್ಠೆ ಮಾಡಬೇಕೆಂದೇನೂ ಹೇಳುವುದಿಲ್ಲ. ಆದರೆ ವೈದಿಕಾಚಾರ್ಯರ ಪ್ರತಿಮೆಯೊಂದು ಸಾರ್ವಜನಿಕರ ಲ್ಯಾಂಡ್ ಮಾರ್ಕ್ ಅದಲ್ಲಿ ಅದು ನಮಗೊಂದು ಹೆಮ್ಮೆಯ ಸಂಕೇತ ಎನಿಸಬೇಕಲ್ಲವೆ? ವಿರಳವಾದರೂ ಪರವಾಗಿಲ್ಲ ಉತ್ತಮವಾಗಿದ್ದರೆ ಸಾಕು, ಒಟ್ಟಿನಲ್ಲಿ ವೇದಾಂತಾಗಸದ ನಕ್ಷತ್ರಕ್ಕೊಂದು ವೇದಿಕೆ ಬೇಕೇ ಬೇಕು. ಎಲ್ಲರಿಗೂ ಅವರ ಮಹತ್ವ ತಿಳಿಯಬೇಕು.

ಪ್ರತಿಮೆಗಾಗಿ ಶಿಲೆಯನ್ನು ತರಿಸಿದ್ದು ದೊಡ್ಡಬಳ್ಳಾಪುರದ ಗ್ರಾನೈಟಿನ ಪರ್ವತದಿಂದ ಅಲ್ಲಿಂದ ದೈತ್ಯಾಕಾರದ ಲಾರಿಯಲ್ಲಿ ಇಲ್ಲಿಯವರೆಗೆ ತಂದು ಪ್ರತಿಮೆಯನ್ನು ಕೆತ್ತಿಸಲಾಗಿದೆ. ಯಾವುದಾದರೂ ಒಂದು ಶೈಲಿಯನ್ನು






## ಆಚಾರ್ಯ ಮಧ್ವರ ತತ್ತ್ವೋಪದೇಶಗಳು

1. ಆತ್ಮ ಮತ್ತು ಪರಮಾತ್ಮ ಎಂಬ ಎರಡು ತತ್ವಗಳು ಭಿನ್ನವಾಗಿವೆ. ಆತ್ಮ ಅಸ್ವಾತಂತ್ರವಾದರೆ, ಪರಮಾತ್ಮ ಸರ್ವಸ್ವತಂತ್ರ.
2. ಭಗವಂತ ಸರ್ವಶಕ್ತ, ಸರ್ವಜ್ಞ ಮತ್ತು ಸರ್ವಾಂತರ್ಯಾಮಿ
3. ಈ ಸೃಷ್ಟಿಯಲ್ಲಿ ಸಕಲವೂ ಭಿನ್ನವಾಗಿದ್ದು, ಈ ಭೇದವು ನಿರಂತರವಾಗಿದೆ.
4. ಈ ಸೃಷ್ಟಿಯ ಪ್ರತಿಯೊಂದು ಶಬ್ಧ ಹಾಗೂ ಅರ್ಥವು ಭಗವಂತನ ಮಹಿಮೆಯನ್ನೇ ಹೇಳುತ್ತದೆ.
5. ಈ ಸೃಷ್ಟಿಯಲ್ಲಿ ಐದು ಬಗೆಯ ಬೇಧಗಳಿವೆ. ಅವು... ಜೀವ.. ಜೀವ ಬೇಧ, ಜೀವ-ಜಡ ಬೇಧ , ಜಡ-ಜಡ ಬೇಧ, ಜೀವ - ಪರ ಮಾತ್ಮ ಬೇಧ, ಜಡ ಪರಮಾತ್ಮ ಬೇಧ...

**"ಹರಿಸರ್ವೋತ್ತಮ, ವಾಯು ಜೀವೋತ್ತಮ"**

ಅನುಸರಿಸಿ ದೇಗುಲ ಅಥವಾ ಮೂರ್ತಿಯ ನಿರ್ಮಾಣ ಮಾಡುವುದು ಸಹಜವಾಗಿ ಕಂಡು ಬರುತ್ತದೆ. ಆದರೆ ಅಪರೂಪಕ್ಕೊಮ್ಮೆ ಎರಡು ವಿಭಿನ್ನ ಶೈಲಿಗಳನ್ನು ಒಂದೆಡೆ ಸೇರಿಸಿ ಪ್ರತಿಮಾ ನಿರ್ಮಾಣ ಮಾಡುವುದೂ ಉಂಟು. ಅಂತಹ ಒಂದು ಅಪರೂಪಕ್ಕೆ ನಮ್ಮ ಈ ಮಧ್ವರ ಪ್ರತಿಮೆಯು ಉದಾಹರಣೆಯಾಗಿದೆ. ಇಲ್ಲಿ ಹೊಯ್ಸಳ ಹಾಗೂ ಚೋಳ ಇಬ್ಬರ ಶೈಲಿಯನ್ನು ಅನುಸರಿಸಲಾಗಿದೆ. (ಶತಶತಮಾನಗಳ ಕಾಲ ಪರಸ್ಪರ ಹೊಡೆದಾಡಿದ ಚೋಳರು ಹಾಗೂ ಹೊಯ್ಸಳರು ಒಟ್ಟಾಗಿ ಸೇರಿದ್ದು ಪ್ರಾಯಶಃ ಇಲ್ಲಿ ಮಾತ್ರವೆಂದೆನಿಸುತ್ತದೆ.)

ವಿಗ್ರಹ ನಿರ್ಮಾಣದ ಹಿಂದೆ ವಿದ್ಯಾಧೀಶತೀರ್ಥ ಶ್ರೀಗಳವರ ಮನೋಬಲ ಅಪಾರವಾಗಿ ಕೆಲಸಮಾಡಿದೆ. ಇದರ ಬೆಂಬಲದೊಂದಿಗೆ ಈ ಪ್ರತಿಮೆಯನ್ನು ಇಷ್ಟರ ಮಟ್ಟಿಗೆ ತಂದು ನಿಲ್ಲಿಸಿರುವುದರ ಹಿಂದೆ ಅನೇಕ ಜನರ ಪರಿಶ್ರಮವಿದೆ. ನಮ್ಮ ಪೀಳಿಗೆಯು ಕಂಡಿರುವಂತಹ ಕೆಲವು ಉತ್ತಮ ವರ್ಣಚಿತ್ರ ಕಲಾವಿದರಲ್ಲಿ ಕೆ. ಎಂ. ಶೇಷಗಿರಿಯವರು ಒಬ್ಬರು . ಈತ ಅಭಿಜಾತ ಕಲಾವಿದರು. ಜೊತೆಗೆ ಮಧ್ವಶಾಸ್ತ್ರವನ್ನು ಕೂಡ ಅಧ್ಯಯನ ಮಾಡುತ್ತಿರುವುದು. ಶಾಸ್ತ್ರದ ತಿಳುವಳಿಕೆಯೂ ಜೊತೆಗೆ ಇರುವುದರಿಂದ ಇವರು ರಚಿಸಿರುವ ಚಿತ್ರಗಳು ಹೆಚ್ಚಿನ ತೂಕದಿಂದ ಕೂಡಿರುತ್ತವೆ. ಈ ಮಧ್ವರ ಪ್ರತಿಮೆಯ ಮೂಲರೂಪುರೇಷೆಗಳು, ನಿರ್ಮಾಣದ ಪ್ರತಿ ಹಂತಹ ಮೇಲ್ವಿಚಾರಣೆ ಎಲ್ಲವೂ ಕೂಡ ಇವರದೇ.

ಕಲ್ಲನ್ನು ಪ್ರತಿಮೆಯನ್ನಾಗಿ ಮಾಡಿದ್ದು ಪ್ರಸಿದ್ಧ ಶಿಲ್ಪಿಗಳಾದ ಅಶೋಕ ಗುಡಿಗಾರ ಮತ್ತು ಅವರ ಸಂಗಡಿಗರು. ಮಲಗಿದ್ದ ಮೂರ್ತಿಯನ್ನು ಎದ್ದುನಿಲ್ಲಿಸಿ, ಪೀಠದ ಮೇಲೆ ಕೂರಿಸಿದ್ದು ಎಲ್ ಅಂಡ್ ಟಿ ಕಂಪನಿಯ ತಜ್ಞರು. ಇದಕ್ಕಿಂತಲೂ ದೊಡ್ಡದಾದ ಅನೇಕ ಕಾರ್ಯಗಳನ್ನು ಸಾಧಿಸಿದ ಅನುಭವಿಗಳು. ಹೀಗೆ ದೈವಿಕವಾದ ಮಧ್ವಶಕ್ತಿಯು ಅವರನ್ನೆಲ್ಲ ಒಟ್ಟುಗೂಡಿಸಿ ಕೆಲಸಮಾಡಿತು. ಒಟ್ಟು ೩೨ ಜನರು ಬಹಳ ಸತತವಾಗಿ ಈ ಕೆಲಸವನ್ನು ಸಾಧಿಸಿದರು.

# ಭೀಷ್ಮ ಏಕಾದಶಿ !

- ವೆಂಕಟ ರಾಘವನ್ ಎಸ್.
98457 93917



ಭರತ ವರ್ಷದ ಇತಿಹಾಸ ತುಂಬಾ ಪ್ರಾಚೀನ ವಾಗಿದೆ. ಭರತ ವರ್ಷ, ಭರತ ಖಂಡ, ವೇದ ಭೂಮಿ ಮತ್ತು ಕರ್ಮ ಭೂಮಿ. ಭಗವಂತನ ಸೇವೆ ಮಾಡುವಾಗ ಸಂಕಲ್ಪ ಮಾಡುತ್ತಾ ಪ್ರವರ ಹೇಳುವುದು ಆಚಾರ. ಶ್ವೇತವರಾಹ ಕಲ್ಪೇ, ವೈವಸ್ವತ ಮನ್ವಂತರೇ ಕಲಿಯುಗೇ, ಪ್ರಥಮ ಪಾದೇ, ಜಂಬೂ ದ್ವೀಪೇ, ಭರತ ಖಂಡೇ, ಭರತ ವರ್ಷೇ ಎಂದು ಸಂಕಲ್ಪ ಮಾಡುವಾಗ ಭರತ ಖಂಡ ವೇದ ಭೂಮಿ, ಕರ್ಮ ಭೂಮಿ ಮತ್ತು ಇಡೀ ಭಾರತ ಒಂದು ಖಂಡವೆಂದು ಪರಿಗಣಿಸಲಾಗುವುದು. ಲಯ ಕಾರಕ ನಡೆಸುವ ಜಗತ್ತಿನಲ್ಲಿ ಸಮಯ ಪುರೋಗಮನ ಆಗು ವುದು. ಸಮಯ ಕಳೆಯುತ್ತಾ ಕಲ್ಪಗಳು, ಯುಗಗಳು, ವರ್ಷಗಳು ನಡೆದು ಹೋದವು, ನಾಲ್ಕು ಯುಗಗಳಲ್ಲಿ ದ್ವಾಪರಯುಗ ನೆನ ಪಿಗೆ ಬಂದಾಗ ಮಹಾಭಾರತ, ಶ್ರೀ ಕೃಷ್ಣ ಪರಮಾತ್ಮನ ಲೀಲೆ, ಪಾಂಡವ - ಕೌರವರ ಧರ್ಮ ಯುದ್ಧ , ಶ್ರೀಕೃಷ್ಣ ಪರಮಾತ್ಮ ಜಗತ್ತಿಗೆ ಉಪದೇಶಿಸಿದ ಭಗವದ್ಗೀತೆ ಸ್ಮರಣೆ ಆಗುವುದು. ದ್ವಾಪರ ಯುಗದಲ್ಲಿ ಹಸ್ತಿನಾಪುರ ರಾಜ್ಯ ಭಾರ,ರಾಜ್ಯ ಸಂರಕ್ಷಣೆ, ಮಾಡುತ್ತಾ ಇರುವರು ಮಹಾಪುರುಷ ಶ್ರೀಭೀಷ್ಮಾಚಾರ್ಯರು ಅಷ್ಟ ವಸುವುರಲ್ಲಿ ಒಬ್ಬರು.

**ಗಂಗೆ ಮತ್ತು ಅಷ್ಟ ವಸುಗಳ ಶಾಪ :**

ಪುರಾತನ ಕಾಲದಲ್ಲಿ ಬ್ರಹ್ಮ ಸಭೆಯಲ್ಲಿ ಋಷಿಗಳು ದೇವತೆಗಳು ಮಹಾತ್ಮರು ಆಸೀನರಾಗಿ ಜಗತ್ತಿನಲ್ಲಿ ಶಾಂತಿ, ಸೌಖ್ಯ ಹೇಗೆ ನಿರ್ವಹಿಸಬೇಕು.? ಎಂದು ಸಭೆ ನಡೆಸುತ್ತಿದ್ದರು. ಚರ್ಚೆಯ ನಂತರ ಅಲ್ಲಿರುವವರಲ್ಲಿ ಯಾರಾದರೂ ಅಧಿಕಾರ ವರ್ಗದಿಂದ ಭೂತಳದಲ್ಲಿ ಅವತರಿಸಿ ಜಗತ್ಕಲ್ಯಾಣ ಕಾರ್ಯ ದಲ್ಲಿ ಭಾಗವಹಿಸಲು ಚಿಂತನೆ ಮಾಡುತಲಿದ್ದರು. ಇದೇ ಸಮಯದಲ್ಲಿ ಬ್ರಹ್ಮ ದೇವರ ದರ್ಶನಕ್ಕಾಗಿ ಗಂಗೆ ಸಭಾ ಪ್ರವೇಶ ಮಾಡಿದರು.ಗಂಗೆಯ ತೀವ್ರವಾಯು ವೇಗಕೆ ಸಭೆಯಲ್ಲಿ ಅಡಚಣೆ ಆಯಿತು.ಇದರಿಂದ ಬ್ರಹ್ಮ ದೇವರು ಗಂಗೆಯನ್ನು ಭೂಲೋಕದಲ್ಲಿ ಜನಿಸಿ ಮರಳಿ ಸ್ವರ್ಗಕ್ಕೆ ಬರುವೆ ಎಂದು ಶಾಪವ ಕೊಟ್ಟರು.ಅಷ್ಟ ವಸುಗಳು ದೇವಲೋಕದಲ್ಲಿ ದೇವೇಂ ದ್ರರಿಗೆ, ಶ್ರೀಹರಿಗೆ ಸಹಾಯವಾಗಿ ಇರುವ ಶಕ್ತಿವಂತರಾದ ದೇವತೆಗಳು, ಸಾಕ್ಷಾತ್ ಬ್ರಹ್ಮಪ್ರಜಾಪತಿ ಪುತ್ರರು. ಪ್ರಕೃತಿ ತತ್ವಕೆ ಪ್ರತೀಕರು ಅಷ್ಟ ವಸುಗಳು ಧರ, ಅನಿಲ ಅನಲ, ಅಹ, ಪ್ರತ್ಯೂಷ ಪ್ರಭಾಸ, ಸೋಮ ಮತ್ತು ಧ್ರುವ.

ಪೈತಾಮಹೋ ಮುನಿರ್ದೇವಸ್ತಸ್ಯ ಪುತ್ರಃ ಪ್ರಜಾಪತಿಃ
ತಸ್ಯಾಪ್ಟೌ ವಸವಃ ಪುತ್ರಾಸ್ತೇಷಾಂ ವಕ್ಷ್ಯಾಮಿ ವಿಸ್ತರಂ।
ಧರೋ ಧ್ರುವಶ್ಚ ಸೋಮಶ್ಚ ಸೋಮಶ್ಚ ಅಹಶ್ಚೈವಾನಿಲೋನಲಃ
ಪ್ರತ್ಯೂಷಶ್ಚ ಪ್ರಭಾಸಶ್ಚ ವಸವೋಷ್ಟೌ ಪ್ರಕೀರ್ತಿತಾಃ

ದೇವತಾ ಗಣಗಳು ಮೂರು ವಿಧ ಎಂದು ಪುರಾಣಗಳಲ್ಲಿ ವರ್ಣಿಸಲಾಗಿದೆ. ಅಷ್ಟವಸುವರು, ಏಕಾದಶ ರುದ್ರರು, ದ್ವಾದಶ ಆದಿತ್ಯರು. ವಸು ಎಂದರೆ ಸಂಪದೆ. ವಸುವು ಸಂಪದೆ ಅನು ಗ್ರಹಿಸುವ ಗಣ.ಇವರು ದಿಕ್ಪಾಲಕತ್ವ ಕಾರ್ಯ ಕೂಡ ವಹಿಸು ವರು.ಒಮ್ಮೆ ಅಷ್ಟ ವಸುಗಳು ತಮ್ಮ ಪತ್ನಿಯರೊಡನೆ ವಸಿಷ್ಠ ಆಶ್ರಮಕ್ಕೆ ಬಂದು ಅಲ್ಲಿ ಇರುವ ಕಾಮಧೇನುವನ್ನು ಕಂಡು, ಕಾಮಧೇನು ತಮ್ಮ ವಶವಾಗಬೇಕೆಂದು ಯಾರಿಗೂ ಹೇಳದೆ ಕರೆದುಕೊಂಡು ಹೋಗುವಾಗ ವಸಿಷ್ಠರಿಗೆ ಸಿಕ್ಕಿ ಬಿದ್ದರು. ಮಾಡಿದ ಪಾಪ ಕಾರ್ಯಕ್ಕೆ ಭೂಲೋಕದಲ್ಲಿ ಜನಿಸಿ ಪುನಃ ಸ್ವರ್ಗ ಸೇರುವ ಶಾಪವ ಕೊಟ್ಟರು. ವಸುಗಳು ವಸಿಷ್ಠರನ್ನು ಕ್ಷಮೆ ಯಾಚಿಸಿ ಪರಿಹಾರ ಮಾರ್ಗ ಕೇಳಿದರು. ವಸಿಷ್ಠರು ಏಳು ವಸುಗಳು ಒಂದೊಂದು ವರುಷ ಬಾಳಿ ಸ್ವರ್ಗಕ್ಕೆ ತೆರಳುವರು ಮತ್ತು ಕಾಮಧೇನುವನ್ನು ಸೆರೆ ಹಿಡಿಯಲು ಪ್ರಯತ್ನಿಸಿದ ಎಂಟನೇ ವಸುವು ಭೂಲೋಕದಲ್ಲೇ ಇದ್ದು ಕೊನೆಗೆ ಸ್ವರ್ಗಕ್ಕೆ ಹಿಂತಿರುಗಿ ಬರುವರು ಎಂದು ನುಡಿದರು. ಅಷ್ಟ ವಸುವರು ಶಾಪದ ಬಗ್ಗೆ ಚಿಂತಿಸುವಾಗ ಗಂಗಾದೇವಿ ಅವರ ಬಳಿ ಬಂದರು. ವಸುವರು ಗಂಗಾದೇವಿಯನ್ನು ಮಾನವ ರೂಪಧರಿಸಿ, ಯಾರಾದರೂ ರಾಜನನ್ನು ಮದುವೆ ಆಗಿ, ಅಷ್ಟ ವಸುವರಿಗೆ ಜನ್ಮ ಕೊಟ್ಟು ಹುಟ್ಟಿದ ನಂತರ ನದಿಗೆ ಅರ್ಪಣೆ ಮಾಡಲು ಬೇಡಿ ಕೊಂಡರು.ಗಂಗಾದೇವಿ ಇದಕ್ಕೆ ಅಂಗೀಕಾರ ತಿಳಿಸಿದರು.

ಈ ರೀತಿಯಾಗಿ ಗಂಗಾ ಮಾತ ಅಷ್ಟ ವಸುವರು ಭುವಿಗೆ ಬರ ಬೇಕಾಯಿತು.

### ಶಂತನ ಮಹಾರಾಜನರ ಜನನ

ಮಹಾ ಪ್ರತಾಪಶಾಲಿಯಾದ ಪ್ರತೀಪ ಮಹಾರಾಜರು ವಸುಂಧರಾವಲಯ ಪಾಲಕರಾಗಿ, ಪವಿತ್ರತೆಯಿಂದ, ಸುಪ್ರತಿಷ್ಠ ರಾಗಿ ರಾಜ್ಯವ ಆಳುತ್ತಿದ್ದರು. ಪುತ್ರ ಪ್ರಾಪ್ತಿಗಾಗಿ ವ್ರತ ದೀಕ್ಷೆ, ಭಗ ವಂತನ ಸೇವೆ ಮಾಡುತ್ತಿದ್ದರು. ಭಗವಂತನ ಕೃಪೆಯಿಂದ ಪುತ್ರ ಪ್ರಾಪ್ತಿ ಆಯಿತು. ಪ್ರತೀಪ ಮಹಾರಾಜರು ಜಾತಕ ಕರ್ಮ ನಿರ್ವ ಹಿಸಿ ಪುತ್ರರಿಗೆ ಶಂತನ ಎಂದು ನಾಮಕರಣ ಮಾಡಿದರು. ಶಂತನ ಮಹಾರಾಜರು ದಿನ ದಿನ ಪ್ರವರ್ಧಮಾನರಾಗಿ ಬೆಳೆ ಯುತ್ತ ಧನುರ್ವೇದ ಪಾರಂಗತರಾಗಿ ಸಾಮ್ರಾಜ್ಯ ಭಾರವನ್ನು ನಿರ್ವಹಿಸುತ್ತಿದ್ದರು. ಶಂತನ ಮಹಾರಾಜರು ಒಂದು ದಿನ ಅರಣ್ಯದಲ್ಲಿ ಸಂಚರಿಸುವಾಗ ಸುಂದರ ಯುವತಿ ಒಬ್ಬರು ಎದು ರಾದರು. ಸೌಂದರ್ಯರಾಶಿ ಆದ ಯುವತಿಯನ್ನು ಮಾತ ನಾಡಿಸಿ ನೀವು ಯಾರು? ಸೌಂದರ್ಯವತಿ ಆದ ನೀವು ನನ್ನನ್ನು ಮದುವೆ ಆಗಲು ಪ್ರಸ್ತಾಪಿಸಿದರು. ರಾಜರ ಮಾತನ್ನು ಕೇಳಿ ಅಲ್ಲಿ ಉಪಸ್ಥಿತರಿದ್ದ ಗಂಗಾದೇವಿ ಶಂತನ ಮಹಾರಾಜ ರನ್ನು ಮದುವೆ ಆಗಲು ಒಪ್ಪುತ್ತಾರೆ!ಆದರೆ ಕೆಲವು ನಿಬಂಧನೆಗಳು ವಿಧಿಸುವರು.ಗಂಗೆಯ ಕಾರ್ಯ ಕಲಾಪಗಳಲ್ಲಿ ಅಡ್ಡಿ ಆಗ ಬಾರದು, ಎಂದಿಗೂ ಮನಸ್ಸಿಗೆ ನೋವು ಉಂಟಾಗುವ ಹಾಗೆ ಮಾತ ನಾಡಬಾರದು! ಕಠಿಣವಾಗಿ ಮಾತಾಡಿದರೂ ಕೋಪ ತಾಪ ಬಂದರೂ ತಮ್ಮನ್ನು ಬಿಟ್ಟು ಹೋಗುವೆನು! ಎಂದು ತಮ್ಮ ನಿಬಂಧನೆ ತಿಳಿಸಿದರು.ಒಪ್ಪಿಗೆ ಆದರೆ ಪಾಣಿಗ್ರಹಣ ಮಾಡುವೆನು ಎಂದು ರಾಜಧಾನಿಗೆ ಕರೆದುಕೊಂಡು ಬಂದರು.ಶಂತನ ಮಹಾ ರಾಜರ ಮದುವೆ ಆಗಿ ಗಂಗೆ ರಾಜ್ಯಕ್ಕೆ ರಾಣಿ ಆದರು.

### ಗಾಂಗೇಯರ ಜನನ:

ಕಾಲಕ್ರಮೇಣ ಶಂತನ ಮಹಾರಾಜರಿಗೂ ಗಂಗಾ ದೇವಿಗೂ ಪುತ್ರ ಸಂತಾನವಾಯಿತು. ಗಂಗೆ ತನ್ನ ಮಗುವನ್ನು ನದಿಯಲ್ಲಿ ಬಿಡುವಾಗ ಮಹಾರಾಜರು ಏಕೆಂದು ಪ್ರಶ್ನಿಸಿದರು. ಗಂಗೆ ನಿಬಂಧನೆ ಮತ್ತು ಷರತ್ತುಗಳನ್ನು ಜ್ಞಾಪಿಸಿದರು.ಅಡ್ಡಿ ಬರ ಬಾರದೆಂದು ಜ್ಞಾಪಿಸಿದರು. ಶಂತನರು ಗಂಗೆ ತನ್ನನ್ನು ಬಿಟ್ಟು ಹೋಗುವ ಭಯದಿಂದ ಸುಮ್ಮನಾದರು. ಹೀಗೆ ಏಳು ಮಕ್ಕಳನ್ನು ಗಂಗೆ ನೀರು ಪಾಲು ಮಾಡುತಲಿದ್ದರು. ಎಂಟನೆಯ ಸಂತಾನ ವಾಯಿತು. ಯಥಾವಿಧಿ ಗಂಗೆ ಮಗುವನ್ನು ನೀರಲ್ಲಿ ಬಿಡುವಾಗ ಶಂತನ ಮಹಾರಾಜರಿಗೆ ಆಗ್ರಹವಾಯಿತು.ಇದನ್ನು ಸಹಿಸದೆ ಗಂಗೆ ತಾನು ಇನ್ನು ಅವರ ಜೊತೆ ಇರುವುದಿಲ್ಲ ಎಂದು ನುಡಿ ದರು. ಶಂತನ ಮಹಾರಾಜರಿಗೆ ಆಶ್ಚರ್ಯವಾಯಿತು.ತಾಯಿ ಮಗುವನ್ನು ನೀರುಪಾಲು ಮಾಡಲು ತುಂಬ ಆಶ್ಚರ್ಯಕರ! ಏಕೆ ಹೀಗೆ ಮಾಡಿದೆ? ಇದರ ಹಿಂದೆ ಇರುವ ಕಾರಣ ಏನು ಎಂದು ಶಾಂತನರು ಗಂಗೆಯನ್ನು ಪ್ರಶ್ನಿಸಿದರು.ಗಂಗೆ ತಾನು ಬ್ರಹ್ಮ ಶಾಪದಿಂದ ಭುವಿಗೆ ಬರ ಬೇಕಾಯಿತು ಮತ್ತು ಅಷ್ಟ ವಸುಗಳ ಶಾಪ ವಿಮುಕ್ತಿಗಾಗಿ ಪಡೆದ ಸಂತಾನವನ್ನು ನೀರಲ್ಲಿ ಬಿಡಬೇಕಾ ಯಿತು, ಎಂಟನೆಯ ಮಗುವನ್ನು ಬೆಳಸಿ ನಿಮಗೆ ಒಪ್ಪಿಸುವೆ ಎಂದು ಹೇಳಿದರು. ದ್ಯೋ ನಾಮ ಧಾರಿ ಆದ ವಸುವು ಈ ಬಾಲಕ, ಧರ್ಮಾತ್ಮನಾಗಿ ಸರ್ವ ಶಾಸ್ತ್ರ, ವಿಶಾರದವನಾಗಿ, ಪಿತೃ ಭಕ್ತನಾಗಿ, ರಾಜ್ಯವನ್ನು, ಸ್ತ್ರೀ ಭೋಗಗಳನ್ನು ತ್ಯಜಿಸಿ ಸಂತನಾ ನರಹಿತನಾಗಿ ಉತ್ತಮ ವ್ಯಕ್ತಿ ಆಗುವರು. ಈ ಮಗು ಗಾಂಗೇಯ ಮತ್ತು ದೇವವ್ರತರಾಗಿ ಹೆಸರುಗಳಿಸುವರು. ಇದು ವಸಿಷ್ಠರ ಶಾಪದ ಫಲ.ನನ್ನನ್ನು ನೋಡುವ ಇಚ್ಛೆ ಆದಾಗ ಪ್ರಕಟ ವಾಗುವೆನು ಎಂದು ಹೇಳಿ ಗಂಗೆ ಪುತ್ರನ ಜೊತೆ ರಾಜ್ಯದಿಂದ ಹೊರಟರು. ಕಾಲ ಕಳೆಯುತ್ತಾ ಇತ್ತು, ಶಂತನ ಮಹಾರಾಜರು ರಾಜ್ಯವನ್ನು ಧರ್ಮದಿಂದ ಪಾಲನೆ ಮಾಡತಲಿದ್ದರು. ಒಂದು ದಿನ ಗಂಗಾ ನದಿ ತೀರದಲ್ಲಿ ವಿಹರಿಸುತ್ತ ತನ್ನ ಪುತ್ರ ಮತ್ತು ಗಂಗೆಯನ್ನು ನೆನೆದರು.ಗಂಗಾ ಮಾತ ಪುತ್ರನೊಂದಿಗೆ ಪ್ರಕಟ ವಾದರು. ಗಂಗೆ ಮಹಾರಾಜರಿಗೆ ಪುತ್ರನನ್ನು ಒಪ್ಪಿಸಿದರು. ಮಹಾರಾಜಾ! ತಮ್ಮ ಪುತ್ರ ಮಹರ್ಷಿ ವಸಿಷ್ಠರ ಬಳಿ ವೇದ ವೇದಾಂಗಗಳ ಅಧ್ಯಯನ ನಡೆಯಿತು. ಸರ್ವ ಶಾಸ್ತ್ರವಿದೆ, ಮಹಾಧನುರ್ಧರ, ನೀತಿ ಶಾಸ್ತ್ರದಲ್ಲಿ ನಿಪುಣ,ಪರಶುರಾಮರ ಬಳಿ ಅಸ್ತ್ರವಿದ್ಯೆ ಕಲಿತಿದ್ದಾರೆ ಎಂದು ನುಡಿದು ಪುತ್ರನನ್ನು ರಾಜರಿಗೆ ಒಪ್ಪಿಸಿ ಕಣ್ಮರೆ ಆದರು.ಅಂದಿನಿಂದ ಗಾಂಗೇಯರು ರಾಜ್ಯದ ಅರಮನೆಗೆ ತೆರಳಿದರು. ತಂದೆಯ ಮಾತು ವೇದ ವಾಕ್ಯ! ಪಿತೃವಾಕ್ಯ ಪರಿಪಾಲನೆ ಪರಮ ಧರ್ಮ, ರಾಜ್ಯದ ಕ್ಷೇಮವೇ ಪ್ರಮುಖ ಕರ್ತವ್ಯವಾಗಿ ಜೀವನ ನಡೆಸಿದರು.

### ಭೀಷ್ಮ ಪ್ರತಿಜ್ಞೆ:

ಬೇಟೆಗೆ ಹೋದಾಗ ಶಂತನ ಮಹಾರಾಜರು ಸತ್ಯವತಿ ಎನ್ನುವ ಯುವತಿಯನ್ನು ಕಂಡು ಮೋಹಿತರಾದರು. ಸಂಸಾರ ಜೀವನದ ಕೋರಿಕೆ ಮೇರೆಗೆ ಶಂತನ ಮಹಾರಾಜರು ಸತ್ಯವತಿ ಯನ್ನು ವಿವಾಹವಾಗಲು ಸತ್ಯವತಿಯ ತಂದೆ ತಾಯಿಗಳನ್ನು ಭೇಟಿ ಮಾಡಿ ತನ್ನ ಕೋರಿಕೆ ನೆರವೇರಿಸಲು ಕೇಳಿಕೊಂಡರು. ಆಗಲೇ ಮದುವೆ ಆಗಿ ಯುವರಾಜ ಇರುವ ಸ್ಥಿತಿಯಲ್ಲಿ ಇದು ಹೇಗೆ ಸಾಧ್ಯ? ಎಂದು ಹೇಳಿ ಸಂಶಯ ವ್ಯಕ್ತಪಡಿಸಿದರು. ಮಹಾಮಂತ್ರಿಗಳಿಂದ ವಿಷಯ ತಿಳಿದು ಗಾಂಗೇಯರು ಸತ್ಯವತಿ ತಂದೆ ತಾಯಿಯರನ್ನು ಸಂದರ್ಶಿಸಿ ತನ್ನ ತಂದೆಯ ಕೋರಿಕೆ ನೆರವೇರಿಸಬೇಕು ಎಂದು ಬೇಡಿಕೊಂಡರು. ಸಂಶಯ ಬೇಡ। ತಾನು ಯುವರಾಜರಾದರೂ ರಾಜ್ಯದ ಆಳ್ವಿಕೆ ಮಾಡುವುದಿಲ್ಲ. ಬ್ರಹ್ಮಚರ್ಯ ಪಾಲಿಸಿ ಸದಾ ಹಸ್ತಿನಾಪುರದ ಕ್ಷೇಮಕ್ಕಾಗಿ ಹೋರಾಡುವೆ ನಿಷ್ಠಾಗರಿಷ್ಠನಾಗಿರುವೆ ಎಂದು ಪ್ರತಿಜ್ಞೆ ಮಾಡಿದರು.ಭೀಷಣ ಪ್ರತಿಜ್ಞೆ ಮಾಡಿ ಭೀಷ್ಮನಾದರು. ತಂದೆಯ ವಿವಾಹಕ್ಕಾಗಿ ತನ್ನ ಹಕ್ಕನ್ನು ಬಿಟ್ಟು ಬ್ರಹ್ಮಚರ್ಯವ ಪಾಲಿಸುವ ಪುತ್ರನ ಕಂಡು ಶಂತನ ಮಹಾರಾಜರು ಸಂತಸ

ಗೊಂಡರು. ಪಿತೃ ವಾಕ್ಯ ಪರಿಪಾಲನ, ಪಿತೃಹಿತ ಕೋರುವ ಪುತ್ರನ ನೋಡಿ ಹೃದಯದಲ್ಲಿ ಸಂತೋಷ ಮೂಡಿತು. ಗಾಂಗೇಯರಿಗೆ ಸ್ವಚ್ಛಂದ ಮರಣ ವರವ ಕೊಟ್ಟರು. ಅಂದಿನಿಂದ ಶ್ರೀ ಭೀಷ್ಮಾಚಾರ್ಯರು ರಾಜ್ಯದ ಹಿತ ಸಂರಕ್ಷಣೆಗೆ ಮಾಡುತ ಅನುದಿನ ಭಗವಂತನ ಸೇವೆ ಭೀಷ್ಮಾಚಾರ್ಯರು ಮಾಡುತಲಿದ್ದರು.

ಜಾತಸ್ಯಹಿ ಧ್ರುವೋ ಮೃತ್ಯುಧ್ರುವಂ ಜನ್ಮ ಮೃತಸ್ಯ ಚ
ಅದ್ಯೈವಾಬ್ದಶತಾತೇ ವಾ ಜಾತಸ್ಯ ಮರಣಂ ಧ್ರುವಂ॥

ಈ ಭೂಲೋಕದಲ್ಲಿ ಜನನ ಮರಣ ಚಕ್ರ ನಿಶ್ಚಿತ! ಹುಟ್ಟು ಸಾವು ಎರಡೂ ಪರಮಾತ್ಮ ಅಧೀನ. ಭೀಷ್ಮಾಚಾರ್ಯರಿಗೆ ಮಾತ್ರ ಸ್ವಚ್ಛಂದ ಮರಣದವರ.ತಮ್ಮ ಕೊನೆ ತಾವೇ ನಿರ್ಣಯಿಸಬಹುದಾದ ಮಹಾನುಭಾವರು ಶ್ರೀ ಭೀಷ್ಮಾಚಾರ್ಯರು.

**ವಿಷ್ಣು ಸಹಸ್ರನಾಮ ಸ್ತೋತ್ರ ಮತ್ತು ಭೀಷ್ಮ ಏಕಾದಶಿ**

ಕುರುಕ್ಷೇತ್ರ ಮಹಾ ಸಂಗ್ರಾಮದಲ್ಲಿ ಬಂಧು ಬಾಂಧವರು, ಹಿರಿಯರು, ಗುರುಗಳು,ಪಿತಾಮಹ ಭೀಷ್ಮರನ್ನು ಕಂಡು ಅರ್ಜುನ ಯುದ್ಧ ಮಾಡಲು ಹಿಂದೆಜ್ಜೆ ಹಾಕಿ ರಥದಿಂದ ಕೆಳಗೆ ಬಂದು ತನ್ನಿಂದ ಯುದ್ಧ ಮಾಡಲು ಆಗುತ್ತಿಲ್ಲ! ಎಂದು ಶ್ರೀ ಕೃಷ್ಣನ ಶರಣು ಬೇಡಿದರು.

"ಕರ್ಮಣ್ಯೇ ವಾಧಿಕಾರಸ್ತೇ ಮಾ ಫಲೇಷು ಕದಾಚನ ॥ ಮಾ
ಕರ್ಮಫಲ ಹೇತು ರ್ಭೂ ಮಾತೇ ಸಂಗೋಸ್ತ್ವ ಕರ್ಮಣಿ॥

ಶ್ರೀಕೃಷ್ಣ ಅರ್ಜುನಿಗೆ ಉಪದೇಶವ ಮಾಡಿ ಕರ್ಮ ಮಾಡಲು, ಕರ್ಮಫಲವನ್ನು ಯಾಚಿಸದಿರಲು ನುಡಿದರು.

ಭೀಷ್ಮ ಪಿತಾಮಹ ನಿಷ್ಠಾ ಗರಿಷ್ಟ, ಬ್ರಹ್ಮಚಾರಿ ಮತ್ತು ಪಿತೃವಾಕ್ಯ ಪರಿಪಾಲನೆ ಮಾಡಿದ ಮಹಾನುಭಾವರು. ಅಷ್ಟ ವಸುವರಲ್ಲಿ ಒಬ್ಬರು.ತಂದೆಗೆ ಕೊಟ್ಟ ಮಾತಿಗೆ ಆ ಜನ್ಮ ಬ್ರಹ್ಮಚಾರಿಯಾಗಿ ಕುರುವಂಶದ ರಕ್ಷಣೆ ಮಾಡುವ ಭಗ ವಂತನ ಸೇವೆ ಮಾಡುವ ವೀರಯೋಧ ಭೀಷ್ಮ ಪಿತಾಮಹ. ಶ್ರೀರಾಮ ಚಂದ್ರ ಪ್ರಭು ಪಿತೃವಾಕ್ಯ ಪರಿಪಾಲನೆ ಮಾಡಲು ಅರಣ್ಯಕ್ಕೆ ತೆರಳಿರುವುದನ್ನು ಇಲ್ಲಿ ಸ್ಮರಿಸಬಹುದು. ಕುರುಕ್ಷೇತ್ರ ಸಂಗ್ರಾಮದಲ್ಲಿ ಧನುರ್ವಿದ್ಯಾ ಪ್ರಾವೀಣ್ಯ ಹೊಂದಿರುವ ಭೀಷ್ಮರ ಮುಂದೆ ನಿಂತು ಯುದ್ಧ ಮಾಡುವ ಸಾಹಸ ಯಾರಿಗೂ ಇಲ್ಲ. ಧರ್ಮರಾಜ ಭೀಷ್ಮ ಪರಾಕ್ರಮದಿಂದ ಪಾಂಡವರ ಸೇನೆ ಗಾಯಗೊಳ್ಳುವುದನ್ನು ಪ್ರಸ್ತಾಪಿಸಿ ಸಹಾಯ ಮಾಡಲು ಭೀಷ್ಮರನ್ನು ಬೇಡಿಕೊಂಡರು. ಶಿಖಂಡಿಯನ್ನು ಯುದ್ಧ ಭೂಮಿಯಲ್ಲಿ ಕಂಡಾಗ ಅಸ್ತ್ರಸನ್ಯಾಸ ಮಾಡುವೆನು ಎಂದು ನುಡಿದರು. ಇದನ್ನು ತಿಳಿದ ಪಾಂಡವರು ಶಿಖಂಡಿಯನ್ನು ಯುದ್ಧ ಭೂಮಿಗೆ ಕರೆತರಲು ಭೀಷ್ಮರು ಶಸ್ತ್ರಾಸ್ತ್ರಗಳನ್ನು ಬಿಟ್ಟರು. ಅರ್ಜುನನಿಂದ ಭೀಷ್ಮಾಚಾರ್ಯರ ಮೇಲೆ ಬಾಣಗಳ ಸುರಿಮಳೆ ಆಯಿತು. ಭೀಷ್ಮರು ರಥವನ್ನು ಬಿಟ್ಟು ದೇಹದಲ್ಲಿ ಹೊಕ್ಕ ಬಾಣಗಳ ನೋವನ್ನು ಸಹಿಸುತ್ತ ಯುದ್ಧ ಭೂಮಿಯಿಂದ ಹೊರಬಂದು ಬಾಣಗಳನ್ನೇ ಹಾಸಿಗೆ ಮಾಡಿಕೊಂಡು ಮಲಗಿದರು. ಭೀಷ್ಮರಿಗೆ ಸ್ವಚ್ಛಂದ ಮರಣವರವಿದೆ. ಅಂತ್ಯ ಕಾಲವನ್ನು ತಾವೇ ನಿರ್ಣಯಿಸಬಹುದು. ದಕ್ಷಿಣಾಯನ ಕಾಲ ಮರಳಿ ಉತ್ತರಾಯಣ ಪುಣ್ಯ ಕಾಲಕ್ಕಾಗಿಕಾದರು. ಏಕಾದಶಿ ದಿನ ದೇಹ ತ್ಯಾಗ ಮಾಡಲು ನಿರ್ಣಯಿಸಿದರು, ೫೮ ದಿನಗಳ ಕಾಲ ಶರಶಯ್ಯ ಮೇಲೆ ಶ್ರೀಕೃಷ್ಣನ ಧ್ಯಾನ ಮಾಡುತ್ತ ಕಾಲ ಕಳೆದರು. ಧರ್ಮರಾಜ ಸಹೋದರನೊಡನೆ,ಶ್ರೀಕೃಷ್ಣನ ಜೊತೆ ಭೀಷ್ಮ ರನ್ನು ನೋಡಲು ಬಂದರು.ಧರ್ಮರಾಜರು ಧರ್ಮ ಸಂದೇಹಗಳು ಮತ್ತು ಧರ್ಮದ ಆಚರಣೆ ಬಗ್ಗೆ ಭೀಷ್ಮ ಪಿತಾಮಹರನ್ನು ಬೋಧಿಸಲು ಬೇಡಿಕೊಂಡರು. ವಿಷ್ಣು ಸಹಸ್ರನಾಮವನ್ನು ಧರ್ಮರಾಜರಿಗೆ ಉಪದೇಶ ಮಾಡಿದರು. ಭಗವಂತನಾದ ಶ್ರೀಕೃಷ್ಣನ ಎದುರು ವಿಷ್ಣು ಸಹಸ್ರನಾಮ ಉಪದೇಶ ಮತ್ತು ಶ್ರೀಕೃಷ್ಣನ ಆಮೋದ ಒಂದು ವಿಶೇಷ ಘಟನೆ. ಧರ್ಮರಾಜರು ಭೀಷ್ಮರನ್ನು ಕೆಲವು ಪ್ರಶ್ನೆ ಕೇಳಿದರು.ಯಾರನು ಪೂಜೆ ಮಾಡಬೇಕು? ಸ್ತುತಿಸಬೇಕು? ಅರ್ಚನೆ ಮಾಡಬೇಕು? ಯಾವ ಕರ್ಮದಿಂದ ಮಾನವರಿಗೆ ಶುಭವಾಗುವುದು, ಎಲ್ಲ ಧರ್ಮಗಳಲ್ಲಿ ಉತ್ತಮವಾದ ಧರ್ಮ ಯಾವುದು? ಯಾವ ಜಪದಿಂದ ಮನುಷ್ಯ ಸಂಸಾರ ಬಂಧಗಳಿಂದ ವಿಮುಕ್ತಿ ಹೊಂದುವರು?

**ಭೀಷ್ಮಪಿತಾಮಹ ನುಡಿದರು**

ತಸ್ಯ ಲೋಕ ಪ್ರಧಾನಸ್ಯ ಜಗನ್ನಾಥಸ್ಯ ಭೂಪತೇ
ವಿಷ್ಣೋರ್ನಾಮ ಸಹಸ್ರಂ ಮೇ ಶ್ರುಣುಪಾಪ ಭಯಾಪಹಂ॥

ಪಾಪ ಮತ್ತು ಸಂಸಾರ ಭಯವನ್ನು ಹೋಗಲಾಡಿಸುವ ಜಗದ ಒಡೆಯ ಭಗವಾನ್ ಶ್ರೀ ವಿಷ್ಣುವಿನ ಸಾವಿರ (ಸಹಸ್ರ) ನಾಮಗಳನ್ನು ಹೇಳುತ್ತೇನೆ.

ಜಗತ್ಪ್ರಭುಂ ದೇವದೇವ ಮನಂತಂ ಪುರುಷೋತ್ತಮಂ ।
ಸ್ತುವನ್ನಾಮ ಸಹಸ್ರೇಣ ಪುರುಷಃ ಸತತೋತ್ಥಿತ ಃ
ಅನಾದಿ ನಿಧನಂ ವಿಷ್ಣುಂ ಸರ್ವಲೋಕ ಮಹೇಶ್ವರಂ
ಲೋಕಾಧ್ಯಕ್ಷಂ ಸ್ತುವನ್ನಿತ್ಯಂ ಸರ್ವ ದುಃಖಾತಿಗೋ ಭವೇತ್

ಆದಿಅಂತ್ಯವಿಲ್ಲದ, ಸರ್ವವ್ಯಾಪ್ತನಾದ ದೇವ ದೇವನಾದ ಭಗವಂತ ಶ್ರೀ ಮಹಾವಿಷ್ಣು ಸ್ತುತಿಯಿಂದ ಸರ್ವ ದುಃಖ ಪರಿಹಾರ ಆಗುವುದು

ಏಷ ಮೇ ಸರ್ವ ಧರ್ಮಾಣಾಂ ಧರ್ಮೋಧಿಕ ತಮೋಮತಃ
ಯದ್ಭಕ್ತ್ಯಾ ಪುಂಡರೀಕಾಕ್ಷಂ ಸ್ತವೈರರ್ಚೇನ್ನರಃ ಸದಾ

ಯಾವ ಭಕ್ತನು ತನ್ನ ಹೃದಯ ಕಮಲದಲ್ಲಿ ಕಮಲನಯನ ಶ್ರೀ ವಾಸುದೇವನನ್ನು ಭಕ್ತಿ ಪೂರ್ವಕವಾಗಿ ಯಾವಾಗಲೂ ಸ್ತುತಿ, ಅರ್ಚನೆ ಮಾಡುತ್ತಾನೋ ಆ ವಿಧಿರೂಪೀ

ಸಂಪೂರ್ಣ ಧರ್ಮಗಳಲ್ಲಿ ನಾನು ಇದೇ ಧರ್ಮವನ್ನು ಎಲ್ಲಕ್ಕಿಂತ ದೊಡ್ಡದೆಂದು ಭಾವಿಸುತ್ತೇನೆ.

"ವಿಶ್ವಂ ವಿಷ್ಣುರ್ವಷಟ್ಕಾರೋ ಭೂತಭವ್ಯಭವತ್ಪ್ರಭುಃ

ಭೂತಕೃದ್ಭೂತ ಭೃದ್ಭಾವೋ ಭೂತಾತ್ಮಾ ಭೂತಭಾವನಃ

ನಡೆದ ಕಾಲಕೆ, ನಡೆಯುತ್ತಿರುವ ಕಾಲದಲ್ಲಿ, ಮುಂಬರುವ ಕಾಲಕೆ ಪ್ರಭು ಶ್ರೀಹರಿ ಶ್ರೀ ಹರಿ ಎಲ್ಲ ಭೂತಗಳ ಸೃಷ್ಟಿಸಿ, ಪೋಷಣೆ ಮಾಡುತ ಭಾರವ ಹೊತ್ತು ಜೀವಿಗಳಲ್ಲಿ ಇರುವರು. ವಿಷ್ಣು ಸಹಸ್ರನಾಮ ಪಾರಾಯಣ ಪರಮ ಪುಣ್ಯಕರ, ಅಕ್ಷಯ ಪ್ರದಾಯಕ ಆದರೆ ಸಮಯ ಅಭಾವ ಅಥವಾ ಬೇರೆ ಕಾರಣಗಳಿಂದ ಪಾರಾಯಣ ಆಗದಿದ್ದರೆ ಏನು ಉಪಾಯ? ಈ ಪ್ರಶ್ನೆ ಪಾರ್ವತಿದೇವಿ ಪರಮೇಶ್ವರರನ್ನು ಕೇಳಿದರು.

ಕೇನೋಪಾಯೇನ ಲಘುನಾ ವಿಷ್ಣೋ ರ್ನಾಮಸಹಸ್ರಕಮ್ ಪಠ್ಯತೆ
ಪಂಡಿತೈರ್ನಿತ್ಯಂ ಶ್ರೋತುಮಿಚ್ಛಾಮ್ಯಹಮ್ ಪ್ರಭೋ

ಸಾವಿರ ನಾಮಗಳ ಪಠನೆ ಕಷ್ಟವಾದಲ್ಲಿ ತ್ವರಿತವಾಗಿ ಫಲ ಕೊಡುವ ಪಂಡಿತರಿಂದ ಉಚ್ಚರಿಸುವ ನಾಮ ಹೇಳಿ ಎಂದು ಪಾರ್ವತಿದೇವಿ ಕೇಳಿದರು.

"ಶ್ರೀ ರಾಮ ರಾಮೇತಿ ರಮೇ ರಾಮೇ ಮನೋರಮೇ, ಸಹಸ್ರ ನಾಮ ತತ್ತುಲ್ಯಮ್ ರಾಮ ನಾಮ ವರಾನನೇ"

"ಶ್ರೀ ರಾಮ ರಾಮ ರಾಮ" ಎಂದು ಒಂದೊಂದು ಸಲ ನುಡಿದಾಗ ಸಾವಿರ ಸಲ ವಿಷ್ಣು ಸಹಸ್ರನಾಮ ಉಪಾಸನೆಯ ಫಲ ಸಿಗುವುದು ಎಂದು ಪರಮೇಶ್ವರ ಆಶ್ವಾಸನೆ ನೀಡಿದರು.

ವಿಷ್ಣು ಸಹಸ್ರನಾಮ ಕರ್ತ ಶ್ರೀಭೀಷ್ಮಾಚಾರ್ಯರು. ಮಾಘ ಶುದ್ಧ ಏಕಾದಶಿಯಂದು ವಿಷ್ಣು ಸಹಸ್ರನಾಮ ಸ್ತೋತ್ರವನ್ನು ಉಚ್ಚರಿಸಿದರು. ಭಗವಂತನ ಎದುರು ಸ್ತೋತ್ರ ಮಾಡುವ ಭಾಗ್ಯ ಶ್ರೀಭೀಷ್ಮಾಚಾರ್ಯರದು. ಜಗತ್ತಿಗೆ ನೀತಿ, ಧರ್ಮ ಹರಿಬೋಧನೆ ಮತ್ತು ವಿಷ್ಣು ಸಹಸ್ರನಾಮ ಕೊಟ್ಟಿರುವರು ಶ್ರೀ ಭೀಷ್ಮಾಚಾರ್ಯರು.

**ಭೀಷ್ಮ ಪಿತಾಮಹರ ನಿರ್ವಾಣ:**

ಕುರುಕ್ಷೇತ್ರ ಯುದ್ಧದ ನಂತರ ಏಕಾದಶಿ ಘಳಿಗೆ ಬರುವವರೆಗೂ ಶರಶೆಯ್ಯ ಮೇಲೆ ದೈವಪ್ರಾರ್ಥನೆ ಮಾಡುತಲಿದ್ದರು ಭೀಷ್ಮಾಚಾರ್ಯರು.

ಏಕಾದಶಿ ಘಳಿಗೆ ಬಂತು.ಹಸ್ತಿನಾಪುರದಿಂದ ಧೃತರಾಷ್ಟ್ರರು,ಪಾಂಡವರು, ಶ್ರೀಕೃಷ್ಣ ಪರಮಾತ್ಮ ಭೀಷ್ಮರ ಬಳಿ ಬಂದರು.ಧರ್ಮರಾಜರು ಎಲ್ಲರಿಗೂ ಪ್ರಣಾಮ ಸಲ್ಲಿಸಿದರು. ಭೀಷ್ಮರು ಧರ್ಮರಾಜ ಪಟ್ಟಾಭಿಷೇಕಗೊಂಡು ಮಂತ್ರಿಯೊಡನೆ ನೋಡಿ ಅಭಿನಂದಿಸಿ ಆಶೀರ್ವಚನ ನೀಡಿದರು. ಭೀಷ್ಮಾಚಾರ್ಯರ ಪ್ರಾಣ ಹೋಗುತ್ತಿರುವಾಗ ಬಾಣಗಳು ಬಹಿರ್ಗತವಾಗಿ, ಶರೀರದಲ್ಲಿ ಇರುವ ಗಾಯಗಳೆಲ್ಲ ಮಾಯ ವಾದವು. ಭೀಷ್ಮ ಪಿತಾಮಹ ಭಗವಂತನಲ್ಲಿ ಐಕ್ಯವಾದರು. ಪಾಂಡವರು ಚಿತಿ ಏರ್ಪಡಿಸಿ ಭೀಷ್ಮಾಚಾರ್ಯರ ದಹನ ಸಂಸ್ಕಾರ ಮಾಡಿದರು.ಗಂಗಾ ಜಲದಿಂದ ಜಲಾಂಜಲಿ ಅರ್ಪಿಸಿ ನಮಸ್ಕಾರ ಮಾಡಿಕೊಂಡರು. ಗಂಗೆ ಉಪಸ್ಥಿತರಾಗಿ ಪುತ್ರ ಶೋಕದಲ್ಲಿ ವಾಸುದೇವರನ್ನು ನಮಸ್ಕರಿಸಿದರು. ವಾಸು ದೇವರು, ವೇದವ್ಯಾಸರು ಗಂಗೆಯ ಸಮೀಪ ಬಂದು ಗಂಗಾ ಪುತ್ರ ಭೀಷ್ಮ ಗಾಂಗೇಯ ಉತ್ತಮಗತಿ ಹೊಂದಿರುವರು. ಚಿಂತಿಸಬೇಡ ! ಎಂದು ಆಶ್ವಾಸನೆ ನೀಡಿದರು. ಎಲ್ಲರೂ ಮರಳಿ ಹಸ್ತಿನಾಪುರಕ್ಕೆ ಹೊರಟರು. ಈ ರೀತಿ ಅಷ್ಟ ವಸುವು ಆದ ದೇವವ್ರತ, ಗಾಂಗೇಯ, ಭೀಷ್ಮಾಚಾರ್ಯ ಎಂದು ಕರೆಯುವ ಮಹಾ ಪುರುಷ ಧರ್ಮಾತ್ಮ, ಪಿತೃವಾಕ್ಯ ಪರಿಪಾಲಕ, ವೀರರ ಅಂತ್ಯವಾಗಿ ಮರಳಿ ಸ್ವರ್ಗಕ್ಕೆ ಸೇರಿದರು.

**ಏಕಾದಶಿ ವ್ರತ ಆಚರಣೆ :**

ಮಾಘ ಶುಕ್ಲ ಏಕಾದಶಿಯನ್ನು ಭೀಷ್ಮ ಏಕಾದಶಿ ಎಂದು ಕರೆಯುವರು. ಏಕಾದಶಿಯಂದು ಉಪವಾಸ,ಗೀತಾ ಪಾರಾಯಣ, ವಿಷ್ಣು ಸಹಸ್ರನಾಮ, ತುಳಸಿ ತೀರ್ಥಸೇವನೆ ಮತ್ತು ಹರಿಸ್ಮರಣೆ ಮಾಡುವುದರಿಂದ ಶ್ರೀಹರಿಯ ಕೃಪಾಕಟಾಕ್ಷ ಲಭಿಸುವುದು. ಭೀಷ್ಮಾಚಾರ್ಯರು ಅಂತಹ ಮಹಾಪುರುಷರು ಏಕಾದಶಿ ತಿಥಿಯನ್ನು ಗುರುತಿಸಿ,ವಿಷ್ಣು ಸಹಸ್ರನಾಮ ಪಾರಾಯಣ ಮಾಡಿ ಭಗವಂತನಲ್ಲಿ ಐಕ್ಯರಾದರು. ಶ್ರೀ ಹರಿಯ ಸೇವೆಯಲ್ಲಿ ಅಕ್ಷಯ ಫಲ ಕೊಡುವ ವ್ರತ ಏಕಾದಶಿ ವ್ರತ. ಏಕಾದಶಿಯಲ್ಲಿ ದಿನ ಷೋಡಶೋಪಚಾರ ಪೂಜೆ ಮಾಡಿ ದ್ವಾದಶಿ ಘಳಿಗೆಯಲ್ಲಿ ಭಕ್ಷ್ಯಗಳನ್ನು ನಿವೇದನೆ ಮಾಡಿ ವಿಷ್ಣು ಪಾರಾಯಣ ಮಾಡಬೇಕು. ಮಂತ್ರವ ಉಚ್ಚರಿಸಿ -


"ಏಕಾದಶ್ಯಾಮ್ ನಿರಾಹಾರೋ ಭೂತ್ವಾಹ ಮಪರೇಹನಿ
ಭೋಕ್ಷ್ಯಾಮಿ ಪುಂಡರೀಕಾಕ್ಷ ಶರಣಂ ಮೇ ಭಾವಚ್ಯುತಾ"

ಶ್ರೀಹರಿಗೆ ಪುಷ್ಪವನ್ನು ತುಳಸಿಯನ್ನು ಸಮರ್ಪಣೆ ಮಾಡಬೇಕು. ಪರಮ ಹರಿಭಕ್ತರಾದ ಶ್ರೀ ಭೀಷ್ಮಾಚಾರ್ಯರಿಗೆ ವಂದನೆ ! ಲೋಕೋದ್ಧಾರಕ, ಧರ್ಮಪರಿಪಾಲಕ ಶ್ರೀಹರಿಗೆ ಸಾಷ್ಟಾಂಗ ವಂದನೆ! ಆತ್ಮನಿವೇದನೆ.

ಮಂಗಳಂ ಭಗವಾನ್ ವಿಷ್ಣು ಮಂಗಳಂ ಗರೂಡದ್ವಜ

ಮಂಗಳಂ ಪುಂಡರೀಕಾಕ್ಷ ಮಂಗಳಾಯ ತನೋ ಹರಿ

ಶ್ರೀ ಕೃಷ್ಣಾರ್ಪಣಮಸ್ತು



# ದಾಸರೆಂದರೆ ಪುರಂದರದಾಸರಯ್ಯ

– ಶ್ರೀ ಕರಿಗಿರಿ ಗೋಪಾಲಕೃಷ್ಣ

ಶ್ರೀ ಪುರಂದರದಾಸರು ದೈವಾಂಶ ಸಂಭೂತರು. ಶ್ರೀ ಹರಿಯ ಅಜ್ಞಪ್ತರಾಗಿ ಈ ಭೂವಿಯಲ್ಲಿ ಅವತರಿಸಿ ಸಾತ್ವಿಕರಾದ, ಯೋಗ್ಯರಾದ ಅಜ್ಞ ಜನರಿಗೆ ಪ್ರಾಕೃತ ಭಾಷೆಯಲ್ಲಿ ಸರಳವಾಗಿ ವೇದಾಂತದ ತತ್ವವನ್ನು ಸಾಮಾನ್ಯರಿಗೆ ಅರ್ಥವಾಗುವ ರೀತಿಯಲ್ಲಿ ಹಾಗೂ ಸಮಾಜದ ಅಂಕುಡೊಂಕನ್ನು ಪದ,ಪದ್ಯದ ಮುಖಾಂತರ ತಿದ್ದಿ ತಿಳಿ ಹೇಳಿ ಸ್ವಾಸ್ಥ್ಯವನ್ನು ಕಾಪಾಡಲು ಹುಟ್ಟಿದ ಅವತಾರ ಪುರುಷರು.

### ಇವರ ಜನ್ಮಜನ್ಮಾಂತರದ ವೃತ್ತಾಂತ

ಹಿಂದೆ ಕಳೆದು ಹೋದ ಬ್ರಹ್ಮಕಲ್ಪದಲ್ಲಿ ಗಂಧರ್ವರಿಗೆ ಸಮ್ಮತವಾದ ಉಪಬರ್ಹಣ ನಾಮಕ ಗಂಧರ್ವಲೀರ್ವರು ರೂಪ, ಅಂಗಮಾರ್ಧವ, ಸೌಂದರ್ಯ ಇದರಿಂದ ಕೂಡಿ ಸುಂದರವಾಗಿದ್ದರು. ಇದರಿಂದ ಸ್ತ್ರೀಯರಿಗೆ ತುಂಬಾ ಪ್ರೀತಿ ಪಾತ್ರರಾಗಿದ್ದರು. ದಕ್ಷ ಮೊದಲಾದ ಪ್ರಜೇಶ್ವರರ ಸತ್ರಯಾಗದಲ್ಲಿ ಸ್ತ್ರೀ ಪರಿವಾರವನ್ನು ಕರೆದುಕೊಂಡು ಹೋಗಿ ಹಾಡಿದ್ದರು. ಇದು ಪ್ರಜೇಶ್ವರರಿಗೆ ತೋರಿದ ಅವಜ್ಞೆ ಎಂದು ಭಾವಿಸಿ ಅವರು ಶಾಪ ಕೊಟ್ಟರು. ಇದನ್ನು ನಾರದರೇ ಸ್ವತಃ ಧರ್ಮರಾಜನಿಗೆ ಶ್ರೀ ಮದ್ಭಾಗವತ ಸಪ್ತಮಸ್ಕಂಧದ ಹದಿನಾರನೇ ಅಧ್ಯಾಯದಲ್ಲಿ ಹೇಳಿರುವರು.

ಹಿಂದಿನ ಬ್ರಹ್ಮಕಲ್ಪದಲ್ಲಿ ದಕ್ಷ ಪ್ರಜೇಶ್ವರರು ಕೊಟ್ಟ ಶಾಪದಂತೆ ಈ ಬ್ರಹ್ಮಕಲ್ಪದಲ್ಲಿ ಒಬ್ಬ ದಾಸಿಯ ಮಗನಾಗಿ ಹುಟ್ಟಿದೆ. ಇದು ಎರಡನೇ ಜನ್ಮ, ತಾಯಿ ಸಾತ್ವಿಕಳು, ಹರಿ ಭಕ್ತಳು. ಜ್ಞಾನಿವಿಪ್ರರ ಮನೆಯಲ್ಲಿ ಸದಾಕಾಲ ಕೆಲಸ ಮಾಡುತ್ತಿದ್ದಳು. ಹರಿ ಭಕ್ತರಾದ ಸನ್ಯಾಸಿಗಳು ಚಾತುರ್ಮಾಸದಲ್ಲಿ ಆ ಊರಿನಲ್ಲಿ ಸಂಕಲ್ಪಕ್ಕೆ ಕುಳಿತರು. ಅವರ ಸೇವೆಗೆ ನನ್ನನ್ನು ನಿಯೋಜಿಸಿದರು. ಆಗ ನನಗೆ ಐದು ವರ್ಷ ವಯಸ್ಸು. ಆ ಯತಿಗಳು ಅಪರೋಕ್ಷ ಜ್ಞಾನಿಗಳು, ಶಮ, ದಮ ಸಂಪನ್ನರು, ಶಾಂತಚಿತ್ತರು, ಅವರು ಊಟ ಮಾಡಿದ ಪಾತ್ರೆ ತೊಳೆದು ಗೋಮಯ ಲೇಪನ ಮಾಡಿ, ಅವರ ಭೋಜನ ಮಾಡಿದ ಮೇಲೆ ಅವರ ಅನುಮತಿಯಿಂದ ನಾನು ಊಟ ಮಾಡುತ್ತಿದ್ದೆನು. ಬೇರೆ ಯಾವುದರಲ್ಲಿಯೂ ನನಗೆ ಆಸಕ್ತಿ ಇರಲಿಲ್ಲ. ಅವರು ಹೇಳುವ ಹರಿಕಥೆ, ಉಪದೇಶವನ್ನು ನಾನು ಕೂಡ ಶ್ರದ್ಧಾ ಭಕ್ತಿಯಿಂದ ಕೇಳುತ್ತಿದ್ದೆ. ಚಾತುರ್ಮಾಸ ಮುಗಿದ ಮೇಲೆ ಆ ಯತಿಗಳು ಹೊರಡುವ ಮುನ್ನ ನನಗೆ ರಹಸ್ಯವಾದ ಭಗವಂತನ ಧ್ಯಾನವನ್ನು ಉಪದೇಶಿಸಿದರು. ಅದನ್ನೇ ಮನನ ಮಾಡುತ್ತಿದ್ದೆ. ಒಮ್ಮೆ ನನ್ನ ತಾಯಿಯು ಹಾಲು ಕರೆಯಲು ಹೋಗಿ ಹಾವಿನಿಂದ ಕಚ್ಚಿಸಿಕೊಂಡು ಪ್ರಾಣಬಿಟ್ಟಳು. ನಾನು ಅನಾಥನಾದೆ. ಹರಿಯನ್ನು ಕಾಣುವ ಉತ್ಕಟವಾದ ಆಸೆಯಿಂದ ಉತ್ತರ ದಿಕ್ಕಿಗೆ ಹೊರಟೆ. ಕಾಡು-ಮೇಡು,ಊರುಗಳನ್ನು ದಾಟಿ ಗೊಂಡಾರಣ್ಯಕ್ಕೆ ಬಂದೆ,ಆಯಾಸ ಮತ್ತು ದಾಹದಿಂದ ಹರಿಯುವ ನೀರಿನಲ್ಲಿ ಮಿಂದು ನೀರು ಕುಡಿದು ಧ್ಯಾನಕ್ಕೆ ಕುಳಿತೆ ಮಿಂಚಿನಂತೆ ಹರಿಯು ಹೃದಯದಲ್ಲಿ ದರುಶನ ಕೊಟ್ಟು ಮರೆಯಾದ ಪುನಃ ಪುನಃ ಕಾಣಲು ಕಣ್ಣು ಮುಚ್ಚಿ ಕುಳಿತೆ ಪ್ರಯೋಜನವಾಗಲಿಲ್ಲ. ಸಂಕಟದಿಂದ ಹೊರಳಾಡಿದೆ. ಆಗ ಅಶರೀರವಾಣಿಯಲ್ಲಿ ಹರಿಯು ಮಾತನಾಡಿದ "ಈ ಜನ್ಮದಲ್ಲಿ ಇಷ್ಟೇ ಮುಂದೆ ಉತ್ತಮವಾದ ಜನ್ಮ ಪಡೆಯುವೆ" ಎಂದು ಹೇಳಿದ. ಇದನ್ನು ಸ್ವತಃ ನಾರದರೇ ಶ್ರೀವೇದವ್ಯಾಸರಿಗೆ ಶ್ರೀಮದ್ಭಾಗವತ ಪ್ರಥಮ ಸ್ಕಂಧ ಆರನೇ ಅಧಾಯ್ಯದಲ್ಲಿ ಹೇಳಿರುವರು.

### ನಾರದರಾಗಿ ಅವತಾರ:

ಪ್ರಳಯ ಕಳೆದು ಹರಿ ಆಜ್ಞೆಯಂತೆ ಬ್ರಹ್ಮದೇವರು ಜಗತ್ತನ್ನು ಸೃಷ್ಟಿಮಾಡಿದರು. ಅವರ ತೊಡೆಯಿಂದ ನಾರದರನ್ನು ಸೃಷ್ಟಿಸಿದರು. ಉಪಬರ್ಹಣನು ನಾರದರಾದರು. ಪಾಪಗಳನ್ನು, ಭಯಗಳನ್ನು, ಪರಿಹರಿಸುವ ನಾರಾಯಣನ ಕಥೆಯನ್ನು ಯಾವಾಗಲೂ ಗಾನ ಮಾಡುತ್ತ ಸುಜೀವರ ಅಜ್ಞಾನವನ್ನು ನಾಶ ಮಾಡುವವರು ನಾರದರು. ಹರಿಯಿಂದ ಉಪದಿಷ್ಟವಾದ ಭಾಗವತವನ್ನು ಬ್ರಹ್ಮದೇವರು ನಾರದರಿಗೆ ಉಪದೇಶಿಸಿದರು. ಇದೇ ಚತುಃಶ್ಲೋಕಿ ಭಾಗವತ. ಇದನ್ನೇ ಶ್ರೀ ವೇದವ್ಯಾಸರ ಮುಂದೆ ನಾರದರು ಆರುಹಿದುದು. ಶ್ರೀಹರಿಯನ್ನು ಪ್ರಸನ್ನಿಕರಿಸಿಕೊಂಡ ನಾರದರು ಹದಿನಾಲ್ಕು ಲೋಕಗಳಲ್ಲಿ ಸಂಚರಿಸುವ, ಒಳ ಹೊರಗು ದೇವರನ್ನು ಕಾಣಬೇಕೆಂದಾಕ್ಷಣ ಕಾಣುವ, ಹರಿಯ ಮಹಿಮೆಯನ್ನು ಹದಿನಾಲ್ಕು ಲೋಕಗಳಲ್ಲಿ ಕೊಂಡಾಡಿ ಪ್ರಸಿದ್ಧಿ ಪಡಿಸುವ, ವರಗಳನ್ನು ಹರಿಯು ದಯಪಾಲಿಸಿ ಮಹತಿ ಎಂದು ಕರೆಯುವ, ದೇವರಿಂದ ದತ್ತವಾದ ಪ್ರಯುಕ್ತ ದೇವದತ್ತ ಎಂಬ ವೀಣೆಯನ್ನು ನಾರದರಿಗೆ ಕೊಟ್ಟು ಹರಿಯು ಅನುಗ್ರಹಿಸಿದನು.

ದೃಶದ್ವತಿ ನದೀ ತೀರದಲ್ಲಿ ವಿಷ್ಣುಮನಾ ಎಂಬ ಬ್ರಾಹ್ಮಣನ ಮಗನಾಗಿ ವಿಷ್ಣುರತಿ ನಾಮಕನಾಗಿ ನಾರದರು ಹುಟ್ಟಿದರು. ಯಾವಾಗಲೂ ಗಾನದಲ್ಲೇ ಆಸಕ್ತರಾಗಿ ರಾಜಾಸ್ಥಾನಗಳಿಗೆ ಹೋಗಿ ಗಾನಮಾಡಿ ಉದರಂಭರಣ ಮಾಡುತ್ತಿದ್ದರು. ತಂದೆಯ ಆಗ್ರಹದಿಂದ ಅದನ್ನು ಬಿಟ್ಟು ವಿಷ್ಣು ಭಕ್ತಿಯಿಂದ ಹರಿಯ ಮಹಿಮೆಯನ್ನು ಗಾಯನ ಮಾಡುತ್ತಿದ್ದರು. ಬದರಿಗೆ ಹೋಗಿ ಬದರೀ ನಾರಾಯಣನನ್ನು ಸ್ತುತಿಸಿದರು. ನಾರಾಯಣನು ಪ್ರತ್ಯಕ್ಷವಾಗಿ ಪುನಃ ನಾರದರಾಗಲು ಅನುಗ್ರಹಿಸಿದನು. ಹೀಗೆ ಶಾಪದಿಂದ ಬಂದ ದೇಹವನ್ನು ಬಿಟ್ಟು ಪುನಃ ನಾರದ ರೂಪವನ್ನು ಸೇರಿ ಹರಿ ಸೇವೆಯನ್ನು ಮಾಡುತ್ತಿದ್ದರು.

ನಾರದರಿಗೆ ಮನುಷ್ಯನಾಗಿ ಹುಟ್ಟುವ ಪ್ರಾರಬ್ಧ ಕರ್ಮವಿತ್ತು ಹುಟ್ಟಿದಾಗ ಪರಮಾತ್ಮನ ವಿಷಯದಲ್ಲಿ ಭಕ್ತಿ ಅಚಲವಾಗಿರಲಿ, ಪರಮಾತ್ಮನ ಪ್ರೀತಿ ಸ್ಥಿರವಾಗಿರಲಿ ಪರಮಾತ್ಮನ ಸೇವೆ ಅನನ್ಯ ವಾಗಿರಲಿ, ಪುನಃ ಸೃಷ್ಟಿಗೆ ಬರದೆ ಪರಮಾತ್ಮನ ಲೋಕವನ್ನು ಹೊಂದಲಿ ಎಂಬುವುದಾಗಿ ಶ್ರೀ ಕೃಷ್ಣಪರಮಾತ್ಮನನ್ನು ಭಕ್ತಿಯಿಂದ ಬೇಡಿದ ನಾರದರಿಗೆ ಪ್ರಸನ್ನಚಿತ್ತನಾಗಿ ಇವೆಲ್ಲವನ್ನು ಶ್ರೀಕೃಷ್ಣನು ಅನುಗ್ರಹಿಸಿದನು. ಹೀಗಾಗಿ ನಾರದರು ಪುರಂದರದಾಸರಾಗಿ ಅವತರಿಸಿದರು.

ನಾರದರೇ ಪುರಂದರದಾಸರೆಂಬುವುದಕ್ಕೆ ಶ್ರೀವೇದವ್ಯಾಸದೇವರ ಗರುಡ, ಬೃಹನ್ನಾರದೀಯ, ಹರಿವಂಶ ಪುರಾಣಗಳಲ್ಲಿ ಹೇಳಿರುವರು. ಇದನ್ನು ಅನುಮೋದಿಸಿ ಶ್ರೀ ವಾದಿರಾಜರು. ಶ್ರೀಮಧ್ವಪತಿದಾಸರು, ಶ್ರೀಕನಕದಾಸರು, ವಿಜಯದಾಸರು ಮುಂತಾದವರು ಪದ ಪದ್ಯದಲ್ಲಿ ಹೇಳಿರುವರು.

### ಕನ್ನಡ ನಾಡಿನ ವೈಶಿಷ್ಟ್ಯ:

ಉತ್ಪನ್ನಾದ್ರಾವಿಡೆ ಸಾಹಂವೃದ್ಧಿಂ ಕರ್ನಾಟಕೇಗತಾ ಭಕ್ತರಮನೀಯ ಹುಟ್ಟಿದ್ದು ದ್ರಾವಿಡ ದೇಶದಲ್ಲಿ ಯೌವ್ವನ ಹೊಂದಿದ್ದು ಕರ್ನಾಟಕದಲ್ಲಿ ಎಂಬ ಮಾತು ಪದ್ಮಪುರಾಣದಲ್ಲಿದೆ. ಹೀಗಾಗಿ ವಾಯುದೇವರು ಹನುಮಂತನಾಗಿ ಮಧ್ವಾಚಾರ್ಯರಾಗಿ ಅವತರಿಸಿದ್ದು ಇದೇ ಕರ್ನಾಟಕದಲ್ಲೇ, ಮಾಧವ, ಅಕ್ಷೋಭ್ಯ, ಜಯತೀರ್ಥ, ರಾಜೇಂದ್ರ, ವ್ಯಾಸರಾಜ, ವಾದಿರಾಜ, ವಿಜಯೀಂದ್ರ ಮುಂತಾದ ಯತಿಶ್ರೇಷ್ಟರು, ಪುರಂದರ, ವಿಜಯ, ಗೋಪಾಲ, ಜಗನ್ನಾಥ ಮುಂತಾದ ದಾಸರಾಯರು. ಈ ಪುಣ್ಯ ಪುರುಷರನ್ನು ಜಗತ್ತಿಗೆ ನೀಡಿದ ಕೀರ್ತಿ ಈ ನಮ್ಮ ಕನ್ನಡ ನಾಡಿನದು. ಈ ನೆಲದಲ್ಲೇ ಮಾನವ ರೂಪದ ಈ ದೇವತೆಗಳು ಮೊದಲು ಓಡಾಡಿದರು. ಮತ್ತೆ ಈ ನೆಲದಲ್ಲಿಯೇ ಹುಟ್ಟಿ ಬೆಳೆದರು. ಈ ನೆಲದಲ್ಲೇ ತಮ್ಮ ತತ್ವಜ್ಞಾನದ ತುತ್ತೂರಿಯನ್ನು ಊದಿದರು. ಮಠಗಳನ್ನು ದಾಸ ಕೂಟವನ್ನು ಸ್ಥಾಪಿಸಿದರು. ಮತ ಪ್ರಚಾರವು ಬೀಜಕ್ಷೇಪವಾದದ್ದು ಈ ನಾಡಿನಲ್ಲೇ ಈ ಪ್ರಶಸ್ತವಾದ ನಾಡಿನಲ್ಲೇ ನಮ್ಮ ಕಥಾನಾಯಕರಾದ ನಾರದಾಂಶ ಸಂಭೂತರಾದ ಶ್ರೀಪುರಂದರದಾಸರು ಅವತರಿಸಿದರು.

### ಪುರಂದರದಾಸರಾಗಿ ಅವತಾರ:

ಇವರು ಹುಟ್ಟಿದಾಗ ಇವರ ತಂದೆ ಪುರಂದರ ಎಂದು ನಾಮಕರಣ ಮಾಡಿದರು. ಬೇರೆ ಹೆಸರಿನಿಂದಲ್ಲ ಎಂದು ಶ್ರೀವೇದವ್ಯಾಸರ, ಪುರಂದರದಾಸರ ಮಕ್ಕಳಾದ ಗುರುಪುರಂದರದಾಸರ, ಶ್ರೀವಿಜಯದಾಸರ, ಶ್ರೀಗುರುಜಗನ್ನಾಥದಾಸರ ಮಾತಿನಿಂದ ಸ್ಪಷ್ಟವಾಗುವುದು. ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ಸೇರಿದ ಪುರಂದರಪುರಿ ಎಂಬಲ್ಲಿ ಕ್ರಿ.ಶ. ೧೪೮೦ ರಲ್ಲಿ ವಸಿಷ್ಠ ಗೋತ್ರದ ಆಪಸ್ತಂಭ ಸೂತ್ರದ ಚಿನ್ನ ಭಂಡಾರಿ ಮನೆತನದ ಶ್ರೀ ಕೃಷ್ಣಪ್ಪನಾಯಕರ ವಂಶದಲ್ಲಿ ಬಂದ ಶ್ರೀ ವರದಪ್ಪನಾಯಕ ಹಾಗೂ ಶ್ರೀಮತಿ ರುಕ್ಮೀಣಿದೇವಿ ಎಂಬ ದಂಪತಿಗಳಲ್ಲಿ ಅವತರಿಸಿದರು. ಇವರ ಹೆಸರಿಗೆ ಅನ್ವರ್ಥವಾಗಿತ್ತು. ಇವರ ಸ್ವಭಾವ

ಮತ್ತು ಗುಣ, ಪುರಂದರನಾಯಕ ಹರಿಯಲ್ಲಿ ರಮೀಸುವವನು ಅವನ ಜ್ಞಾನವನ್ನು ದಾನಮಾಡ ತಕ್ಕವನು ಎಂದು ಅರ್ಥ.ಸಣ್ಣ ವಯಸ್ಸಿನಲ್ಲಿಯೇ ದೈವಭಕ್ತಿ.ದಾನಶೀಲತೆಯನ್ನು ಹೊಂದಿದ್ದರು. ಅವರ ತಂದೆ ಮೂರು ಬಾರಿ ಹಣವನ್ನು ಕೊಟ್ಟು ಚಿನಿವಾರ ವ್ಯಾಪಾರದಲ್ಲಿ ತೊಡಗಲು ಹೇಳಿದರು.ಮೂರು ಬಾರಿಯು ಆ ಹಣವನ್ನು ದಾನ ಮಾಡಿದರು. ತಂದೆಗೆ ಸಿಟ್ಟು ಬಂದು ದೇವಸ್ಥಾನದ ಕಂಬಕ್ಕೆ ಕಟ್ಟಿ ಹಾಕಿದರು. ಏಳು ದಿನದ ನಂತರ ಬಂದು ನೋಡಿದರೆ ಮಗನೂ ಆರೋಗ್ಯವಾಗಿ ತೇಜೋಪುಂಡುನಾಗಿದ್ದಾನೆ.ವಿಚಾರಿಸಲಾಗಿ ಹರಿಯು ತನ್ನ ಪತ್ನಿಯರಾದ ರುಕ್ಮೀಣಿ ಸತ್ಯಭಾಮೆಯರಿಗೆ ಅಡುಗೆ ಮಾಡಲು ಹೇಳಿ ತಾನು ದಾಸರಿಗೆ ಊಟ ಮಾಡಿಸಿದ್ದನು. ಇದನ್ನು ಕೇಳಿದ ತಂದೆಗೆ ಮಗನು ಸಾಮಾನ್ಯನಲ್ಲ ಅಪರೋಕ್ಷ ಜ್ಞಾನಿಯೆಂದು ತಿಳಿದು ಅವನ ಪಾಡಿಗೆ ಅವನನ್ನು ಬಿಟ್ಟರು. ಇದರ ಮುಂಚೆ ತಾಯಿಯನ್ನು ಕಳೆದುಕೊಂಡ ಪುರಂದರನಾಯಕರಿಗೆ ಮಲತಾಯಿ ಹಾಲಿಗೆ ವಿಷವನ್ನು ಸೇರಿಸಿ ಕುಡಿಯಲು ಕೊಟ್ಟಳು. ಹಾಲನ್ನು ಕುಡಿದ ನಾಯಕರನ್ನು ಹರಿಯು ಸಂರಕ್ಷಿಸಿದ್ದನು. ತಂದೆಯ ಅಣತಿಯಂತೆ ಉಪವೀತರಾಗಿ ಶಾಸ್ತ್ರ ಮತ್ತು ಸಂಗೀತವನ್ನು ಕಲೆತರು. ಸತ್ಕುಲ ಪ್ರಸೂತೆಯಾದ ಗೌತಮೀ ಎಂಬ ಕನ್ಯೆಯನ್ನು ತಂದು ತಂದೆಯು ಮದುವೆ ಮಾಡಿಸಿದರು. ಆಕೆಯು ಇವರ ಹಾಗೆ ದೈವಭಕ್ತೆ ಮತ್ತು ದಾನ-ಧರ್ಮದಲ್ಲಿ ಶ್ರದ್ಧೆವುಳ್ಳವರಾಗಿದ್ದರು.ತಂದೆಯ ಮರಣಾನಂತರ ಚಿನಿವಾರ ವ್ಯಾಪಾರದಲ್ಲಿ ಮಗ್ನರಾಗಿ ವ್ಯಾಪಾರವನ್ನು ಹತ್ತು ಪಟ್ಟು ವೃದ್ಧಿಸಿ ಆ ದೇಶದಲ್ಲೇ ಬಹಳ ಪ್ರಖ್ಯಾತಿಯನ್ನು ಹೊಂದಿದ್ದರು. ದಾನಶೀಲತೆ ವಿರುದ್ಧವಾಗಿ ಜಿಪುಣಾಗ್ರೇಸರಾಗಿ ಪ್ರಾರಬ್ಧಕರ್ಮದಿಂದ ಬದಲಾದರು. ಇವರಿಗೆ ನಾಲ್ಕು ಜನ ಗಂಡು ಮಕ್ಕಳು ಮತ್ತು ಹೆಣ್ಣು ಮಗಳಾದವರು ಹರಿಯು ಇವರ ಜಿಪುಣತನವನ್ನು ಲೋಕಕ್ಕೆ ತೋರಿಸಿ ನಂತರದಲ್ಲಿ ಇವರ ವೈರಾಗ್ಯವನ್ನು ಪ್ರಕಟಿಸಲು ವೃದ್ಧ ಬ್ರಾಹ್ಮಣನಾಗಿ ಮಗನ ಮುಂಜಿ ಎಂದು ಹಣವನ್ನು ಬೇಡಲು ಇವರ ಬಳಿಗೆ ಬಂದನು. ಚಿಕ್ಕಾಸನ್ನು ಕೊಡದೆ ಕಳಿಸಿದರು. ಹಟಬಿಡದ ಹರಿಯು ಆರು ತಿಂಗಳ ಕಾಲ ಇವರ ಮನೆಗೆ ಅಲೆದನು. ಅವನ ಅಲೆತದಿಂದ ಬೇಸರ ಪಟ್ಟ ನಾಯಕರು ಸವೆದು ಹೋದ ಬಿಡಿ ಕಾಸೊಂದನ್ನು ಕೊಡಲು ಹೋದಾಗ ಹರಿಯು ನಗುತ್ತಾ ಅದನ್ನು ತಿರಸ್ಕರಿಸಿ ಹೊರಟು ಹೋದನು. ನಂತರ ಪುರಂದರನಾಯಕರ ಪತ್ನಿ ಗೌತಮೀ ಬಳಿ ಬಂದು ಬೇಡಿದಾಗ ಮೂಗುತಿಯನ್ನು ಕೊಟ್ಟಳಾಕೆ ಅದನ್ನು ಪುನಃ ದಾಸರ ಬಳಿ ತಂದು ಬೆಲೆ ಕಟ್ಟಿ ಹಣ ಕೊಡೆಂದನು. ಅದು ತಮ್ಮ ಪತ್ನಿಯದೆಂದು ಅನುಮಾನಿಸಿದ ನಾಯಕರು ಅದನ್ನು ಪೆಟ್ಟಿಗೆಯಲ್ಲಿ ತೆಗೆದಿಟ್ಟು ನಂತರದಲ್ಲಿ ಹಣ ಕೊಡುವೆ ಎಂದು ಹೇಳಿ ಕಳುಹಿಸಿದರು. ತಮ್ಮ ಪತ್ನಿಯ ಬಳಿ ಬಂದು ಮೂಗುತಿ ಎಲ್ಲೆಂದರು? ಆಕೆಯ ಮುರಿದಿದೆ ಎಂದು ಹೇಳಿದಳು ಅದನ್ನು ತರಲು ಹೇಳಿದರು. ದಾನವನ್ನು ಕೊಟ್ಟದ್ದು ತಂದು ಕೊಡಲಾಗದೇ ಪ್ರಾಣ ಬಿಡುವುದೇ ಲೇಸೆಂದು ಬಗೆದು ವಿಷವನ್ನು ಕುಡಿಯಲು ಹೋದಾಗ ಕರುಣಾಮಯನಾದ ಶ್ರೀಹರಿಯು ಮೂಗುತಿಯನ್ನು ವಿಷದ ಬಟ್ಟಲಿಗೆ ಹಾಕಿದನು. ಅದನ್ನು ತಂದು ತನ್ನ ಪತಿಗೆ ತೋರಿಸಿದಾಗ ಅದನ್ನು ತೆಗೆದುಕೊಂಡು ಅಂಗಡಿಗೆ ಹೋಗಿ ಪೆಟ್ಟಿಗೆಯಲ್ಲಿ ಇಟ್ಟಿದ್ದ ಮೂಗುತಿ ನೋಡಿದಾಗ ಅದು ಕಾಣೆಯಾಗಿತ್ತು. ಹೆಂಡತಿಯನ್ನು ನಿಜವೇನೆಂದು ಹೇಳು ಎಂದು ಒತ್ತಾಯಿಸಿದರು. ಆಗ ಈ ಮೊದಲು ನಡೆದ ವಿಚಾರ ತಿಳಿಸಿದಳು. ಇದು ಶ್ರೀಹರಿಯ ವ್ಯಾಪಾರ ಎಂದು ತಿಳಿದು ತಕ್ಷಣ ವೈರಾಗ್ಯ ಹೊಂದಿ ತಮ್ಮ ನವಕೋಟಿ ಸಂಪತ್ತನ್ನು ಸತ್ಪಾತ್ರರಿಗೆ ದಾನಮಾಡಿ ಹೆಂಡತಿ ಮಕ್ಕಳನ್ನು ಕರೆದುಕೊಂಡು ಶ್ರೀ ವ್ಯಾಸರಾಜರ ಬಳಿಗೆ ಬಂದರು.

**ಅಂಕಿತ ಪ್ರಧಾನ:**

ಜ್ಞಾನದೃಷ್ಟಿಯಿಂದ ಎಲ್ಲವನ್ನು ತಿಳಿದ ಶ್ರೀವ್ಯಾಸರಾಜ ಗುರುಸಾರ್ವಭೌಮರು ನಾಯಕರನ್ನು ಸಂತೋಷ, ಆದರಿಂದ ಬರಮಾಡಿಕೊಂಡರು.ಶಾಸ್ತ್ರೋಕ್ತವಾಗಿ ಮುದ್ರಧಾರಣೆ ಮಂತ್ರೋಪದೇಶ ಮತ್ತು “ಪುರಂದರವಿಠಲ’ ಎಂಬ ಅಂಕಿತವನ್ನು ಪ್ರಧಾನ ಮಾಡಿದರು ಮತ್ತು ದಾಸರ ನಾಲ್ಕು ಜನ ಗಂಡು ಮಕ್ಕಳಿಗೆ ಕ್ರಮವಾಗಿ ವರದಪುರಂದರವಿಠಲ, ಗುರು ಪುರಂದರ ವಿಠಲ, ಮಧ್ವಪತಿವಿಠಲ ಮತ್ತು ಅಭಿನವ ಪುರಂದರ ವಿಠಲ ಎಂದು ಅಂಕಿತವನ್ನು ಕೊಟ್ಟರು. ದಾಸಕೂಟವನ್ನು ಸ್ಥಾಪಿಸಿ ಶ್ರೀಪುರಂದರದಾಸರನ್ನು ಅಧ್ಯಕ್ಷರನ್ನಾಗಿ ಮಾಡಿ ಭಾಗವತ ಧರ್ಮ ಪ್ರಚಾರ ರಥವನ್ನು ಎಳೆದರು.

ಶ್ರೀ ಪುರಂದರದಾಸರ ಮುಖದಿಂದ ಹೊರಬಿದ್ದ ವಾಣಿ ಎಲ್ಲಾ ವೇದಾರ್ಥಗಳೇ ಆದುವು.ಅಂಕಿತ ಪ್ರದಾನವಾದ ಕ್ಷಣದಿಂದ ಪ್ರಾರಂಭವಾದ ದಾಸರ ಪದ ಪದ್ಯ ಸುಳಾದಿಗಳು ೪.೭೫ ಲಕ್ಷಗಳಾದವು. ಶ್ರೀವ್ಯಾಸರಾಜರಿಂದ ಮಾನ್ಯತೆ ಪಡೆದು ಪುರಂದರೋಪನಿಷತ್ ಎಂದು ಕರೆಯಿಸಿಕೊಂಡಿತು.

ನೀತಿ ಕಥೆ

# ಆಸೆ ಮತ್ತು ದುರಾಸೆ

-ಬಿ.ಆರ್.ಶ್ರೀಕಂಠಯ್ಯ
94494 57684

ಮಕ್ಕಳೆ! ನಿಮಗೆಲ್ಲರಿಗೂ ತಿಳಿದ ಹಾಗೆ, ಆಸೆ ಮತ್ತು ದುರಾಸೆಯ ಫಲ ವಿಭಿನ್ನವಾದುದು. ಆಸೆ ಇರಬೇಕು ಆದರೆ ದುರಾಸೆ ಯಾರಿಗೂ ಇರಬಾರದು ಇದು ಎಲ್ಲರಿಗೂ ಸಹ ಅನ್ವಯಿಸುತ್ತದೆ.ಇಲ್ಲಿರುವ  ಪಂಚತಂತ್ರದ ಕಥೆಯನ್ನು ಕೇಳಿ. ದುರಾಸೆಯ ಫಲವೇನೆಂದು ತಿಳಿಯುತ್ತದೆ.

ಒಂದು ಕೊಳದ ಸಮೀಪದಲ್ಲಿ ಒಬ್ಬ ಬೆಸ್ತ ತನ್ನ ಹೆಂಡತಿಯ ಜೊತೆ ವಾಸವಾಗಿದ್ದ.ದಿನವೂ ಕೊಳದಲ್ಲಿ ಮೀನುಗಳನ್ನು ಹಿಡಿದು, ಅದನ್ನು ಮಾರಿ, ಅದರಿಂದ ಅವನು ತನ್ನ ಜೀವನವನ್ನು ನಡೆಸುತ್ತಿದ್ದ ಒಂದು ದಿನ, ಅವನ ಬಲೆಗೆ ಒಂದು ಸುಂದರವಾದ ದೊಡ್ಡ ಮೀನು ಬಂದು ಸೇರಿ ಕೊಂಡಿತು. ಬೆಸ್ತನು ಅದನ್ನು ತೆಗೆದುಕೊಳ್ಳಲು ಹೋದಾಗ, ಆ ಮೀನು ಮಾತಾಡಿತು.ಬೆಸ್ತ ನಾನು ರಾಣಿ ಮೀನು, ನನ್ನನ್ನು ಕೊಳದಲ್ಲಿ ಬಿಟ್ಟುಬಿಡು.ನೀನು, ಕರೆದಾಗ ನಾನು ಆಚೆ ಬರು ತ್ತೇನೆ. ನಿನ್ನ ಆಸೆಗಳನ್ನು ಪೂರೈಸುತ್ತೇನೆ.

ಮನೆಗೆ ಬಂದು, ತನ್ನ ಹೆಂಡತಿಗೆ ಎಲ್ಲವನ್ನು ತಿಳಿಸಿದನು. ಹೆಂಡತಿ,ರಾಣಿ ಮೀನನ್ನು"ನಮಗೊಂದು ಅರಮನೆ ಕಟ್ಟಿಕೊಡು" ಎಂದು ಕೇಳು.ಅದರಂತೆ, ಬೆಸ್ತ ರಾಣಿ ಮೀನನ್ನು ಕರೆದು ತನ್ನ "ಆಸೆ"ಯನ್ನು ಹೇಳಿದನು. ಅದಕ್ಕೆ ಮೀನು, ಸರಿ ಹೋಗು ನಿನ್ನ ಗುಡಿಸಿಲಿರುವ ಜಾಗದಲ್ಲಿ "ಅರಮನೆ"ಇರುತ್ತದೆ ಎಂದು ಹೇಳಿತು ಬೆಸ್ತ ಬಂದು ನೋಡಿದಾಗ ಅಲ್ಲಿ ಒಂದು ಸುಂದರವಾದ ಅರಮನೆ ಇದ್ದಿತು. ಅರಮನೆಗೆ  ಬಂದ ಬೆಸ್ತನಿಗೆ, ಮನೆಯೊಡತಿ, ಹೋಗು ಮೀನನ್ನು ಕೇಳು, ಎಂದಳು, ಅರಮನೆಯಲ್ಲಿ ಬಾಳಲು ರಾಣಿಯನ್ನಾಗಿ ಮಾಡುವಂತೇ ಕೇಳು ಅದರಂತೆ, ಬೆಸ್ತ ಕೊಳದ ಹತ್ತಿರ ಬಂದು ರಾಣಿ ಮೀನನ್ನು ಕರೆದು ತನ್ನ ಆಸೆಯನ್ನು ಮೀನಲ್ಲಿ ಕೇಳಿದನು. ಇವನ ದುರಾಸೆಗೆ ನಗುತ್ತ ಆಗಲಿ ಹೋಗು, ಎಲ್ಲವೂ ರಾಜನ ಅರಮನೆಯಂತೆ ಇರುತ್ತದೆ. ಆದರೆ, ನೀನು ಯಾವತ್ತು ನನ್ನ ಹತ್ತಿರ ನಿನ್ನ  ಆಸೆಗಳನ್ನು ಹೊತ್ತು ಬರಬೇಡ ಎಂದು ಮೀನು ಕೊಳದೊಳಗೆ  ಹೋಗಿ ಬಿಟ್ಟಿತು.

ಬೆಸ್ತನು, ಅರಮನೆಗೆ ಬರುತ್ತಿದ್ದಂತೆ ನೂರಾರು ಆಳುಗಳು, ಸೇವಕಿಯರು ಕಾಣಿಸಿದರು. ಚಿಂದಿಬಟ್ಟೆ ಉಟ್ಟು ಬಂದ ಬೆಸ್ತ ನನ್ನು, ಅವನು ಯಾರೋ ಭಿಕ್ಷುಕನೆಂದು ಒದ್ದು ಹೊರಗೆ ಹಾಕಿದರು.ಅವನು ನಾನು ಈ ಮನೆಯ ಯಜಮಾನ, ಇತ್ಯಾದಿ ಯಾಗಿ ಹೇಳಿದರು ಕೇಳಲಿಲ್ಲ.ಒಳಗೆ ಹೋಗಿ ನಿಮ್ಮ ರಾಣಿಯನ್ನೇ ಕೇಳಿ ಬನ್ನಿ, ಅವಳೇ ನನ್ನನ್ನು  ಬರಲು ಹೇಳುತ್ತಾಳೆ.  ಅದರಂತೆ, ರಾಣಿಗೆ  ಎಲ್ಲವನ್ನು ವಿವರಿಸಿದರು, ಅವನು ನೋಡಿದರೆ  ಭಿಕ್ಷುಕ ನಂತೆ ಕಾಣುತ್ತಾನೆ ಎಂದಾಗ, ರಾಣಿ ಆಚೆ ಬಂದಾಗ, ಬೆಸ್ತ ಹೇಳುತ್ತಾನೆ, ನಾನು ನಿನ್ನ "ಗಂಡ"ಎಂದಾಗ, ಪೋಷಾಕಿನಲ್ಲಿದ್ದ ರಾಣಿ, "ಏನು ನನ್ನ ಗಂಡನೆ"! ನೀನು ಯಾರೋ ನನಗೆ ತಿಳಿಯದು ಎಂದಳು. ಈ ಭಿಕ್ಷುಕನನ್ನು ಒದ್ದು ಹೊರಗೆ ಹಾಕಿ ಎಂದು ಸೇವಕರಿಗೆ ಆಜ್ಞೆ ಮಾಡಿದಳು. ಅದರಂತೆ ಸೇವ ಕರು ಪಾಲಿಸಿದರು.


ಸೇವಕರಿಂದ ಹೊರದೂಡಲ್ಪಟ್ಟ, ಬೆಸ್ತನು ಬಹಳ ದುಃಖದಿಂದ, ರಾತ್ರಿಯೆಲ್ಲಾ ಒಂದು ಮರದಡಿ ಚಳಿಯಲ್ಲಿಯೇ ಕಳೆದನು. ಬೆಳಗಾದ ನಂತರ ಕೊಳದ ಬಳಿಗೆ ಬಂದು ಬಹಳ ದೈನ್ಯತೆಯಿಂದ, ರಾಣಿ ಮೀನನ್ನು ಕರೆದನು, ಮೀನು ಬಂದು ಕೇಳಿದಾಗ,ಎಲ್ಲವನ್ನು ವಿವರಿಸಿ,ತನಗೆ ಕೊಟ್ಟ ವರವನ್ನು ವಾಪಸ್ಸು ಪಡೆಯಬೇಕೆಂದು ಕೇಳಿಕೊಂಡನು. ಅದರಂತೆ ಮೀನು ಹಿಂದಕ್ಕೆ ತೆಗೆದುಕೊಂಡಿತು.ವಾಪಸ್ಸು ಮನೆಗೆ ಬಂದಾಗ, ಅದೇ ಗುಡಿಸಲು, ಮತ್ತು ಅಡುಗೆ  ಮಾಡುತ್ತಿದ್ದ ಹೆಂಡತಿ ಗಂಡ ನನ್ನು ಆದರದಿಂದ ಬರಮಾಡಿಕೊಂಡಳು, ಅವರು ನಂತರ ಸುಖವಾಗಿ ಬಾಳಿದರು."ಅತಿಯಾಸೆ ಗತಿಕೇಡು, ದುರಾಸೆ ತರುವುದು ನಿರಾಸೆ".


ಮಕ್ಕಳೆ ಅರ್ಥವಾಯಿತಲ್ಲವೆ, "ಆಸೆ ಇರಬೇಕು, ದುರಾಸೆ ಇರಬಾರದು"

# ಉತ್ತಮ ಪುತ್ರ ಭೀಷ್ಮ

ಚಿತ್ರಕಥೆ

ಕಥೆ:ತೆಲುಗು ಮೂಲ : ಡಾ॥ ಕೆ. ರವಿಚಂದ್ರನ್
ಅನುವಾದ : ಶ್ರೀಮತಿ
ಚಿತ್ರಗಳು : ಕೆ.ತುಲಸೀ ಪ್ರಸಾದ್




14
ಆಕಾಶದಿಂದ ಹೂ ಮಳೆ ಸುರಿದಿದೆ. ದೇವತೆಗಳು ಪ್ರತ್ಯಕ್ಷರಾಗಿ ತನ್ನ ತಂದೆಯ ಸಂತೋಷಕ್ಕಾಗಿ ತನ್ನ ಸುಖವನ್ನು ಅಧಿಕಾರವನ್ನು ತ್ಯಾಗ ಮಾಡಿದ ದೇವವ್ರತನನ್ನು ಮೆಚ್ಚಿಕೊಂಡಿದ್ದಾರೆ.
ಭೀಷಣವಾದ ಪ್ರತಿಜ್ಞೆಯನ್ನು ಮಾಡಿದ ಕಾರಣಕ್ಕೆ ನೀನು ಭೀಷ್ಮನೆಂದು ಕರೆಯಲ್ಪಡುವೆ.
15
ದಾಸರಾಜನು ಸಂತಸದಿಂದ ಸತ್ಯವತಿಯನ್ನು ಶಂತನುವಿಗೆ ಕೊಟ್ಟು ಮದುವೆ ಮಾಡಲು ಒಪ್ಪಿ ಆಕೆಯನ್ನು ಭೀಷ್ಮನೊಂದಿಗೆ ಹಸ್ತಿನಾಪುರಕ್ಕೆ ಕಳುಹಿಸಿ ಕೊಟ್ಟಿದ್ದಾನೆ.
16
ಮಹಾಶಯರೇ, ಮಂತ್ರಿ ಸಾಮಂತಾದಿ, ಪುರಗಣ್ಯರೇ, ಏಕಪುತ್ರನು ಪುತ್ರಹೀನರಿಗೆ ಸಮಾನವಾದ್ದರಿಂದ ಇಷ್ಟು ವರ್ಷದ ನಂತರ ನನ್ನ ತಂದೆಯವರು ಮದುವೆಯಾಗುತ್ತಿರುವುದು ಎಲ್ಲರಿಗೂ ಆನಂದವಲ್ಲವೇ?
17
ಭೀಷ್ಮನು ಸತ್ಯವತಿ - ಶಂತನು ಯವರ ವಿವಾಹವನ್ನು ಏರ್ಪಡಿಸಿದ್ದಾನೆ.
18
ಎಲೈ ಮಗನೇ ! ಯಾವ ಪುತ್ರನೂ ತನ್ನ ತಂದೆಯ ಸಲುವಾಗಿ ಇಂತಹ ತ್ಯಾಗವನ್ನು ಮಾಡಿಲ್ಲ. ನಿನಗೆ ಇಚ್ಚಾ ಮರಣವನ್ನು ವರವಾಗಿ ನೀಡುತ್ತಿದ್ದೇನೆ.
19
ನಮೋ ತ್ಯಾಗರಾಜ ಭೀಷ್ಮ ! ನಮೋ ಪುಣ್ಯ ಪುರುಷ!
ಕೊಟ್ಟ ಮಾತಿಗೆ ಇಡೀ ಜೀವನವನ್ನೇ ಮುಡಿಪಾಗಿಟ್ಟ
ಆದರ್ಶ ಜೀವಿ! ನಮೋ ಅಖಿಲ ಪುರುಷ ! ನಿನ್ನ ಚರಿತ್ರೆ
ಭಾರತೀಯರಿಗೆ ಅನುಕರಣೀಯ ! ತಥಾಸ್ತು !
ಮುಂಬರುವ ಸಂಚಿಕೆಯಲ್ಲಿ ಶ್ರೀ ವೆಂಕಟೇಶ್ವರನ ಮತ್ತೊಂದು ದಿವ್ಯಲೀಲೆಯನ್ನು ದರ್ಶಿಸೋಣ...
ಸ್ವಸ್ತಿ

# ಕ್ವಿಜ್

-ನಿರ್ವಹಣೆ ಶ್ರೀಮತಿ.ಸೂರ್ಯವಂಶಿ

**ರಸಪ್ರಶ್ನೆಗಳು :**

1. ರಥಸಪ್ತಮಿಯಂದು ಯಾವ ದೇವರನ್ನು ಪೂಜಿಸುತ್ತೇವೆ?

1. ಸೂರ್ಯ 2. ಚಂದ್ರ
3. ವರುಣ 4. ವಾಯು

2. ರಥಸಪ್ತಮಿಯನ್ನು ಯಾವ ಹೆಸರಿನಿಂದಲೂ ಕರೆಯುತ್ತಾರೆ?

1. ಮಕರ ಸಂಕ್ರಮಣ 2. ಮಾಘ ಸಂಕ್ರಮಣ
3. ಸೂರ್ಯಜಯಂತಿ 4. ವರಾಹ ಜಯಂತಿ

3. ಸೂರ್ಯನಾರಾಯಣನ ರಥವನ್ನು ಎಷ್ಟು ಕುದುರೆಗಳು ಎಳೆಯುತ್ತವೆ?

1. ಆರು 2. ಎಂಟು
3. ಏಳು 4. ಐದು

4. ಸೂರ್ಯನ ರಥ ಸಾರಥಿಯ ಹೆಸರು ಏನು?

1. ಗರುಡ 2. ವಾಯು
3. ಅರುಣ 4. ವರುಣ

5. ಸೂರ್ಯನಾರಾಯಣನ ಪತ್ನಿಯ ಹೆಸರೇನು?

1. ಸಂಜ್ಞಾದೇವಿ 2. ತಾರಾ
3. ಭಾನುಮತಿ 4. ಶಚಿದೇವಿ

6. ರವಿಕುಮಾರ ಎಂದು ಪ್ರಸಿದ್ಧಿ ಪಡೆದ ದೇವತೆ ಯಾರು?

1. ಶನೇಶ್ವರ 2. ಮಹೇಶ್ವರ
3. ಚಂದ್ರ 4. ಬುಧ

7. ಸೂರ್ಯ ನಾರಾಯಣನ ಆರಾಧನೆಯಿಂದ ಮುಖ್ಯವಾಗಿ ದೊರೆಯುವ ಫಲವೇನು?

1. ಧನಸಂಪತ್ತು 2. ಆರೋಗ್ಯ ಸಂಪತ್ತು
3. ಜ್ಞಾನಸಂಪತ್ತು 4. ವಿದ್ಯಾಸಂಪತ್ತು

ಉತ್ತರಗಳು:
1)1 2)3 3)3 4)3 5)1 6)1 7)2

# ಚಿತ್ರಲೇಖನ

**ಈ ಗೊಂಬೆಗೆ ಬಣ್ಣವನ್ನು ತುಂಬಿರಿ.......**



**ಪಕ್ಕದಲ್ಲಿರುವ ಗೊಂಬೆಯನ್ನು ಕೆಳಗಿನ ಬಾಕ್ಸ್‌ನಲ್ಲಿ ಬರಿಯೋಣ...**



Edited and Published on behalf of T.T.Devasthanams by **Prof. K.Rajagopalan**, Phd.,
Chief Editor, T.T.D. and Printed at T.T.D. Press by **Sri P. Ramaraju**, M.A., Special Officer (Press & Publications), T.T.D. Press, Tirupati - 517 507.







ಲೋಕಕ್ಷೇಮಕ್ಕಾಗಿ ಕರೋನಾ ಅಂಟುವ್ಯಾಧಿಯ ನಿವಾರಣೆಗಾಗಿ ಪ್ರಾರ್ಥಿಸುತ್ತಾ 15-12-2020 ರಂದು
ತಿರುಪತಿ ಎಸ್. ವಿ. ವೇದ ವಿಶ್ವವಿದ್ಯಾಲಯದಲ್ಲಿ ನಡೆದ ಧನಪ್ರದ ಶ್ರೀ ಮಹಾವಿಷ್ಣು ಯಾಗದಲ್ಲಿ
ಪಾಲ್ಗೊಂಡ ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಡಾ॥ ಕೆ.ಎಸ್. ಜವಹರ್ ರೆಡ್ಡಿ ಐ.ಎ.ಎಸ್., ರವರು,
ಮತ್ತು ಅಡಿಷನಲ್ ಕಾರ್ಯನಿರ್ವಹಣಾಧಿಕಾರಿ ಶ್ರೀ ಎ.ವಿ. ಧರ್ಮಾರೆಡ್ಡಿಯವರು



10-01-2021 ರಿಂದ 14-01-2021 ರ ವರೆಗೆ
ಶ್ರೀ ಭೂದೇವಿ ಸಮೇತ ಶ್ರೀನಿವಾಸನಿಗೆ ನಡೆದ
ಶ್ರೀವಿಷ್ಣು ಬಿಲ್ವ ಪತ್ರಾರ್ಚನೆ ದೃಶ್ಯ




14-01-2021 ರಂದು ನಡೆದ ಶ್ರೀ ಗೋದಾಕಲ್ಯಾಣದಲ್ಲಿ ಪಾಲ್ಗೊಂಡ
ತಿ.ತಿ.ದೇ. ಕಾರ್ಯನಿರ್ವಹಣಾಧಿಕಾರಿ ಮತ್ತು
ಸಂಯುಕ್ತಕಾರ್ಯನಿರ್ವಹಣಾಧಿಕಾರಿಗಳು ಮತ್ತು ಸದಸ್ಯರು.




15-01-2021 ರಂದು ತಿರುಮಲೆಯಲ್ಲಿ ಸ್ವಾಮಿಯವರಿಗೆ ನಡೆದ ಪಾರ್ವೇಟು ಉತ್ಸವದಲ್ಲಿ ಪಾಲ್ಗೊಂಡ
ತಿರುಮಲೆ ಅಡಿಷನಲ್ ಕಾರ್ಯನಿರ್ವಹಣಾಧಿಕಾರಿ ಶ್ರೀ ಎ.ವಿ. ಧರ್ಮಾರೆಡ್ಡಿ ಯವರು ಹಾಗೂ ಇತರ ಉನ್ನತಾಧಿಕಾರಿಗಳು


ದೇವುನಿ ಕಡಪ
ಶ್ರೀ ಲಕ್ಷ್ಮೀವೇಂಕಟೇಶ್ವರ ಸ್ವಾಮಿಯವರ
ಬ್ರಹ್ಮೋತ್ಸವಗಳು
2021 ಫೆಬ್ರವರಿ
12 ರಿಂದ 21 ರ ವರೆಗೆ